ಫೋನ್ ನಂ 798 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೯] ಶನಿವಾರ ೩-೯-೫೦ [ಸಂಚಿಕೆ ೩೭

'ಆಜಾದ್' ಕಾಶ್ಮೀರದಲ್ಲಿ ಜನರ ದಂಗೆ

[illegible] ಚಿಕಿತ್ಸಾ ಕ್ರಮ

[illegible]

ಮೈಸೂರು ೧

[illegible]

ಪೆನ್ಸಿಲಿನ್ ಔಷಧದ ಅಂಗಡಿ ಜಪ್ತಿ

ಮೈಸೂರು ೩

ರಾಜಧಾನಿಯ 'ಮೈಸೂರು ಡ್ರಗ್ ಹೌಸ್' ಎಂಬ ಔಷಧಿ ವ್ಯಾಪಾರಿಗಳ [illegible]

ವಿದ್ಯಾರ್ಥಿ [illegible]

[illegible]

ಸಂಚು [illegible]

[illegible]

೫೨ರಲ್ಲಿ ೩ನೇ ಮಹಾಯುದ್ಧವೆಂದು ಯೋಗಿಯ ಭವಿಷ್ಯ

ಬರುವ ೧೯೫೨ ನೇ ಇಸ್ವಿಯಲ್ಲಿ ಮೂರನೆಯ ಮಹಾಯುದ್ಧವು [illegible] ಆರಂಭವಾಗಿ [illegible] ತಿಂಗಳ ಕಾಲ ನಡೆಯುವುದೆಂದು [illegible] ಜ್ಯೋತಿಷ್ಯರೂ ಯೋಗಿಗಳೂ ಆದ [illegible] ಜ್ಯೋತಿ ಶ್ರಿ [illegible]ನಂದ [illegible] ತಿಳಿಸುತ್ತಾರೆ. ಅವರು [illegible] ಬಲದ ಮೇಲೆ ಭವಿಷ್ಯವನ್ನು ನುಡಿಯುವರೆಂದು ಹೇಳಲಾಗಿದೆ.

ಭಾರತದ [illegible], ಇನ್ನು [illegible] ತಿಂಗಳಲ್ಲಿ [illegible] ವೆಂದೂ, ಭಾರತವು [illegible] ಯುದ್ಧದಿಂದ ತಪ್ಪಿಸಿಕೊಳ್ಳುವುದೆಂದೂ, ಅವರು ಹೇಳಿರುತ್ತಾರೆ. [illegible]

[illegible]

ಪಾರ್ಥನಾರಾಯಣ ಪಂಡಿತರ ನೇಮಕದ ಬಗ್ಗೆ ಪ್ರಶ್ನೆ

ಸದಸ್ಯರುಗಳಿಗೆ ವಿದ್ಯಾ ಸಚಿವರ ಉತ್ತರ

ಸ್ವಂ. ಸು ಫೋನ್] ಬೆಂಗಳೂರು ೨

ಶಾಸನ ಸಭೆಯಲ್ಲಿ ಈ ದಿನ ಶ್ರಿ ಹೆಚ್. [illegible] ರಿಗೆ ಉತ್ತರವೀಯುತ್ತಾ, [illegible] ಮಂತ್ರಿ ಶ್ರೀ [illegible] ಯೂನಿಯನ್ ಸರ್ಕಾರದವರೇ ಮೈಸೂರಿಗೂ [illegible] ಸಂಬಂಧವಾದ [illegible] ಅನ್ನು ಮಾಡಲಿದ್ದಾರೆಂದೂ, ಆ ಬಗ್ಗೆ [illegible] ತಿಂಗಳಲ್ಲಿ ಅವರು ಬಂದು [illegible] ಸಂಸ್ಥಾನಕ್ಕೆ [illegible] ರುವರೆಂದೂ, ಇಂದೇ [illegible] ಲಕ್ಷ ರೂ ಗಳನ್ನು ಸಾಲವಾಗಿ ಕೊಡುವ [illegible] ಮಾಡಲಾಗುವುದೆಂದೂ, [illegible] ಸಾಲವನ್ನು ಎತ್ತುವ ಸಂಭವವಿರುವುದೆಂದೂ ತಿಳಿಸಿದರು.

ಡಾ॥ ವೈ. ಪಾರ್ಥನಾರಾಯಣ ಪಂಡಿತರನ್ನು ಬೆಂಗಳೂರಿನ ಆಯುರ್ವೇದ ಶಾಲೆಯ ವೈದ್ಯಾಧಿಕಾರಿಗಳನ್ನಾಗಿ ನೇಮಿಸಿದ ಬಗ್ಗೆ ಶ್ರಿ [illegible] ಅನೇಕ ಪ್ರಶ್ನೆಗಳನ್ನು ಹಾಕಿದರು. [illegible]

"ಆಜಾದ್ ಕಾಶ್ಮೀರ" ಪ್ರದೇಶದಲ್ಲಿ ದಂಗೆ

'ಆಜಾದ್ ಕಾಶ್ಮೀರ' ಪ್ರದೇಶದಲ್ಲಿ [illegible]

ಹೋಟೆಲುಗಳಿಗೆ ಮತ್ತಷ್ಟು ಸಕ್ಕರೆ ಪೋಷಣೆ

ಬೆಂಗಳೂರು ೨

ಸಂಸ್ಥಾನದಲ್ಲಿರುವ ಹೋಟೆಲುಗಳಿಗೆ ಕೊಡಲಾಗುವ ಸಕ್ಕರೆಯ ಪ್ರಮಾಣದಲ್ಲಿ [illegible]

ಪಾಕಿಸ್ಥಾನದಲ್ಲೂ ಬ್ರಿಟಿಷ್ ರಾಜರಿಗೆ ನಿಷ್ಠಾ ವಚನವಿಲ್ಲ

ಪಾಕಿಸ್ಥಾನದ ಗವರ್ನರುಗಳು ಮಂತ್ರಿಗಳು, ಹೈಕೋರ್ಟು ಜಡ್ಜಿಗಳು ಇನ್ನು ಮುಂದೆ ೬ನೇ ಜಾರ್ಜರಿಗಾಗಲಿ, ಅವರ ಉತ್ತರಾಧಿಕಾರಿಗಳಿಗಾಗಲಿ ರಾಜಭಕ್ತಿ ಪ್ರಮಾಣ ವಚನವನ್ನು ತೆಗೆದುಕೊಳ್ಳುವುದಿಲ್ಲ ಈ ಬಗ್ಗೆ ಕೇಂದ್ರ ಗವರ್ನರ್ ಜನರಲ್ಲರು ಆಜ್ಞೆ ಹೊರಡಿಸಿ ಇನ್ನು ಮುಂದೆ ಅಲ್ಲಿನ ರಾಜ್ಯಾಂಗಕ್ಕೂ ಪಾಕಿಸ್ಥಾನ ಸಂಸ್ಥಾನಕ್ಕೂ ಪ್ರಮಾಣ ವಚನ ಕೈಗೊಳ್ಳಬೇಕೆಂದು ಸೂಚಿಸಿದ್ದಾರೆ

ಹರಿಕಥೆ

ರಾಜಧಾನಿಯ ಮಂಡಿ ಮೊಹಲ್ಲಾ ಲಕ್ಷ್ಮೀನಗುಡಿ ಬೀದಿಯಲ್ಲಿರುವ ರಾಮಲಿಂಗೇಶ್ವರ ಚೌಡೇಶ್ವರಿ ದೇವಾಲಯದಲ್ಲಿ ಈ ಸಂಜೆ ೬ ಗಂಟೆಗೆ ಶ್ರೀ ಸಂಬಂಧಮೂರ್ತಿಗಳಿಂದ "ಸೀತಾ ಕಲ್ಯಾಣ" ಎಂಬ ಕಥೆಯೂ, ಅಮ್ಮನವರಿಗೆ ಸೀತಾರಾಮರ ಅಲಂಕಾರವೂ, ಬರುವ ಸೋಮವಾರ ಸಂಜೆ ೬ಕ್ಕೆ ಗೋಕುಲಾಷ್ಟಮಿ ಪ್ರಯುಕ್ತ ಶ್ರೀ ಹೆಚ್ ಎಸ್ ಶಿವಲಿಂಗಸ್ವಾಮಿ ಇವರಿಂದ "ಶ್ರೀಕೃಷ್ಣಾವತಾರ" ಎಂಬ ಹರಿಕಥೆಯೂ, ಅಮ್ಮನವರಿಗೆ ಶ್ರೀಕೃಷ್ಣನ ಅಲಂಕಾರವೂ ಏರ್ಪಾಡಾಗಿವೆ

ರಘುಲಾಲ್ & ಕೊ॥
ಔಷಧ ವ್ಯಾಪಾರಿಗಳು,
ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧ ವ್ಯಾಪಾರಿಗಳು
70 ಅರ್ಕಾಟ್ ಶ್ರೀನಿವಾಸಾಚಾರ್ಲು ರಸ್ತೆ,
ಬೆಂಗಳೂರು

ಮಾರಾಟಕ್ಕಿದೆ

ಮೈಸೂರು ಬೆಂಗಳೂರು ರಸ್ತೆ, ಬನ್ನಿಯ ಮಂಟಪದ ಹತ್ತಿರ ಬ್ಯಾಂಡ್ ಸ್ಟಾಂಡಿಗೆ ಎದುರಲ್ಲಿ ಎರಡು ಕಟ್ಟಡಗಳನ್ನೊಳಗೊಂಡಿರುವ ಸುಮಾರು ೫೦೦೦ ಚದುರ ಗಜದ ಅತ್ಯುತ್ತಮವಾದ ಸ್ಥಳವು ಮಾರಾಟಕ್ಕಿದೆ.

ಇದು ಯಾವುದಾದರೂ ಕೈಗಾರಿಕೆಯ ಸ್ಥಾಪನೆಗೆ ಶಕ್ಯವಾಗಿದೆ

ಇಷ್ಟವುಳ್ಳವರು ಈ ಕೆಳಗಿನ ವಿಳಾಸಕ್ಕೆ ಪತ್ರ ವ್ಯವಹಾರ ಮಾಡಬಹುದು

ದಿ ಸೆಕ್ರೆಟರಿ,
ದಿ ಬಿಷೋಪ್ಸ್ ಹೌಸ್,
ಮೈಸೂರು

ಯುದ್ಧ ವೀರರಿಗೆ ಮಾಸಾಶನ

ದೇಶದ ಅತ್ಯುನ್ನತ ಸೈನಿಕ ಪ್ರಶಸ್ತಿಯಾದ ಪರಮ ವೀರ ಚಕ್ರ, ಸಾಮಾನ್ಯ ಪ್ರಶಸ್ತಿಗಳಾದ ಮಹಾ ವೀರ ಚಕ್ರ, ವೀರ ಚಕ್ರಗಳನ್ನು ಪಡೆದ ಯುದ್ಧವೀರರುಗಳಿಗೆ ಭಾರತ ಸರ್ಕಾರದವರು ತಿಂಗಳಿಗೆ ೫೦, ೩೦ ಮತ್ತು ೨೦ ರೂಗಳ ಸಂಭಾವನೆ ಕೊಡಲು ನಿರ್ಧರಿಸಿದ್ದಾರೆ ಅವನ್ನು ಪಡೆದವರು ಕಾಲವಾದರೆ ಅವರ ಪತ್ನಿಯರಿಗೆ ಕೊಡಲಾಗುವುದು

ಬಿರುದುಗಳ ನಿಷೇಧ

ಮಹಾ ಮಹೋಪಾಧ್ಯಾಯ, ಶಾಮ್ಸ್ ಉಲ್ ಉಲೇಮಾ, ಹಕೀಮ್ ಉಲ್ ಮುಲ್ಕ್, ವೈದ್ಯರತ್ನ ಇವೇ ಮುಂತಾದ ಬಿರುದುಗಳು ರಾಜ್ಯಾಂಗದ ವಿಧಿಗೆ ವಿರೋಧವಾಗಿರುವುದರಿಂದ ಅವುಗಳನ್ನು ಸರ್ಕಾರಿ ಪತ್ರವ್ಯವಹಾರಗಳಲ್ಲಿ ಉಪಯೋಗಿಸಲಾಗುವುದಿಲ್ಲವೆಂದು ಹೇಳಲಾಗಿದೆ

ಗುರುದೇವ ಹಾಲ್
ಶಿವರಾಂಪೇಟೆ ಮೈಸೂರು
ನವೀನವಾದ ಬಾರ್ಡರುಗಳಲ್ಲಿ
ಧರ್ಮಾವರಂ, ಕಂಚಿ ಸೀರೆಗಳು
ಹೊಸದಾಗಿ ಬಂದಿರುತ್ತವೆ
ಒಂದೇ ಸಮಯವಿಟ್ಟು ಭೇಟಿ ಕೊಡಿ

ಅಮೇರಿಕದ ಸರ್ಕಾರದ ವರ್ಗಾವಣೆಗೆ ಏರ್ಪಾಡು

ಜನರ ಸಂಸ್ಥೆಯೊಂದಾಗಿದ್ದಾಗ ಅಮೇರಿಕದ ರಾಜಧಾನಿಯಲ್ಲಿನ ಸರ್ಕಾರಿ ಕಛೇರಿಗಳನ್ನು ಅಣು ಬಾಂಬುಗಳ ಧಾಳಿಯಿಂದ ರಕ್ಷಿಸಲು, ಅವನ್ನು ವಾಷಿಂಗ್ಟನ್ನಿನಿಂದ ಹೊರಕ್ಕೆ ಸಾಗಿಸಲು ೧೪ ಕೋಟಿ ಪೌಂಡುಗಳನ್ನು ಅಲ್ಲಿನ ಕಾಂಗ್ರೆಸ್ ಸಭೆಯು ಮಂಜೂರು ಮಾಡಿದೆ ಇದಕ್ಕಾಗಿ ಬೇರೆ ಕಟ್ಟಡಗಳನ್ನು ಕಟ್ಟಬೇಕಾಗುತ್ತದೆ.

ಬ್ರಿಟನ್ನಿನಲ್ಲಿ ಬಲವಂತದ ಸೈನಿಕ ಸೇವೆ

ಬ್ರಿಟನ್ನಿನಲ್ಲಿರುವ ಜನರು ಬಲವಂತವಾದ ಸೈನಿಕ ಸೇವೆಯನ್ನು ಸಲ್ಲಿಸುವುದನ್ನು ೧೮ ತಿಂಗಳಿಂದ ೨ ವರ್ಷಗಳಿಗೆ ಹೆಚ್ಚಿಸಲಾಗಿದೆ

ಹೊಸದಾದ
ಸಾದಾ ಸೀರೆಗಳು
ಮತ್ತು ಚಿಲ್ಲರೆ ಸಾಮಾನುಗಳ
+ ಹರಾಜು +
2-9-50ನೇ :: ಭಾನುವಾರ
ಬೆಳಿಗ್ಗೆ ೧೦ ಘಂಟೆಗೆ
ಸಿಟಿ ಆಕ್ಷನೀರಿಂಗ್ ಕೋ.
ಜಗನ್ಮೋಹನ ಬಂಗ್ಲೆ ಬಳಿ, ಮೈಸೂರು

ಉಪಾಧ್ಯಾಯನಿಂದ ಮುಂದಿನ ಜನಾಂಗದ ಏಳಿಗೆ

ರಾಜಧಾನಿಯ ಲಕ್ಷ್ಮೀಪುರಂ ಬಾಲಕರ ಮಾಧ್ಯಮಿಕ ಶಾಲೆಯ ಉಪಾಧ್ಯಾಯ ಸಂಘದ ಆಶ್ರಯದಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಟಿ ಎಸ್ ಕೃಷ್ಣರಾಯರು ಮೊನ್ನೆ ಭಾಷಣ ಮಾಡಿ, ಸರಳ ಜೀವಿಯೂ, ಶಾಂತಿ ಪ್ರಿಯನೂ, ಸದಾ ಸಂತುಷ್ಟನೂ ಆದ ಉಪಾಧ್ಯಾಯನು ಬಾಲಕರಿಗೆ ಮಾರ್ಗದರ್ಶಕನಾಗಿ ಅವರನ್ನು ಮುಂದಿನ ಸತ್ಪ್ರಜೆಗಳನ್ನಾಗಿ ಮಾಡಿ ದೇಶದ ಏಳಿಗೆಯನ್ನು ಸಾಧಿಸಬಲ್ಲನೆಂದು ಹೇಳಿದರು ರಾಜ ಪ್ರಭಾಕರ ಮತ್ತು ಅವರ ಸುನೀತರವರಿಂದ ಶ್ರೀಯುತ ಪ್ರಾರ್ಥನೆಯು ನಡೆಯಿತು

ಶಾರದಾ ಪೂಜೆ

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಸಂಗೀತ ಹಿಂದೀ ಸಮಾಜದ ಆಶ್ರಯದಲ್ಲಿ ಪ್ರವೇಶ ಪತ್ರ ವಿತರಣೋತ್ಸವದ ಅಂಗವಾಗಿ ಮೊನ್ನೆ ಶ್ರೀ ಕೆ ಶ್ರೀನಿವಾಸಮೂರ್ತಿಯವರ ಅಧ್ಯಕ್ಷತೆಯಲ್ಲಿ ಶಾರದಾ ಪೂಜೆಯು ವಿಜೃಂಭಣೆಯಿಂದ ನಡೆಯಿತು. ಶ್ರೀನಿವಾಸಗಳಾದ ಎಂ ಆರ್ ಶೀ[illegible] ಮತ್ತು ಎಸ್ ವಿಶಾಲಾಕ್ಷಮ್ಮನವರುಗಳಿಂದ ಸಂಗೀತವೂ ನಡೆಯಿತು

॥ಶ್ರೀ॥
ಗಣೇಶ ಟಾಕೀಸ್
2-9-50ರಿಂದ ಪ್ರತಿ ದಿನ 3 ಆಟಗಳು
ವಾಹಿನಿಯವರ ತೆಲುಗು ಚಿತ್ರ
ಸುಮಂಗಲಿ
ಪಾತ್ರ:- ನಾಗಯ್ಯ, ಲಿಂಗಮೂರ್ತಿ,
ಕುಮಾರಿ ಮತ್ತು ಮಾಲತಿ

ರಾಜಕಮಲ್
ಮೈಸೂರು
1-9-50ರಿಂದ .. ಅಮೋಘ ಪ್ರಾರಂಭ
ದಿನವಹಿ 3 ಆಟಗಳು
ಫಿಲ್ಮಿಸ್ತಾನರವರ ಹಿಂದಿ ಚಿತ್ರ
ಷಹೀದ್
ಪಾತ್ರಗಳು:- ಕಾಮಿನಿಕೌಶಲ್, ಲೀಲಾ ಚಿಟ್ನಿಸ್, ದಿಲೀಪ್ ಕುಮಾರ್,
ಚಂದ್ರಮೋಹನ್

—. ಬೆಳಗಿನ ಪ್ರದರ್ಶನ —
2-9-50 ರಿಂದ 2 ದಿನ ಮಾತ್ರ
*** ನಾರಿ ***
(ಹಿಂದಿ)
ಪಾತ್ರ:— ಲಲಿತಾ ಪವಾರ್

ರಸಿಕರಿಗೆ ಅಚ್ಚುಮೆಚ್ಚಾದ ಜವಳಿಯಂಗಡಿ
ಮೈಸೂರು ಸಿಲ್ಕ್, ಕ್ರೇಪ್-ಜಾರ್ಜೆಟ್ ಸೀರೆಗಳು
ಧರ್ಮಾವರದ [illegible] ಸೀರೆಗಳು ಪೂನಾ, ನಾಗಪೂರ್ ಸೀರೆಗಳು.
ಎಂ. ಪಿ. ಭೋಜಯ್ಯ ಬಿ ಎ & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

1-9-50ರಿಂದ :: ದಿನವಹಿ 3 ಆಟಗಳು
ಮೈಸೂರು — ಬೆಂಗಳೂರು
ರಣಜಿತ್ ಮತ್ತು ಸಾಗರ್
ಚಿತ್ರ ಮಂದಿರಗಳಲ್ಲಿ
ಮನಮೋಹಕ ಸಂಗೀತ, ಮನ ಕರಗುವ ಕಥೆಯಿಂದ
ಕೂಡಿದ ಹೃದಯ ವಿದ್ರಾವಕ ನಾಟಕ
ವರ್ಮಾರವರ ಹಿಂದಿ ಚಿತ್ರ
ರೂಮಾಲ್ - ROOMAL
ಪಾತ್ರ:- ಶರೀಫಾ, ರೆಹಮಾನ್, ಕೈಲಾಶ್, ಜೀವನ್ ಮುಂತಾದವರು

Edited, printed and published by A R Nagarajan, at Sadhvi Press D Subbiah Road, Mysore

5, 6, 8, 9 ಗಜದ ಪ್ರಿಂಟೆಡ್ ವಾಯಿಲ್ ಸೀರೆಗಳು
ಒಳ್ಳೆ ಡಿಸೈನುಗಳಲ್ಲಿ ಬಂದಿವೆ ಬಂದು ನೋಡಬೇಕಾಗಿ ವಿನಂತಿ ಬಾಹುಸಾರ್ ಕಂಪೆನಿ, ಬ್ಯಾಂಕು ರೋಡು, ಮೈಸೂರು

From 3-9-50 Double Programme ! Daily 3 Shows
ಪ್ರಭುದೇವ್ ಟಾಕೀಸ್ : Prabhudev Talkies
The first and the best Glorious Technicolour German Picture on the Silver Screen
'GIRL OF MY DREAM' & 'BALLERINA'
ಗರ್ಲ್ ಆಫ್ ಮೈ ಡ್ರೀಂ ಮತ್ತು ಬಲೆರಿನಾ

ರಿಜಿ. ನಂ. 702 WEEKLY EDITION ಸಂಪಾದಿತ ಪತ್ರಿಕೆ ೬ ಪುಟ

ಸಾಧ್ವಿ

ಸಂಪುಟ ೧೪] ಶುಕ್ರವಾರ ೧-೯-೫೦ [ಸಂಚಿಕೆ ೬

- ಬೆಲೆ ಹತೋಟಿಗೆ - ರಾಷ್ಟ್ರಾಧ್ಯಕ್ಷರ ಶಾಸನ

ಪ್ರಾಚೀನ ಜ್ಞಾನದೊಡನೆ ಆಧುನಿಕ ಸಂಶೋಧನೆಯ ಸಮನ್ವಯ

ಮದ್ರಾಸಿನ ನ್ಯಾಯಮೂರ್ತಿ ರಾಜಮನ್ನಾರರ ಭಾಷಣ

ಮೈಸೂರು ೩.

ಶ್ರೀ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರವರ ರಜತೋತ್ಸವದ ಸ್ಮಾರಕಾರ್ಥವಾಗಿ ಮೈಸೂರು ವಿಶ್ವ ವಿದ್ಯಾಲಯದ ಡಿಸ್ಟ್ರಿಕ್ಟ್ ಶ್ರೀ ವಿ ಸುಬ್ರಹ್ಮಣ್ಯ ಅಯ್ಯರ್ ರವರಿಂದ ಸ್ಥಾಪಿತವಾಗಿರುವ ಭಾಷಣ ಮಾಲೆಯ ಅಂಗವಾಗಿ ಈ ಸಾರಿ ಮದ್ರಾಸ್ ಹೈಕೋರ್ಟಿನ ಪ್ರಧಾನ ನ್ಯಾಯಾಧೀಶರಾದ ಶ್ರೀ ಪಿ. ವಿ ರಾಜಮನ್ನಾರ್‌ರವರು ನಿನ್ನೆ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಮಹಾರಾಜಾ ಕಾಲೇಜಿನ ಆವರಣದಲ್ಲಿ ಭಾಷಣ ಮಾಡಿದರು. ವೈಸ್ ಛಾನ್ಸೆಲರಾದ ಡಾ|| ಸಿ ಆರ್ ರೆಡ್ಡಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು

ಶ್ರೀ ರಾಜಮನ್ನಾರರು ಪ್ರಾಚೀನ ವಿಜ್ಞಾನ ಮತ್ತು ಆಧುನಿಕ ಸಂಶೋಧನೆಯ ವಿಷಯವಾಗಿ ಭಾಷಣ ಮಾಡಿ ಈ ಕೆಳಗೆ ಕಂಡಂತೆ ತಿಳಿಸಿದರು —

ಭಾರತದ ಸಂಸ್ಕೃತಿಯಲ್ಲಿ ಸ್ವಲ್ಪವೂ ತಿರುಳಿಲ್ಲವೆಂಬ ಅಭಿಪ್ರಾಯವನ್ನು ಲಾರ್ಡ್ ಮೆಕಾಲೇ ಮುಂತಾದ ಹಲವು ಆಂಗ್ಲೇಯ ಮುಖಂಡರು ಪ್ರಚಾರ ಮಾಡುತ್ತಿದ್ದರು ಅದನ್ನೇ ನಂಬಿ ಹಲವಾರು ಭಾರತೀಯರೂ ಸಹಾ ನಮ್ಮ ದೇಶದ ಸಂಸ್ಕೃತಿಯನ್ನು ಉದಾಸೀನ ಭಾವದಿಂದ ಕಾಣುತ್ತಾ ಪಾಶ್ಚಿಮಾತ್ಯರ ಪ್ರಶಂಸೆಯಲ್ಲಿ ತೊಡಗುತ್ತಿದ್ದರು. ಇತ್ತಲಾಗಿ ನಮ್ಮ ಸಾಹಿತ್ಯ, ಸಂಸ್ಕೃತಿ ಮತ್ತು ನಾಗರೀಕತೆಗಳಲ್ಲಿ ಇಲ್ಲದ ವಿಚಾರವೇ ಇಲ್ಲವೆಂದೂ ಕಡ ಹೇಳುತ್ತಾ, ವೇದ, ಪುರಾಣಗಳಲ್ಲಿ ಸಮಸ್ತವೂ ಇರುವುವೆಂದು ವಾದಿಸುತ್ತಿದ್ದ ಅಭಿಮಾನಿಗಳ ತಂಡವೂ ಬೆಳೆಯುತ್ತಾ ಬಂತು ಅಣು ಬಾಂಬು ಮತ್ತು ವಿಮಾನಗಳೂ ಸಹ ರಾಮಾಯಣ, ಮಹಾಭಾರತಗಳ ಕಾಲದಲ್ಲಿ ಇದ್ದುವೆಂದು ಹೇಳುವವರ ಸಂಖ್ಯೆ ಸಹ ಬೆಳೆಯತೊಡಗಿತು. ಆದರೆ ನಮ್ಮ ಪ್ರಾಚೀನ ವಿಜ್ಞಾನದಲ್ಲಿರುವ ವಿಶೇಷ ಮಹತ್ವದ ಅಂಶಗಳನ್ನು ಆಧುನಿಕ ವಿಜ್ಞಾನದ ಒರೆಗಲ್ಲಿನಿಂದ ಪರೀಕ್ಷಿಸಿ-ಅವುಗಳ ಮಹತ್ವ ಹೆಚ್ಚಾಗಿ ಪ್ರಕಾಶಪಡಿಸುವ ಸಾಧನ ಮಾತ್ರ ಅತಿ ವಿರಳವಾಗಿದ್ದರು. ಈ ಬಗೆಯ ಸಂಶೋಧನೆಯನ್ನು ನಡೆಸಿ ನಮ್ಮ ಸಂಸ್ಕೃತಿಗೆ ಹೊಸ ಬೆಳಕನ್ನು ಬೀರುವವರ ಸಂಖ್ಯೆಯು ಹೆಚ್ಚುವುದು ಅಗತ್ಯವಾಗಿದೆ

ಆಧುನಿಕ ವಿಜ್ಞಾನದಲ್ಲಿ ಬಾಹ್ಯ ಪ್ರಪಂಚ ಮತ್ತು ಪ್ರಕೃತಿಯ ಶಕ್ತಿಗಳ ಮೇಲಿನ ಹತೋಟಿಯನ್ನು ಪಡೆಯಲು ಮಾನವನು ಮಾಡುವ ಮಹಾ ಪ್ರಯತ್ನಗಳ ನಮ್ಮೆಲ್ಲರಿಗೂ ವಿದಿತವಾಗಿವೆ ಆದರೆ ಮನುಷ್ಯನೊಳಗಿರುವ ಅಂತರ್ಗತವಾದ ಶಕ್ತಿಗಳನ್ನು ವಿಕಾಸ ಪಡಿಸುವ ಪ್ರಯತ್ನಗಳು ಮಾತ್ರ ವಿರಳವಾಗಿವೆ ಇವುಗಳನ್ನು ಬೆಳೆಸುವುದೇ ಪ್ರಾಚೀನ ಭಾರತದ ಸಂಸ್ಕೃತಿಯ ಗುರಿಯಾಗಿತ್ತು ಯೋಗಸಾಧನೆಯೇ ಇದಕ್ಕಾಗಿ ಅವರು ಅನುಸರಿಸಿದ ಮಾರ್ಗ ಈ ಸಾಧನೆಯಿಂದ ದೇಹದ ಸಕಲ ಶಕ್ತಿಗಳೂ ಬೆಳೆಯುವುದಲ್ಲದೇ, ಜನಸಾಮಾನ್ಯರಲ್ಲಿ ಐಕ್ಯಗೊಳ್ಳುವ ಹಾಗೂ ಗೋಚರಿಸಲ್ಪಡದಿರುತ್ತದೆ ಮನಸ್ಸಿನ ಶಕ್ತಿಯಿಂದ ಸಾಧಿಸಲಾಗದೇ ಇರುವ ಕಾರ್ಯಗಳು ಯೋಗ ಶಕ್ತಿಯಿಂದ ಸಾಧ್ಯವಾಗುತ್ತವೆ ಮನಸ್ಸನ್ನು ಸಂಪೂರ್ಣವಾಗಿ ಹತೋಟಿಗೆ ತಂದು ಆತ್ಮಶಕ್ತಿಯನ್ನು ಬೆಳೆಸುವುದೇ ಯೋಗದ ಉದ್ದೇಶ

ಪ್ರಪಂಚದ ಮುದ್ಧಗಳೂ ಕಲಹ ಕಷ್ಟ ನಿಷ್ಠುರಗಳೂ ಮಾನವನ ಮನಸ್ಸಿನಲ್ಲಿ ಉತ್ಪನ್ನವಾಗುವ ಕಲ್ಮಷದಿಂದ ಹುಟ್ಟುವುವೆಂದು ವಿಶ್ವ ಸಂಸ್ಥೆಯ ಪ್ರಣಾಳಿಕೆಯಲ್ಲೂ ಘೋಷಿಸಲಾಗಿದೆ ಈ ಕಲ್ಮಷವನ್ನು ನಿವಾರಿಸಿ ಜಗತ್ತಿನ ಶಾಂತಿಯನ್ನು ಸಾಧಿಸಬೇಕಾದರೆ ಯೋಗಸಾಧನೆಯು ಮಾನವರಿಗೆ ವಿಶೇಷ ಸಹಕಾರಿಯಾಗುವುದರಲ್ಲಿ ಸಂದೇಹವಿಲ್ಲ

ಕಣ್ಣಿಗೆ ಕಾಣದ ವಿಷಯಗಳೆಲ್ಲ ಸುಳ್ಳೆಂದು ಹೇಳುವ ಕಾಲವು ಕಳೆದುಹೋಯಿತು ಇಂದ್ರಿಯಗಳಿಗೆ ಗೋಚರವಾಗದ ವಿಷಯಗಳನ್ನು ಅಲ್ಲಗಳೆಯುವುದೂ ಸಹಾ ಸಾಧ್ಯವಿಲ್ಲವಾಯಿತು ಆಧುನಿಕ ವಿಜ್ಞಾನದ ಸಂಶೋಧನೆಯಲ್ಲೂ ಸಹ ಅನೇಕ ಸೂಕ್ಷ್ಮ ಶಕ್ತಿಗಳ ಅರಿವು ಹೊಸ ಹೊಸದಾಗಿ ಉಂಟಾಗುತ್ತಿದೆ. ಪ್ರಕೃತಿಯ ಮೇಲಿನ ವಿಜಯದಿಂದ ಅನೇಕ ಆತ್ಮ ಸಾಧನೆಗಳನ್ನು ವಿಜ್ಞಾನವು ಮಾಡಿರುವುದೇನೋ ನಿಜ ಆದರೆ ಮನುಷ್ಯನ ದೇಹ, ಮನಸ್ಸು, ಬುದ್ಧಿ ಮತ್ತು ಸೂಕ್ಷ್ಮ ಶರೀರಗಳಿಗೆ ಸಂಬಂಧಪಟ್ಟ ಗಹನವಾದ ವಿಷಯಗಳನ್ನು ಯೋಗಸಾಧನೆಯಿಂದಲೇ ಅರಿಯಬೇಕು

ಯೋಗಾಸನಗಳಿಂದ ಶರೀರ ಮತ್ತು ಮನಸ್ಸುಗಳ ಮೇಲೆ ಉಂಟಾಗುವ ಮಹತ್ವದ ಪರಿಣಾಮಗಳನ್ನು ಪ್ರಧಾನಿ ಪಂಡಿತ ನೆಹರೂರವರೂ ಸಹ ಅನುಭವಪೂರ್ವಕವಾಗಿ ಮುಕ್ತ ಕಂಠದಿಂದ ಹೊಗಳುತ್ತಾರೆ ಇತರ ಹಲವು ಜನರ ಅಭ್ಯಾಸದಿಂದಲೂ ಸಹ ನಾವು ಅನೇಕ ಪ್ರಯೋಜನಗಳನ್ನು ಪಡೆಯಬಹುದು ಅಷ್ಟ ಸಿದ್ಧಿಗಳೂ ಸಹ ಯೋಗ ಸಾಧನೆಯಿಂದಲೇ ಲಭಿಸುವುವು

ಶರೀರ ಮನಸ್ಸು ಮತ್ತು ಆತ್ಮಗಳಿಗೆ ವಿಕಾಸವನ್ನುಂಟು ಮಾಡುವ ಈ ಬಗೆಯ ಉತ್ತಮ ಶಿಕ್ಷಣ ಪದ್ಧತಿಯನ್ನು ಆಧುನಿಕ ವಿಜ್ಞಾನ ಕ್ರಮಗಳಿಗೆ ಅಳವಡಿಸಿ ನಮ್ಮ ವಿಶ್ವ ವಿದ್ಯಾನಿಲಯಗಳಲ್ಲಿ ಆಚರಣೆಗೆ ತರುವುದು ಅತ್ಯಂತ ಅವಶ್ಯಕ

ಆತ್ಮ ವೃತ್ತಿಯನ್ನು ನಿರೋಧ ಮಾಡಿ

ಕೊರಿಯಾ ಯುದ್ಧ ನಿಲ್ಲಲು ಟ್ರೂಮನ್ನರ ಹೊಸ ಕಲಹ

ಕೊರಿಯಾ ಯುದ್ಧವನ್ನು ನಿಲ್ಲಿಸುವಂತೆ ಮಾಡಲು ಅಮೇರಿಕದ ಅಧ್ಯಕ್ಷ ಟ್ರೂಮನ್ನರು ೮ ಅಂಶಗಳ ಯೋಜನೆಯನ್ನು ತಯಾರಿಸುತ್ತಾರೆ. ವಿಶ್ವ ಸಂಸ್ಥೆ ಮೂಲಕ ಶಾಂತಿ ಮತ್ತು ಭದ್ರತೆಗಾಗಿ ಪ್ರಯತ್ನ, ಸ್ವತಂತ್ರ ಮತ್ತು ಸಂಯುಕ್ತ ಕೊರಿಯದ ಸ್ಥಾಪನೆ, ಈಗ ನಡೆಯುತ್ತಿರುವ ಯುದ್ಧದ ವ್ಯಾಪ್ತಿ ಹೆಚ್ಚದಂತೆ ಮಾಡುವುದು, ವಿಶ್ವ ಸಂಸ್ಥೆ ಸೈನ್ಯಗಳಿಗೆ ವಿರೋಧವಾಗಿ ಚೀಣಾ ಸೇರದಂತೆ ಅಲ್ಲಿನ ಜನರನ್ನು ಪ್ರಾರ್ಥಿಸುವುದು, ಫಾರ್ಮೋಸಾ ಸಮಸ್ಯೆಗೆ ಅಂತರರಾಷ್ಟ್ರೀಯ ಪರಿಹಾರ ಕಲ್ಪಿಸುವುದ, ಪೂರ್ವ ದೇಶಗಳಿಗೆ ಸ್ವಾತಂತ್ರ್ಯ ನೀಡುವುದು, ಆಕ್ರಮಣ ಮತ್ತು ನಿಮಾರಕ ಯುದ್ಧಕ್ಕೆ ವಿರೋಧ ಮಾಡುವುದು, ಶಾಂತಿಗಾಗಿ ಎಲ್ಲ ಶಕ್ತಿಗಳನ್ನೂ ಕೇಂದ್ರೀಕರಿಸುವುದು-ಇವೇ ಮುಂತಾದ ಕಲಹಗಳನ್ನು ಅವರು ಮಾಡಿರುತ್ತಾರೆ

ಬೊಂಬಾಯಿ ನಗರದ ಮೇಲೆ ಸಾಮೂಹಿಕ ದಂಡ

ಮೊನ್ನೆ ಬೊಂಬಾಯಿಯಲ್ಲಿ ನಡೆದ ಮುಷ್ಕರದ ಸಂಬಂಧವಾಗಿ ಆಸ್ತಿಪಾಸ್ತಿಗಳ ನಷ್ಟವಾದ ಪ್ರದೇಶದ ಜನರ ಮೇಲೆ ಸಾಮೂಹಿಕ ದಂಡವನ್ನು ಅಲ್ಲಿನ ಸರ್ಕಾರದವರು ವಿಧಿಸುವರಾಗಿದ್ದಾರೆ

ಸೂಚನೆ

ನಾಳೆ ಶ್ರೀ ಕೃಷ್ಣ ಜನ್ಮಾಷ್ಟಮಿ. ಪ್ರಯುಕ್ತ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ

—ವ್ಯವಸ್ಥಾಪಕ

ಜನ್ಮದಿನದಲ್ಲಿ ಐಕ್ಯಗೊಳ್ಳುವ ಸಮಾಧಿ ಸ್ಥಿತಿಯೇ ಯೋಗದ ಮುಖ್ಯ ಗುರಿ ಈ ಗುರಿಯನ್ನು ಎಲ್ಲರೂ ಲಕ್ಷ್ಯದಲ್ಲಿಟ್ಟು ಭಾರತದ ಪ್ರಾಚೀನ ವಿಜ್ಞಾನವನ್ನೂ ಆಧುನಿಕ ಸಂಶೋಧನೆಗಳನ್ನೂ ಸಮನ್ವಯಗೊಳಿಸಿ ನೂತನ ಸಮಾಜ ಜೀವನದ ಆದರ್ಶವನ್ನು ಜಗತ್ತಿನ ಶಾಶ್ವತ ಶಾಂತಿಯನ್ನು ಸಾಧಿಸಲೆಂದು, ಹಾರೈಸೋಣ

ವಿಶ್ವ ವಿದ್ಯಾಲಯದ ವೈಸ್ ಛಾನ್ಸೆಲರಾದ ಡಾ|| ಬಿ ಎಲ್ ಮಂಜುನಾಥ್‌ರವರಿಂದ ವಂದನಾರ್ಪಣೆಯಾದ ನಂತರಸಭೆಯು ಮುಕ್ತಾಯವಾಯಿತು

ಹನ್ನೊಂದು ಪದಾರ್ಥಗಳ ಬೆಲೆ ಹತೋಟಿ ಆಜ್ಞೆ

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ನಿನ್ನೆ ವಿಶೇಷಾಜ್ಞೆಯೊಂದನ್ನು ಹೊರಡಿಸಿ ಹಲವು ಸಾಮಾನುಗಳ ಬೆಲೆ ಹತೋಟಿ, ಅವುಗಳ ಸರಬರಾಜು ಮತ್ತು ಹಂಚಿಕೆ ಮುಂತಾದವುಗಳ ಬಗ್ಗೆ ಕಾರ್ಯಕ್ರಮಗಳನ್ನು ವಿಧಾಯಕ ಮಾಡಿರುತ್ತಾರೆ ಹತ್ತಿ ಮುಂತಾದ ಪದಾರ್ಥಗಳು, ಬೈಸಿಕಲ್, ಸೈಕಲ್ ಟೈರು ಮತ್ತು ಟ್ಯೂಬು, ವಿದ್ಯುಚ್ಛಕ್ತಿ ಬಲ್ಬು, ರೇಜರ್ ಬ್ಲೇಡು, ಕಾಸ್ಟಿಕ್ ಸೋಡಾ, ಸೋಡಾ ಆಷ್, ಚರ್ಮ ಹದ ಮಾಡುವ ಸಾಮಾನು, ಕಬ್ಬಿಣ ಪಟ್ಟಿಗಳು, ಮತ್ತು ಬಟ್ಟೆಗಳ ಆಕಾರವಾದ ಗ್ಲಾಸ್ಶೀಟು, ಕಾರ್ಡ್‌ಬೋರ್ಡ್ ಮತ್ತು ಗೋಟ್ ಹಾಲು, ಈ ಹನ್ನೊಂದು ಪದಾರ್ಥಗಳನ್ನು ವಿಶೇಷ ಆಜ್ಞೆಗೆ ಒಳಪಡಿಸಲಾಗಿದೆ ಜೂನ್ ೧೫ ಅಥವಾ ಕೊರಿಯಾ ಯುದ್ಧಕ್ಕೆ ೧೦ ದಿನಗಳ ಮುಂಚೆ ಈ ಪದಾರ್ಥಗಳ ಮೇಲೆ ಇದ್ದ ಬೆಲೆಯೇ ಈಗಲೂ ಪರಮಾವಧಿ ಬೆಲೆಯಾಗಿರಬೇಕೆಂದು ಗೊತ್ತು ಪಡಿಸಲಾಗಿದೆ

ಪ್ರತಿಯೊಬ್ಬ ವ್ಯಾಪಾರಿಯೂ ಮೇಲ್ಕಂಡ ಸಾಮಾನುಗಳ ಬೆಲೆ ಪಟ್ಟಿಯನ್ನು ಈ ತಿಂಗಳ ೧೦ ರೊಳಗೆ ಪ್ರದರ್ಶಿಸಬೇಕು ಹತ್ತು ರೂ ಮತ್ತು ಅದಕ್ಕೆ ಮೇಲ್ಪಟ್ಟು ಆಗುವ ಸಾಮಾನುಗಳ ರಶೀತಿಯನ್ನು ಕೊಡಬೇಕು ಅದಕ್ಕಿಂತ ಕಡಿಮೆಯಾದ ಸಾಮಾನುಗಳಿಗೆ ಚೀಟಿ ಕೇಳಿದರೆ ಕೊಡಬೇಕು ಕೊಳ್ಳುವವರ ಹೆಸರನ್ನು ನಮೂದಿಸಬೇಕು ಈ ವಿಧಿ ನಿಯಮಗಳನ್ನು ಉಲ್ಲಂಘಿಸಿದರೆ ಮೂರು ವರ್ಷ ಕಠಿಣ ಶಿಕ್ಷೆ, ದಂಡ ಅಥವಾ ಎರಡನ್ನೂ ವಿಧಿಸಲ್ಪಡುವುದು ಈ ದಿನಗಳಿಗೂ ಇದು ಅನ್ವಯಿಸುವುದು

ಟಂಡನ್‌ರವರು ಕಾಂಗ್ರೆಸ್ ಅಧ್ಯಕ್ಷರಾದರು

ಉತ್ತರ ಪ್ರದೇಶದ ಶಾಸನ ಸಭೆಯ ಮಾಜಿ ಅಧ್ಯಕ್ಷರಾದ ಬಾಬು ಪುರುಷೋತ್ತಮದಾಸ್ ಟಂಡನರವರು ಬರುವ ವರ್ಷಕ್ಕೆ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು. ಅವರಿಗೆ ೧೩೦೬ ಓಟುಗಳೂ, ಪ್ರತಿ ಸ್ಪರ್ಧಿಗಳಾದ ಆಚಾರ್ಯ ಕೃಪಾಲಾನಿಯವರಿಗೆ ೧೦೯೨ ಓಟುಗಳೂ, ಶಂಕರರಾವ್ ದೇವ್‌ರವರಿಗೆ ೨೦೨ ಓಟುಗಳೂ ಬಂದವು ೧೪ ಓಟುಗಳು ಕೆಟ್ಟು ಹೋದವು

ಹೊಸ ೧೫ ಆಣೆಯ ಕಾಗದದ ಕಾರ್ಡು

ಬರುವ ಅಕ್ಟೋಬರ್ ೨ನೇ ತಾರೀಖಿನಿಂದ ಹೊಸ ಕಾಗದದ ಕಾರ್ಡನ್ನು ಒಕ್ಕಣಾರ್ಥದ ಉಪಯೋಗಕ್ಕಾಗಿ ಮಾರಿಗೆ ಕೊಡಲಾಗುವುದು ಇವುಗಳ ಬೆಲೆ ೧॥ ಆಣೆ. ಈ ಕಾಗದಗಳಿಗೆ ೧॥ ಆಣೆ ಸ್ಟಾಂಪನ್ನು ಅಂಟಿಸಿ ಮಾರಲಾಗುವುದು

ಶ್ರೀ ಕೃಷ್ಣೋತ್ಸವ

ಈ ವರ್ಷವೂ ಸದಾ ನಡೆದುಕೊಂಡು ಬಂದಿರುವಂತೆ ಶ್ರೀ ಸಪ್ತ ಗೋಪಾಲ ಕೃಷ್ಣಸ್ವಾಮಿಯವರಿಗೆ ತಾ| ೪-೯-೫೦ ರ ಆಗಾಯಿ ಶ್ರೀ ಕೃಷ್ಣೋತ್ಸವವು ಪ್ರಾರಂಭವಾಗಿ ತಾ|| ೧೪-೯-೫೦ನೇ ಗುರುವಾರ ಪ್ರಾತಃಕಾಲ ಶ್ರೀ ಗೋವಿಂದ ರಾಜರ ಪಟ್ಟಾಭಿಷೇಕ ಮಹೋತ್ಸವವೂ ಸಾಯಂಕಾಲ ಶ್ರೀ ರುಕ್ಮಿಣೀ ಕಲ್ಯಾಣ ಮಹೋತ್ಸವವೂ ನಡೆಯುತ್ತವೆ.

ವಾರ ಭವಿಷ್ಯ

ತಾ|| ೩-೯-೫೦ರಿಂದ ೧೦-೯-೫೦ರ ವರೆಗೆ

ಮೇಷ — ಆರೋಗ್ಯ ಉತ್ತಮ. ಅದೃಷ್ಟ ದುರ್ಜನರಿಂದ ಪೀಡೆ. ಕೆಲವು ಕಾರ್ಯಗಳಲ್ಲಿ ನಿಧಾನ. ಸ್ತ್ರೀ ವರ್ಗದಿಂದ ತೊಂದರೆ. ವ್ಯಾಪಾರ, ಉದ್ಯೋಗ ಶಾಖೆಗಳಲ್ಲಿ ತೊಂದರೆ. ಖರ್ಚು. ತಾ|| ೬, ೭ ರಲ್ಲಿ ಕಲಹ, ಮಿತ್ರ ಸಹಾಯ.

ವೃಷಭ — ಎದುರಾಳಿಗಳ ಉಪಟಳ. ಪ್ರವಾಸ, ಮಿತ್ರರ ಭೇಟಿ. ಮನರಂಜನೆ. ವ್ಯಾಪಾರ ಉದ್ಯೋಗ ಶಾಖೆಗಳಲ್ಲಿ ಜಯ. ಸನ್ಮಾನ. ಧಾರ್ಮಿಕ ಕಾರ್ಯಗಳು. ಸ್ತ್ರೀ ವರ್ಗದಿಂದ ಸಹಾಯ. ತಾ|| ೭, ೮ ವ್ಯಸನ, ಭೋಜನ, ಮುಹೂರ್ತದ ಕಾರ್ಯಗಳು.

ಮಿಥುನ — ಆರೋಗ್ಯ ಉತ್ತಮ. ಚಿಂತೆ, ವ್ಯಾಪಾರ, ಉದ್ಯೋಗ ಶಾಖೆಗಳಲ್ಲಿ ಉತ್ತಮ. ಅತಿಥಿಗಳ ಆಗಮನ. ಖರ್ಚು. ತಾ|| ೩, ೪ ಅಪ್ತರಿಗೆ ಸಹಾಯ. ಖರ್ಚು.

ಕರ್ಕ — ತೊಂದರೆ, ಪ್ರಯಾಣ. ಶಾಖೆಯಲ್ಲಿ ಆರೋಗ್ಯ. ವ್ಯಾಪಾರ ವ್ಯವಹಾರಗಳಲ್ಲಿ ಕಲಹ. ತಾ|| ೬, ೭, ತ್ರಾಸ, ಖರ್ಚು, ಸಂತಾಪ.

ಸಿಂಹ — ಆರೋಗ್ಯ ಉತ್ತಮ. ಧಾರ್ಮಿಕ ಕಾರ್ಯಗಳು. ಶತ್ರುವಿನ ಉಪಟಳ. ಧನಲಾಭ. ವ್ಯಾಪಾರ ಉದ್ಯೋಗ ಶಾಖೆಗಳಲ್ಲಿ ಪ್ರಗತಿ. ವಿದ್ಯಾರ್ಥಿಗಳಿಗೆ ಯಶಸ್ಸು. ಆಪ್ತರ ಭೇಟಿ. ತಾ|| ೬, ೭ ಮಿತ್ರರಿಂದ ಲಾಭ, ಶುಭ ವಾರ್ತೆ.

ಕನ್ಯಾ — ಚಿಂತಾಭಾರ, ಧನಲಾಭ. ಮಿತ್ರರ ಭೇಟಿ. ವ್ಯಾಪಾರ ಉದ್ಯೋಗ, ಶಾಖೆಗಳಲ್ಲಿ ಉತ್ಸಾಹ. ಅಧಿಕಾರ ಲಾಭ. ಕಾರ್ಯ ಸಫಲ. ಸನ್ಮಾನ. ತಾ|| ೩, ೪, ೮ ಶುಭವಾರ್ತೆ, ಸಜ್ಜನರ ಸ್ನೇಹ.

ತುಲಾ — ನಿರುತ್ಸಾಹ. ಅನೇಕ್ಷಾ ಭಂಗ. ಅನಾರೋಗ್ಯ. ಚಿಂತೆ. ಧನ ನಷ್ಟ. ವ್ಯಾಪಾರ ಉದ್ಯೋಗ ಶಾಖೆಗಳಲ್ಲಿ ಕಲಹ. ಕಹಳ ಭಯ. ತಾ|| ೩, ೪ ಕಲಹ. ದುರ್ವಾರ್ತೆ.

ವೃಶ್ಚಿಕ — ಎದುರಾಳಿಗಳಿಂದ ತೊಂದರೆ. ಕಲಹ. ಕಳ್ಳತನ. ಅಪಘಾತ ಭಯ. ಮೇಲಧಿಕಾರಿಗಳೊಡನೆ ವಿರೋಧ. ನಷ್ಟ. ತಾ|| ೫, ೬, ೭ ಅಪಜಯ. ವೈಮನಸ್ಯ.

ಧನು — ಆರೋಗ್ಯ ಉತ್ತಮ. ಅನೇಕ ಧಾರ್ಮಿಕ ಮತ್ತು ಸಾರ್ವಜನಿಕ ಕಾರ್ಯಗಳು ಜರುಗುವುವು. ಮನಸ್ಸಿಗೆ ಶಾಂತಿ. ಶತ್ರುನಾಶ. ಧನಲಾಭ. ತಾ|| ೬, ೭ ಪ್ರವಾಸ. ಸಜ್ಜನರ ಸಹವಾಸ. ಸಂತೋಷ.

ಮಕರ — ಸಮಾಜ ಸೇವೆ. ಶಾಖೆಯಲ್ಲಿ ವೃದ್ಧಿ. ಎದುರಾಳಿಗಳ ಉಪಟಳ. ವ್ಯಾಪಾರ ವ್ಯವಹಾರಗಳಲ್ಲಿ ಧನಲಾಭ. ಆಪ್ತೇಷ್ಟರ ಭೇಟಿ. ಮನಸ್ಸಿಗೆ ಆನಂದ. ತಾ|| ೩, ೪, ೮ ಮುಹೂರ್ತದ ಕಾರ್ಯಗಳು. ವಾದ ವಿವಾದಗಳು. ಕೌಟುಂಬಿಕ ತೊಂದರೆಗಳು.

ಕುಂಭ — ಆರೋಗ್ಯ ಉತ್ತಮ. ಕಾರ್ಯ ಸಾಫಲ್ಯ. ವ್ಯಾಪಾರ, ಉದ್ಯೋಗ, ಶಾಖೆಗಳಲ್ಲಿ ಮುನ್ನಡೆ. ಎದುರಾಳಿಗಳ ಉಪಟಳ. ದೇಹಾಲಸ್ಯ. ತಾ|| ೩, ೪ ಧಾರ್ಮಿಕ ಕಾರ್ಯಗಳಿಗೆ ಖರ್ಚು.

ಮೀನ — ಸಾಧಾರಣ ಅನಾರೋಗ್ಯ. ಭಯ. ಕಲಹ. ದೇವರಲ್ಲಿ ಭಕ್ತಿ. ತಾ|| ೫, ೬, ೭ ಅನಾರೋಗ್ಯ. ಕಾರ್ಯ ಹಾನಿ. ವಿಯೋಗ.

ಸ್ವಾತಂತ್ರ್ಯೋತ್ಸವದ ಅಂಗವಾಗಿ ವಿಶೇಷ ಪೂಜೆ

ಕಳೆದ ತಿಂಗಳು ೧೫ನೇ ತಾ|| ಸ್ವಾತಂತ್ರ್ಯೋತ್ಸವದ ಸಲುವಾಗಿ ಸಂತೆಪೇಟೆಯ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿ ದೇವಾಲಯದಲ್ಲಿ ಅರ್ಚಕರಾದ ಶ್ರೀ ಟಿ. ಎಸ್. ಸುಬ್ಬರಾಯರು ಅಭಿಷೇಕ, ಅರ್ಚನೆ ನಿವೇದನ ಮುಂತಾದುವನ್ನು ಮಾಡಿ, ದೇಶದ ಸ್ವಾತಂತ್ರ್ಯವು ಚಿರಕಾಲ ಉಳಿಯಲೆಂದು ಪ್ರಾರ್ಥನಾ ಸೇವೆ ನಡೆಸಿದರು. ಅನೇಕ ಭಕ್ತಾದಿಗಳು ಇದ್ದು ಪ್ರಸಾದವನ್ನು ಸ್ವೀಕರಿಸಿದರು.

ರಾಜಕಮಲ್,
ಮೈಸೂರು

1-9-50ರಿಂದ ಆರಂಭ ಪ್ರಾರಂಭ
ದಿನವಹಿ 3 ಆಟಗಳು
ಫಿಲ್ಮಿಸ್ತಾನರವರ ಹಿಂದಿ ಚಿತ್ರ

ಷಹೀದ್

ತಾರಾಗಣ - ದಿಲೀಪ್‌ಕುಮಾರ್, ಕಾಮಿನಿ ಕೌಶಲ್, ಚಂದ್ರಮೋಹನ್

SRI GAYATHRI
TALKIES
Daily 3 Shows
From 3-9-50 For 3 Days
THE KID FROM TEXAS
(In Technicolor)

ಗುರುದೇವ ಹಾಲ್
ಶಿವರಾಂಪೇಟೆ ಮೈಸೂರು
ನೂತನವಾದ ಬಾಡಿಗೆಗೆ
ಧರ್ಮಾ ವ್ರತಂ... [illegible]
ಹೊಸದಾಗಿ ಒದಗಿಸಲ್ಪಟ್ಟಿದೆ
ಇಂದೇ ದಯವಿಟ್ಟು ಭೇಟಿ ಕೊಡಿ

WANTED
Bona-fide contractors for repairs to St Bartholomew's Church Building. For specifications call at the Wesley Press, Mysore on any day before the 9th Sept

ರಸಿಕರಿಗೆ ಅಚ್ಚುಮೆಚ್ಚಾದ ಜವಳಿಯೆಂದರೆ
ಮೈಸೂರು ಸಿಲ್ಕ್ ಕ್ರೇಪ್-ಜಾರ್ಜೆಟ್ ಸೀರೆಗಳು
ಧರ್ಮಾವರದ ಕೋರಾ ಸೀರೆಗಳು ಪೂನಾ, ಬೆಂಗಳೂರ್ ಸೀರೆಗಳು
ಎಂ. ವಿ. ಭೋಜಯ್ಯ ಬಿ. ಎ. & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

1-9-50ರಿಂದ :: ದಿನವಹಿ 3 ಆಟಗಳು
ಮೈಸೂರು — ಬೆಂಗಳೂರು
ರಣಜಿತ್ ಮತ್ತು ಸಾಗರ್
ಚಿತ್ರ ಮಂದಿರಗಳಲ್ಲಿ
ಮನಮೋಹಕ ಸಂಗೀತ, ಮಧುರ ಕಥೆಯಿಂದ ಕೂಡಿದ ಹೃದಯ ವಿದ್ರಾವಕ ನಾಟಕ
ವರ್ಮಾರವರ ಹಿಂದಿ ಚಿತ್ರ
ರೂಮಾಲ್ - ROOMAL
ಪಾತ್ರ-ಷೆಹನಾಜ್, ಶೇಖರ್, ಕೃಷ್ಣಾ, ಜೀವನ್ [illegible]

MYSORE CITY MUNICIPALITY
NOTICE

Sealed tenders will be received by the Municipal Engineer for the following works up to 4 P. M on 6-9-50

1. Giving Water connection to the newly costructed Bus Shelter for ladies and gents at Bus Terminus.
2. Improving the sheep-slaughter house at Jalapuri in Lashkar Mohalla.

Each tender must be accompanied with a chellan for having remitted Rs 25/ and Rs 65/ respectively in the Municipal Treasury as earnest money for the above works For full particulars please see the detailed notification on the office notice board.

(Sd.) T. K. MUKUNDAN,
Municipal Engineer.

ನೋಟೀಸು

ಚಾಮರಾಜನಗರದ ತಾಲ್ಲೋಕು ದೊಡ್ಡರಾಯ ಪೇಟೆ ಗ್ರಾಮದಲ್ಲಿರುವ ಮರೀಗೌಡರ ಕೆಂಪೇಗೌಡರ ಮಕ್ಕಳು ಸಿದ್ಧೇಗೌಡರು ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ.—

ಚಾಮರಾಜನಗರದ ತಾಲ್ಲೋಕು ದೊಡ್ಡರಾಯ ಪೇಟೆ ಗ್ರಾಮದಲ್ಲಿದ್ದ [illegible] ಹೆಂಡತಿ ತಮ್ಮ [illegible] ಗ್ರಾಮದಲ್ಲಿರುವ [illegible] ಮಗ [illegible] ಗೌಡರ ಕರಿ ಕೆಂಪೇಗೌಡರ ಮಗಳು [illegible] ಸರಿ [illegible] ಚಾಮರಾಜನಗರದ [illegible] ಗ್ರಾಮ [illegible] ಸೇರಿದ ಸರ್ವೆ ನಂಬರ್ (ಮೂರು ಎಕರೆ) [illegible] ಎರಡು ಎಕರೆ [illegible] ಗುಂಟೆ ಜಮೀನನ್ನೂ ಮತ್ತು [illegible] ದೊಡ್ಡರಾಯ ಪೇಟೆ ಗ್ರಾಮದಲ್ಲಿ ಮೇಲ್ಕಂಡ ರಾಜೇಗೌಡ ಸಿದ್ದಮ್ಮ [illegible] ದುಗಳು ವಾಸವಾಗಿದ್ದ ಎರಡು ಅಂಕಣ [illegible] ಮನೆಯನ್ನೂ, ಹೊರ ಬಾಗಿಲಿನಿಂದ [illegible] ದುವ ಹಕ್ಕನ್ನೂ ಮನೆಗೆ ಅಗತ್ಯ [illegible] ಮ ಜಮೀನಿನ ಹಿರೇಖಂಡವನ್ನೂ (ಒಂದು ಸಾವಿರದ ಏಳುನೂರ ರೂಪಾಯಿ) ಗಳಿಗೆ ಖರೀದಿಗೆ ಕೊಡುವುದಾಗಿಯೂ, ಕರಾರು ಮಾಡಿದ ಒಂದು ತಿಂಗಳ ಒಳಗಾಗಿ ಖರೀದಿ ಪತ್ರವನ್ನು ಬರೆದು ಕೊಡುವುದಾಗಿಯೂ, ಪತ್ರದ ಒಪ್ಪಿಕೊಂಡು ತಾ|| ೧೧ ೮ ೧೯೫೦ (ತಾ|| ಹದಿನಾಲ್ಕು) ತಿಂಗಳು ಎಂಟು ಸಾವಿರದ ಒಂಭೈನೂರು ಐವತ್ತನೆ ಇಸ್ವಿ [illegible] ಮುಂಗಡವನ್ನು ಬರೆದು ಕೊಟ್ಟು ಅದೇ ದಿವಸ (೨೦೦) ಎರಡುನೂರು ರೂಪಾಯಿಗಳನ್ನು, ಅಡ್ವಾನ್ಸ್ ಆಗಿ ತೆಗೆದುಕೊಂಡು ಉಳಿದ ಒಂದು ಸಾವಿರದ ಐದು ನೂರು ರೂಪಾಯಿಗಳನ್ನು ಖರೀದಿ ಪತ್ರ ಬರೆದುಕೊಟ್ಟು, ರಿಜಿಸ್ಟ್ರೇಷನ್ ಕಾಲದಲ್ಲಿ ತೆಗೆದುಕೊಳ್ಳುವುದಾಗಿ ಒಪ್ಪಿಕೊಂಡಿರುತ್ತಾರೆ [illegible] ಎಂಟು ದಿನಗಳಿಂದ ಮೇಲ್ಕಂಡ ಕರಾರಿನ ಪ್ರಕಾರ ಒಪ್ಪಿರುವಂತೆ ಖರೀದಿ ಪತ್ರವನ್ನು [illegible] ಮು ಕೊಡಲು ತಿರಸ್ಕರಿಸುವುದರಿಂದ ದೊಡ್ಡರಾಯ ಪೇಟೆ ಮಾ ಸಿದ್ಧೇಗೌಡ್ರು [illegible] ಗ ಚಿಕ್ಕ ಸಿದ್ಧೇಗೌಡರ ಸಹಾಯದಿಂದ ಮೇಲ್ಕಂಡ ರಾಜೇಗೌಡ, ಸಿದ್ದಮ್ಮ [illegible] ಕು ಪರಭಾರೆ ಮಾಡಿ ಬರೆಯುವ [illegible] ಮೇಲ್ಕಂಡ ಸ್ವತ್ತುಗಳನ್ನು ಪರಾಧೀನ ಮಾಡಲು ಪ್ರಯತ್ನ ಮಾಡುತ್ತಾ [illegible] ತ್ತಾರೆಂದು ತಿಳಿದುಬಂದಿರುತ್ತೆ. ಆದ್ದರಿಂದ ಮೇಲ್ಕಂಡ ರಾಜೇಗೌಡ, ಸಿದ್ದಮ್ಮ [illegible] ದುಗಳು ಪರಾಧೀನ ಮಾಡಿದರೂ ಇನ್ನಾವುದರೂ ಪರಾಧೀನ ಮಾಡಿಕೊಂಡರೂ ಸದರಿ ಪರಾಧೀನವು ನನ್ನನ್ನು ಬದ್ಧ [illegible] ಸುವುದಿಲ್ಲವೆಂದೂ ಈ ಪ್ರಕಾರ ಊರ್ಜಿ [illegible] ತವಾಗುವುದಿಲ್ಲವೆಂದೂ ಇದರಿಂದ ಒದಗ [illegible] ಎಲ್ಲಾ ನಷ್ಟ ಕಷ್ಟಗಳಿಗೂ ಅವರೇ ಜವಾ [illegible] ಬ್ದಾರರಾಗಬೇಕಾಗುತ್ತದೆಂದೂ, ಈ ವ [illegible] ಳ ಸಮಸ್ತ ಜನರಿಗೂ ತಿಳಿಯಪಡಿಸಿ [illegible]

ಸಿದ್ಧೇಗೌಡನ ರುಜು [illegible]

Edited, printed and published by A R Nagarajan at Sadhvi Press D Subbiah Road, Mysore

ಫೋನ್ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೯] ತಾ॥೧೯ನೇ ೨-೯-೪೮ [ಸಂಚಿಕೆ ೩೩

ಜಪಾನಿನಲ್ಲಿ ಪ್ರಚಂಡ ಬಿರುಗಾಳಿ ಅನಾಹುತ

ಸೋಮವಾರದ ಅಸ್ತಿ ಬಗ್ಗೆ ಮೈಸೂರಿಗೆ ಸೂಚನೆ

ಬೆಂಗಳೂರು ೪

ವಿದ್ಯಾಶಾಲಾ ಕಾಲೇಜುಗಳಲ್ಲಿ ೬ ನ ವಿದ್ಯಾರ್ಥಿಗಳಿಗೆ ಸ್ಥಾನಗಳನ್ನು ಕುರಿತ ಬಗ್ಗೆ ಅಲ್ಲಿನ ಸರ್ಕಾರದವರು ಗೊ ನಾಡಿದ್ದ ಸೋಮವಾರ ಅಸ್ತಿಯು ಮ್ಯಾಂಗದ ಫಲಿತಾಂಶಗಳ ಪ್ರಕಾರ ಅತ್ಯ ನಂದು ಅಲ್ಲಿನ ಹೈಕೋರ್ಟಿನವರು ಕೊ ರುವ ತೀರ್ಪಿನ ಕಡೆಗೆ ಕೇಂದ್ರ ಸರ್ಕಾರ ದವರು ಮೈಸೂರು ಸಂಸ್ಥಾನ ಸರ್ಕಾರದ ವರನ್ನು ಕೇಳಿದಿರುವುದಾಗಿ ಮುಖ್ಯ ಶ್ರೀ ಕೆ ಸಿ ರೆಡ್ಡಿಯವರು ನೆನ್ನೆ ಶಾ ನ ಸಭೆಯಲ್ಲಿ ತಿಳಿಸಿದರು. ವಿದ್ಯಾ ಶಾ ಗಳಿಗೆ ಪ್ರವೇಶ, ಸೌಲಭ್ಯಗಳನ್ನೂ ..ತಿಯು ಇರಕೊಡಕೆಂದೂ ತಿಳಿಸಿ, ಬಗ್ಗೆ ವಿವರಗಳನ್ನು ಕೇಳಲಾಗುವುದಾಗಿ ಮುಖ್ಯ ಮಂತ್ರಿಗಳು ಹೇಳಿದರು. ...ನದಲ್ಲಿ ಸೋಮವಾರ ಅಸ್ತಿಯು ... ದೂ, ಹಿಂದುಳಿದ ವರ್ಗದವರಿಗಾ ದರಂಪರಾನುಗತವಾದ ಹಲವು ನಡತ ... ಮಾಡಿರುವುದು ... ವಿಮರ್ಶಿಸಬೇಕಾಗಿದೆಯೆಂದೂ ... ನು

ಬರುವ ತಿಂಗಳಲ್ಲಿ ಮಹಾಯುದ್ಧವೆಂಬ ಭವಿಷ್ಯ

... ವ ಅಕ್ಟೋಬರ್ ತಿಂಗಳು ಮಧ್ಯ ... ತೃತೀಯ ಮಹಾ ಯುದ್ಧವು ... ಜರ್ಮನಿ ಮತ್ತು ಜಪಾನ್ ಗಳಲ್ಲಿ ... ಜಗತ್ತಿಗೆಲ್ಲಾ ಅದು ವ್ಯಾಪಿಸಿ, ... ಇಳಿಲ್ಲಿ ಪ್ರಜಾ ಪ್ರಭುತ್ವ ರಾಷ್ಟ್ರ ... ಜಯ ದೊರಕುವುದೆಂದು ನವ ದೆ ... ಜನೋಕ ಮತ್ತು ಜ್ಯೋತಿಷ್ಯ ... ಗಳ ಕಾಲೇಜು ಪ್ರೊಫೆಸರ್ ಆದ ಶಂ ... ಹಿಯರ್ಸರೂಪ ಶರ್ಮಾಜಿಯವರು ಭವಿ ... ವನ್ನು ನುಡಿದಿದ್ದಾರೆ

..ವಾಹ ಮಹೋತ್ಸವಗಳು

... ಮಲ್ಲಗೆಗೂಡಿನ ಶ್ರೀಮಠ ಮುಖ್ಯರನ್ನು ... ಸ್ವಾಮಿ ಪೆಳ್ಳಿಯವರು ತಮ್ಮ ಮಕ್ಕ ... ಶ್ರೀ ಎಂ ಪಿ ಕೃಷ್ಣೋರವರಿಗೆ ಕರೂರ ... ಗರಿಕೆಯು ಪ್ಯಾಕ್ಟರಿಯ ಆ ... ಎಸ್ ಸುಂದರಂ ಪಿಳ್ಳೆ ಯವರ ... ಕುಮಾರಿ ಸೌ॥ ಪ್ಯಾಂಬಾಳ ... ಕಂಪುಕೊಂಡು ಆರ್ಯ ರಸ್ತೆಯ ... ಶ್ರೀ ಯಾಜಲಕ್ಷ್ಮಮ್ಮಾಳ್ ರವರ ... ಗುರುವಾರ ವಿವಾಹವನ್ನು ನೆ ... ರು

... ಮಹಾರಾಜರ ಅತ್ರ ಕಾಲೇಜ ... ಉಪಾಧ್ಯಾಯರಾಗಿದ್ದ ... ವೆಂಕಟಸುಬ್ಬಯ್ಯನವರ ತಮ್ಮ ... ಶ್ರೀ ಎ ವಿ ಶೇಷಗಿರಿರಾಯರ ... ಮಗಳ ಸೌ॥ಮಹಾಲಕ್ಷ್ಮಮ್ಮನ ... ಭಾರತ ಸರ್ಕಾರದ ಅಸಿಸ್ಟೆಂಟ್ ಇಂ ... ರಾದ ಶ್ರೀ ಎ. ಎಸ್ ಕುರುಜಾ ... ರಿಗೆ ಕೊಟ್ಟು ಗುರುವಾರ ವಾಣಿ ವಿ ... ನೊಡಲಿಯಲ್ಲಿರುವ ತಮ್ಮ ಸ್ವಗೃಹ ... ನಲ್ಲಿ ವಿವಾಹವನ್ನು ನೆರವೇರಿ ...

... ಸೂರು ಕಾಲೇಜು ರಸ್ತೆಯಲ್ಲಿರುವ ... ಶ್ರೀನಿವಾಸ ಅಯ್ಯಂಗಾರರವರು ತ ... ಶಿಯು ಕುಮಾರಿ ಸೌ॥ ಜಾನಕೀ ... ಭದ್ರಾವತಿಯ ವಿದ್ಯುಚ್ಛಕ್ತಿ ... ದ್ದಿರುವ ಶ್ರೀ ಎಸ್ ಎಸ್ ಶೀ ... ವರಿಗೆ ಕೊಟ್ಟು ಶುಕ್ರವಾರ ವಿ ... ವನ್ನು ನೆರವೇರಿಸಿದರು

ಕೋತಿಗಳನ್ನು ಅಂಡಮಾನಿಗೆ ರವಾನಿಸಬೇಕು

ಶಾಸನ ಸಭೆಯಲ್ಲಿ ಸದಸ್ಯರ ಸಲಹೆ

ಬೆಂಗಳೂರು ೪

ಬೇಸಾಯ ಮಾಡುವವರಿಗೆ ಕೋತಿಗಳು ಮತ್ತು ಇತರುಗಳಿಂದ ಆಗುತ್ತಿರುವ ತೊಂದರೆಗಳನ್ನು ನಿವಾರಿಸುವ ಬಗ್ಗೆ ಸರ್ಕಾರದವರು ಕೂಡಲೇ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದ ಶಾ ಸ ಭೆ ... ನೆನ್ನೆ ಶ್ರೀ ಎ. ವಿ ಕೃಷ್ಣಪ್ಪನವರು ... ರ್ಮಾಯವೂ ದನ್ನ ತಂದರು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನಲ್ಲಿ ಮಯೂರಂಗಕಾಡಿನ ಕೋತಿಗಳ ... ಗಳ ಬೆಳೆ, ಹುರುಳಿ ಹುಲ್ಲು ಮಾವಿನ ತೋಟ, ತೆಂಗು ಮುಂತಾದವುಗಳಿಗೆ ತೊಂದರೆಯಾಗಿ ರೈತರು ಬೆಳೆ ತೆಗೆಯುವುದನ್ನೇ ನಿಲ್ಲಿಸಿರುವರೆಂದೂ ಕೋತಿಗಳನ್ನು ದೊಡ್ಡ ಯಂತ್ರ ಶಿಬಿರಗಳನ್ನು ಏರ್ಪಡಿಸಿ ಹಿಡಿದು ಹಾಗೆ ಅಂಡಮಾನ್ ದ್ವೀಪಗಳಿಗಾಗಿ ರವಾನಿಸಬೇಕೆಂದೂ ಸೂಚಿಸಿದರು ಡಾ॥ ಇವಾಂಡರವರು ಇದನ್ನು ವಿರೋಧಿಸಿ, ಹಿಂದುಗಳ ಧರ್ಮ ಭಾವಕ್ಕೆ ಇದು ವ್ಯತಿರೇಕವಾಗಿದೆಯೆಂದು ಹೇಳಿದರು ಕಪಿಗಳು ಆಂಜನೇಯನ ಭಂಟರೆಂದು ಭಾವನೆಯು ದೇಶದಲ್ಲಿ ಇರುವಾಗ ಸರ್ಕಾರದ ಆಫೀಸರು ಅಭಿಪ್ರಾಯವೂ ರೂಪುಗೊಳ್ಳದೆ ಸರ್ಕಾರದವರು ಕೋತಿಗಳ ಮೇಲೆ ಕಾರ್ಯಕ್ರಮ ವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದೂ, ಅವುಗಳಿಂದ ಆಗುವ ತೊಂದರೆಗಳನ್ನು ತಪ್ಪಿಸಲು ಜಾನ ವಾರುಗಳ ... ಮುಕ್ತವಾಗಿ ಕಾನೂನಿನ ಪ್ರಕಾರ ಕ್ರಮ ಜರುಗಿಸಬಹುದೆಂದೂ ಗೃಹ ಸಚಿವ ಶ್ರೀ ಟಿ. ಮರಿಯಪ್ಪನವರು ತಿಳಿಸಿದರು ಠರಾವನ್ನು ವಾಪಸು ತೆಗೆದುಕೊಳ್ಳಲಾಯಿತು

ಸೇತುವೆ ಕುಸಿದು ಕಾಶ್ಮೀರದ ರೈಲು ಉರುಳಿತು

ದೆಹಲಿಗೆ ನೆನ್ನೆ ಬರುತ್ತಿದ್ದ ಕಾಶ್ಮೀರ ಮೇಲ್ ರೈಲು ಗುರುದಾಸ ಪುರದ ಹತ್ತಿರ ಒಂದು ಸೇತುವೆ ಮೇಲೆ ಹಾದುಹೋಗುತ್ತಿದ್ದಾಗ, ಅದು ಕುಸಿದ ಪರಿಣಾಮವಾಗಿ ರೈಲು ಕೆಳಕ್ಕುರುಳಿ, ೨೦ ಜನ ಸತ್ತು ೪೫ ಮಂದಿಗೆ ಗಾಯವಾಗಿದೆ ಸೇತುವೆಯ ಮೇಲೆ ನೀರು ಹರಿಯುತ್ತಿದ್ದು, ರೈಲಿನ ಮುಖ್ಯಾಲು ಭಾಗವು ದಾಟಿದಾಗ, ಈ ದುರಂತವು ಸಂಭವಿಸಿ ಕೊನೆಯ ೪ ಗಾಡಿಗಳು ಉರುಳಿಕೊಂಡವು

ಸೇನಾಪತಿ ಡಾ॥ ಹೆಡ್ಗೇವಾರ್

ಅಸ್ಸಾಂ ನಿಧಿಗಾಗಿ ಸಮಿತಿ

ಬೆಂಗಳೂರು ೪

ಮೈಸೂರು ಪ್ರಾಂತ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ನೆನ್ನೆ ಸೇರಿ ಅಸ್ಸಾಂ ಭೂಕಂಪ ನಿಧಿಗೆ ಹಣವನ್ನು ಕೂಡಿಸಲು ಶ್ರೀ ಎಲ್ ಎಸ್ ವೆಂಕಾಜಿರಾವ್ ರ ಅಧ್ಯಕ್ಷರಾಗಿಯೂ ಶ್ರೀ ... ಎಸ್ ಮುದ್ದಪ್ಪ ವ ತ್ತು ಎ ಜಿ ರಾಮಚಂದ್ರರಾಯರು ಕಾರ್ಯದರ್ಶಿಗಳಾಗಿಯೂ ಉಳ್ಳ ಸಮಿತಿಯನ್ನು ರಚಿಸಿತು

ವಿಶ್ವೇಶ್ವರಯ್ಯನವರ ವರ್ಧಂತಿ

ಈ ತಿಂಗಳು ೧೫ಕ್ಕೆ ೯೦ ವರ್ಷ ತುಂಬುವ ಸರ್ ಎಂ. ವಿಶ್ವೇಶ್ವರಯ್ಯನವರ ವರ್ಧಂತಿ ... ಯನ್ನು ಸಂಸ್ಥಾನಾದ್ಯಂತವೂ ನಡೆಸಬೇಕೆಂದೂ ಸಹ ಸಮಿತಿಯ ... ಮಾಡಿತು

ಸಮಾರಂಭಗಳಿಗೆ ಪತ್ರಿಕಾ ರಿಪೋರ್ಟರ್ ಇಲ್ಲ

ಕೆಲವು ಸಭೆ ಸಮಾರಂಭಗಳಿಗೆ ... ಪತ್ರಿಕಾ ವರದಿಗಾರರ ... ಆಹ್ವಾನ ... ಸ್ಥಳ, ನೆಗಳ ... ದಾಗಿಯೂ, ಅಕ್ಕಿಯ ... ರವಾದ ಪತ್ರಿಕಾ ... ಒದಗಿಸುವ ಅರ್ಜಿಗಳನ್ನು ... ರಸಲಾಗುವುದೆಂದೂ ... ದಕಿಸಿರುವ ಪತ್ರಿಕಾ ಪ್ರಕಟಣೆಯು ತಿಳಿಸುತ್ತದೆ

ಉಷ್ಣ ಮಾರುತದಿಂದ ಜಪಾನಿನಲ್ಲಿ ಭಾರಿ ಅನರ್ಥ

ಕಳೆದ ೧೬ ವರ್ಷಗಳಿಂದಲೂ ಕಾಣದೇ ಇದ್ದ ಅತ್ಯಂತ ಕಠಿಣವಾದ ಉಷ್ಣ ಮಾರುತವು ಪಶ್ಚಿಮ ಜಪಾನಿನ ಮೇಲೆ ಬೀಸಿದುದರಿಂದ ೨೫೦ ಜನರು ಸತ್ತು, ೩॥ ಲಕ್ಷ ಮಂದಿ ಮನೆ ಮಠಗಳನ್ನು ಕಳೆದುಕೊಂಡಿರುವರು ಈ ಗಾಳಿಯ ವೇಗವು ಗಂಟೆಗೆ ೭೦ ಮೈಲಿ ಇದ್ದಿತು ೧೬ಸಾವಿರ ಮನೆಗಳು ನಾಶವಾಗಿ ೭೭ ಸಾವಿರ ಮನೆಗಳಿಗೆ ನೀರ ನುಗ್ಗಿದೆ ೭೦೦ ಹಡಗುಗಳು ಹಾಳಾಗಿವೆ.

ಪತ್ರಿಕೋದ್ಯೋಗಿಗಳ ಸಮ್ಮೇಳನ

ರಾಜಧಾನಿಯಲ್ಲಿ ಬರುವ ನವೆಂಬರ್ ತಿಂಗಳು ೪ ಮತ್ತು ೫ನೇ ತಾರೀಖು ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಮ್ಮೇಳನವನ್ನು ಏರ್ಪಡಿಸಲಾಗುವುದು ಇಲ್ಲಿನ ಪತ್ರಿಕೋದ್ಯೋಗಿಗಳ ಸಂಘದ ಸಭೆ ನೆನ್ನೆ ಶ್ರೀ ... ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದು ಸಮ್ಮೇಳನವನ್ನು ನಡೆಸಲು ಸಮ್ಮೇಳನದ ಸ್ವಾಗತ ಸಮಿತಿ ... ಸಂಘದ ಸದಸ್ಯರ ... ರಚಿಸಲಾಯಿತು

ಅಕ್ಕನ ಬಳಗ

... ಸಂಸ್ಥೆಗೆ ಸೇರಿರುವ ... ಪ್ರವೇಶ ಪತ್ರ ... ಶ್ರೀ ಎಂ ... ಅಧ್ಯಕ್ಷತೆಯಲ್ಲಿ ... ಹಿಂದೀ ... ವಿದ್ಯಾರ್ಥಿನಿಯರಿಗೆ ... ರಾಷ್ಟ್ರ ಭಾಷೆ ಹಿಂದಿ ... ಭಾಷಣ ಮಾಡಿ ... ಶ್ರೀಮತಿ ... ಸ್ವಾಗತ ಭಾಷಣ ... ದರ್ಶಿನಿಯವರಾದ ಶ್ರೀಮತಿ ಗೌರಮ್ಮನವರ ವಂದನಾರ್ಪಣೆಯೊಂದಿಗೆ ಸಭೆ ವಿಸರ್ಜನೆಯಾಯಿತು

ಯಳಂದೂರು ವಿದ್ಯಾ ನಿಧಿ

ಈ ತಿಂಗಳ ... ನೇ ... ಗಂಟೆಗೆ ಯಳಂದೂರಿನಲ್ಲಿ ವೇಲ್ಲೂಂದ ... ಸಭೆಯು ನಡೆಯುವುದು ಸದಸ್ಯರೆಲ್ಲರೂ ದಯಮಾಡಿ ... ಕಾರ್ಯದರ್ಶಿಗಳು ಕೋರಿದ್ದಾರೆ

ಭಿಕ್ಷುಕರ ಬಂಧನ

ಪೊಲೀಸ್ ಉಪ ಸೂಪರಿಂಟೆಂಡೆಂಟ್ ಶ್ರೀ ಎ ಕೃಷ್ಣ ... ದಿನ ಪೊಲೀಸ್ ... ನಗರದ ಎಲ್ಲಾ ... ಜನ ಭಿಕ್ಷುಕರನ್ನು ಬಂಧಿಸಿ ಭಿಕ್ಷುಕರ ನಿಲಯಕ್ಕೆ ... ದ್ದಾರೆ

ಕೃಷ್ಣ ಜಯಂತೀ ಮಹೋತ್ಸವ

ರಾಜಧಾನಿಯ ... ಶ್ರೀ ಪ್ರಸನ್ನ ವೆಂಕಟ ರಮಣಸ್ವಾಮಿ ದೇವಸ್ಥಾನದಲ್ಲಿ ಕೃಷ್ಣ ಜಯಂತಿ ಮಹೋತ್ಸವವು ನೆನ್ನೆ ... ನೇ ತಾ॥ವರೆಗೂ ನಡೆಯುವುದು ರಾಜಧಾನಿಯ ಸಂಗೀತ ಕಲಾವಿದರ ವೇಲೂ ಹರಿಕಥಾ ವಿದ್ವಾಂಸರುಗಳಿಂದಲೂ ಸಂಗೀತ, ಹರಿಕಥೆ ವೇಣು ವಾದನ ಮುಂತಾದುವುಗಳು ನಡೆಯುವುವು

ನಗರದಲ್ಲಿ ಡಾ|| ಹರ್ಡೀಕರರು

ವರದಿಗಾರರಿಂದ

ಹಿಂದೂಸ್ಥಾನ ಸೇವಾದಳದ ಸಂಸ್ಥಾಪಕರಾದ ಸೇನಾಪತಿ ಡಾ|| ಎನ್. ಎಸ್. ಹರ್ಡೀಕರ್‌ರವರು ನೆನ್ನೆ ರಾತ್ರಿ ರಾಜಧಾನಿಗೆ ಆಗಮಿಸಿ ರೈಲ್ವೆ ಛತ್ರದಲ್ಲಿ ಇಳಿದಿರುವರು. ಅವರೊಡನೆ ಸಂಸ್ಥೆಯ ವಿದ್ಯಾ ಇಲಾಖೆಯ ಶ್ರೀ ಹನುಮಂತರಾವ್, ಸಂಸ್ಥಾನ ಸೇವಾದಳದ ಸಮಿತಿಯ ಸಂಚಾಲಕರಾದ ಶ್ರೀ ರಂಗನಾಥ ಚನ್ನಪ್ಪ ಮತ್ತು ಶ್ರೀ ನಾಡಿಗ ಕೃಷ್ಣಮೂರ್ತಿಯವರು ಆಗಮಿಸಿರುತ್ತಾರೆ. ನೆನ್ನೆ ದಿನ ಸೇವಾದಳಗಳು ನಗರದ ಮಹಾರಾಣಿ ಹೈಸ್ಕೂಲು, ಟ್ರೈನಿಂಗ್ ಕಾಲೇಜು ವಿಮೆನ್ಸ್ ಸ್ಕೂಲುಗಳಲ್ಲಿರುವ ಸುಮಾರು ೧ ಸಾವಿರ ಮಂದಿ ವಿದ್ಯಾರ್ಥಿನಿಯರನ್ನು ಭೇಟಿ ಮಾಡಿ ಅವರಿಗೆ ಸೇವಾದಳದ ಅವಶ್ಯಕತೆಯನ್ನು ವಿವರಿಸಿದರು. ನಂತರ ಮಹಾರಾಜಾ ಕಾಲೇಜು ಹೈಸ್ಕೂಲುಗಳಲ್ಲಿ ವಿದ್ಯಾರ್ಥಿಗಳಿಂದ ಗೌರವವನ್ನು ಸ್ವೀಕರಿಸಿದರು. ದಳವಾಯಿ ಹೈಸ್ಕೂಲು ಸಂಸ್ಕೃತ ಕಾಲೇಜು ಮತ್ತು ಮಹಾಜನ ವಿದ್ಯಾರ್ಥಿ ನಿಲಯಗಳಿಗೂ ಭೇಟಿಯಿತ್ತರು. ಈ ದಿನವೂ ಇತರ ವಿದ್ಯಾಸಂಸ್ಥೆಗಳಿಗೆ ಭೇಟಿಯಾಗುವರು. ನಾಳೆ ದಿನ ಅವರು ಬೆಂಗಳೂರಿಗೆ ತೆರಳುವರು.

ವಿಶ್ವವಿದ್ಯಾನಿಲಯದ ಭೂಗೋಳ ಸಂಘ

ವಿಶ್ವವಿದ್ಯಾಲಯದ ಭೂಗೋಳ ಶಾಸ್ತ್ರ ಸಂಘದ ಅಧಿಕಾರಿ ವರ್ಗದ ಚುನಾವಣೆಯು ನಡೆದ ಶ್ರೀ ವಿ. ನರಸಿಂಹ ಮೂರ್ತಿಯವರು ಅಧ್ಯಕ್ಷರಾಗಿಯೂ, ಶ್ರೀಗಳಾದ ಬಿ. ಜಿ. ಚಂದ್ರಶೇಖರ ಅಯ್ಯಂಗಾರ್ ಮತ್ತು ಎ. ಶ್ರೀಕಂಠಯ್ಯನವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು

ಗುರುದೇವ ಹಾಲ್

ಶಿವರಾಂಪೇಟೆ ಮೈಸೂರು

ನವೀನವಾದ ಬಾರ್ಡರುಗಳಲ್ಲಿ

ಧರ್ಮಾವರಂ, ಕಂಚಿ ಸೀರೆಗಳು

ಹೊಸದಾಗಿ ಬಂದಿರುತ್ತವೆ

ಇಂದೇ ದಯಮಾಡಿ ಭೇಟಿ ಕೊಡಿ

|| ವಂದೇ ಮಾತರಂ ||

ನಂಜನಗೂಡು ಪೇಟೆ ಬೀದಿಯಲ್ಲಿರುವ

ಶ್ರೀ

ಗಣೇಶ ಕೆಫೆ

ನವೀನ ಸಲಕರಣೆಗಳಿಂದ ಕೂಡಿದೆ

ಚೊಕ್ಕ ಭೋಜನ,

ರುಚಿ ತಿಂಡಿ

'ಫ್ಲೇವರ್ ಕಾಫಿ'

ಆರೋಗ್ಯ ನಿಯಮಗಳನ್ನು ಪಾಲಿಸಲು ಮಾಡಿದ ಹೊಟೇಲು.

ಮಹಾಜನರ ಪ್ರೋತ್ಸಾಹ ಕೋರಿದೆ

ಎಂ. ನಾರಾಯಣರಾವ್,

ಮ್ಯಾನೇಜರ್

ಅರೇಬಿಯಾ ಮರುಭೂಮಿಯಲ್ಲಿ ನೀರಾವರಿ

ಅರೇಬಿಯಾ ದೇಶದ ಮರುಭೂಮಿಯಲ್ಲಿ ನೀರಾವರಿಯನ್ನು ಏರ್ಪಡಿಸಲು ಒಂದು ಭಾರಿ ಯೋಜನೆಯನ್ನು ಅಮೆರಿಕದ ಯೋಜನೆಯಂತೆ ಮಾಡಲಾಗುತ್ತಿದೆ. ಇದು ಸಾಧ್ಯವಾದಲ್ಲಿ ಆ ಪ್ರದೇಶದಲ್ಲಿ ೧ ಕೋಟಿ ಟನ್ ಆಹಾರವನ್ನು ಒದಗಿಸಬಹುದೆಂದು ಊಹಿಸಲಾಗಿದೆ

ವಿನೋಬಾ ಭಾವೆಯವರ ವಾಹನ ತ್ಯಾಗದ ಪ್ರತಿಜ್ಞೆ

ಇನ್ನು ಮುಂದೆ ಸಂಚಾರ ಮಾಡುವಾಗ ಯಾವುದೇ ವಾಹನ ಸೌಕರ್ಯವನ್ನು ಉಪಯೋಗಿಸುವುದಿಲ್ಲವೆಂದು ಗಾಂಧೀಜಿಯವರ ಆಶ್ರಮ ನಿವಾಸಿಗಳಾಗಿದ್ದ ಆಚಾರ್ಯ ವಿನೋಬಾ ಭಾವೆಯವರು ಪ್ರತಿಜ್ಞೆ ಮಾಡಿರುತ್ತಾರೆ

ಕೆರೆಯ ತೂಬಿನ ದುರಸ್ತು

ಆಗರ-ಮಾಂಬಳ್ಳಿ, ೧

ಈ ಊರಿನ ದೊಡ್ಡಕೆರೆಯ ತೂಬು ಕಳೆದ ೩೦ ವರ್ಷಗಳಿಂದಲೂ ದುರಸ್ತಿ ಕೋರುತ್ತಿದ್ದನ್ನು ಇಲ್ಲಿನ ಜಮೀನುದಾರರು ಮತ್ತು ರೈತರ ಕೋರಿಕೆಯ ಪ್ರಕಾರ ತಾಲ್ಲೂಕಿಗೆ ಬಂದಿರುವ ಅ|| ಇಂಜಿನಿಯರ್ ಶ್ರೀ ವೆಂಕಟೇಶ ಅಯ್ಯಂಗಾರರವರು ಶೀಘ್ರ ದುರಸ್ತು ಮಾಡಿಸಿ, ಕೆರೆ ಕೆಳಗಿನ ಬೈಲಿನ ಜೀರ್ಣೋದ್ಧಾರಕ್ಕೆ ಅನುಕೂಲ ಕಲ್ಪಿಸಿರುತ್ತಾರೆ. ಇದರಿಂದ ನೂರಾರು ಎಕರೆ ಜಮೀನಿನ ಸಾಗುವಳಿಗೆ ಸೌಕರ್ಯವಾಗಿರುತ್ತದೆ ಇದಕ್ಕಾಗಿ ಇಲ್ಲಿನ ರೈತರೆಲ್ಲರೂ ಅವರಿಗೆ ಬಹಳ ಕೃತಜ್ಞರಾಗಿರುತ್ತಾರೆ ಮತ್ತು ಇಲಾಖೆಯವರಿಗೂ ಧನ್ಯವಾದಗಳನ್ನು ಸಮರ್ಪಿಸುತ್ತಾರೆ

ಊರಿನ ಮಧ್ಯೆ ಕೊಲೆ

ಕೊಳ್ಳೇಗಾಲದ ತಾ|| ಕುಣಗಹಳ್ಳಿಯ ಲಿಂಗಾಯಿತರ ಜಾತಿ ಶಿವಪ್ಪ ಎಂಬಾತನನ್ನು ಕಳೆದ ತಿಂಗಳು ೨೮ನೇ ತಾ|| ಮಧ್ಯಾಹ್ನ ನಡು ಹಗಲಿನಲ್ಲೇ ಊರಿನ ಮಧ್ಯೆ ಕೊಲೆ ಮಾಡಲಾಯಿತೆಂದು ತಿಳಿದುಬಂದಿದೆ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ

೭೪ನೇ ವಯಸ್ಸಿನಲ್ಲಿ ಬ್ರಹ್ಮಚಾರಿಯ ವಿವಾಹ

ಜಪಾನಿನ ಮಾಜಿ ಸೈನ್ಯಾಧಿಕಾರಿ ಕೆಂಕಿಚಿ ಯುಯೇಹಾರವರು ತಮ್ಮ ೭೪ನೇ ವಯಸ್ಸಿನಲ್ಲಿ ಮೊದಲನೆಯ ಬಾರಿಗೆ ೫೭ ವರ್ಷದ ಸ್ತ್ರೀಯೊಬ್ಬಳನ್ನು ವಿವಾಹ ಮಾಡಿಕೊಂಡರು ಇವರಿಬ್ಬರಿಗೂ ಬಹು ದಿನದ ಪ್ರಣಯವು ಬೆಳೆದು ಕೊನೆಗೆ ವಿವಾಹದಲ್ಲಿ ಪರ್ಯವಸಾನವಾಯಿತು ಇದುವರೆಗೂ ಯುಯೇಹಾರವರು ಬ್ರಹ್ಮಚಾರಿಗಳಾಗಿದ್ದರು

ವಾಣೀವಿಲಾಸ ಮೊಹಲ್ಲಾದಲ್ಲಿ ಬೀದಿ ದೀಪದ ಅಭಾವ

ರಾಜಧಾನಿಯ ಪೌರಸಭೆಯವರು ವಾಣೀ ವಿಲಾಸ ಮೊಹಲ್ಲಾದಲ್ಲಿ ನ್ಯಾಯವಾದ ಬೆಳಕಿಗೆ ದೀಪ ಕಂಬಗಳನ್ನು ಹಾಕಲು ಕೊಟ್ಟಿರುವ ರಹದಾರಿಯನ್ನು ತಪ್ಪೋದವರು ಕಂಡರೂ ಅದನ್ನು ಸರಿಪಡಿಸುವ ಪ್ರಯತ್ನ ಮಾಡುತ್ತಿಲ್ಲವೆಂದೂ, ಒಬ್ಬರು ಅದನ್ನು ನಿರ್ಲಕ್ಷಿಸಿ ಬಿಟ್ಟಿರುವರೆಂದೂ, ಮತ್ತೊಬ್ಬರು ತಿಂಗಳಿಗೆ ಒಂದೆರಡು ಬಾರಿ ದೀಪವನ್ನು ಮಾತ್ರ ತರುತ್ತಿರುವರೆಂದೂ, ಹೀಗಾಗಿ ಜನಗಳಿಗೆ ಸರಿಯಾದ ಬೆಳಕಿನ ಸೌಕರ್ಯ ಇಲ್ಲವಾಗಿದೆಯೆಂದೂ ಅಲ್ಲಿನ ನಿವಾಸಿ ಶ್ರೀ ನಂಜುಂಡಯ್ಯನವರು ಪತ್ರ ಬರೆದಿದ್ದಾರೆ ಸರಿಯಾದ ಬೆಳಕಿಗೆ ಏರ್ಪಾಟು ಮಾಡುವವರಿಗೆ ಮಾತ್ರ ರಹದಾರಿ ಕೊಟ್ಟು ಅಭಾವವನ್ನು ಪೌರಸಭೆಯವರು ನೀಗಿಸಬೇಕೆಂದು ಅವರು ಕೋರಿರುತ್ತಾರೆ

ರಘುಲಾಲ್ & ಕೋ.,

ಔಷಧ ವ್ಯಾಪಾರಿಗಳು,

ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ

(ಬೆಂಗಳೂರು)

ಔಷಧ ವ್ಯಾಪಾರಿಗಳು,

70 ಅವೆನ್ಯೂ ರಸ್ತೆ (ವಿದ್ಯಾರಣ್ಯಾಚಾರ್ಯರ ರಸ್ತೆ),

ಬೆಂಗಳೂರು.

ಭಾರತದಲ್ಲಿ ಹೃದಯದ ಮೇಲೆ ಶಸ್ತ್ರ ಚಿಕಿತ್ಸೆ

ಬೊಂಬಾಯಿಯ ಜೆ. ಜೆ. ಆಸ್ಪತ್ರೆಯಲ್ಲಿ ಪೆರಿ ಕಾರ್ಡೈಟಿಸ್ ಎಂಬ ಹೃದಯಕೋಶದ ಒಂದು ವಿಧವಾದ ಖಾಯಿಲೆಯಿಂದ ನರಳುತ್ತಿದ್ದ ೮ ವರ್ಷದ ಹುಡುಗಿಗೆ ಶಸ್ತ್ರ ಚಿಕಿತ್ಸೆ ನಡೆಸಲಾಯಿತು ಈ ತರಹ ಚಿಕಿತ್ಸೆಯು ಭಾರತದಲ್ಲಿ ಇದೇ ಮೊದಲು ಆದುದು. ವೈದ್ಯರು ಹೃದಯವನ್ನು ಹೊರಗೆ ತೆಗೆದು, ಶಸ್ತ್ರದಿಂದ ತೆಗೆಯಬೇಕಾದ ಭಾಗಗಳನ್ನು ಕತ್ತರಿಸಿ ಪುನಃ ಅದೇ ಜಾಗಕ್ಕೆ ಸರಿಯಾಗಿ ಜೋಡಿಸಿದರು

ಉಚಿತ ವಾಚನಾಲಯ

ರಾಜಧಾನಿಯ ಚಾಮರಾಜಪುರದ ರೈಲ್ವೆ ಸ್ಟೇಷನ್ ಬಳಿ ಇರುವ ಹಿಂದೀ ಸೇವಾ ಸದನದ ಆಶ್ರಯದಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಉಚಿತ ವಾಚನಾಲಯವನ್ನು ಶೀಘ್ರದಲ್ಲೇ ತೆರೆಯಲಾಗುವುದೆಂದು ಸದನದ ವ್ಯವಸ್ಥಾಪಕರು ತಿಳಿಸಿರುತ್ತಾರೆ.

SRI GAYATHRI

TALKIES

Daily 3 Shows

From 6 9-50 For 2 Days

Paramount's

I WALK ALONE

With Burt Lancaster

— Next change

DEAR WIFE

ರಾಜಕಮಲ್,

ಮೈಸೂರು

1-9-50ರಿಂದ : ಅನೇಕ ಪ್ರಾರಂಭ ದಿನವಹಿ 3 ಆಟಗಳು

ಫಿಲ್ಮಿಸ್ತಾನರವರ ಹಿಂದಿ ಚಿತ್ರ

ಷಹೀದ್

ತಾರಾಗಣ - ಕಾಮಿನಿಕೌಶಲ್ಯ, ದಿಲೀಪ್ ಕುಮಾರ್, ಲೀಲಾ ಚಿಟ್ನಿಸ್, ಚಂದ್ರಮೋಹನ್

ಮಾರಾಟಕ್ಕಿದೆ

ಮೈಸೂರು ಬೆಂಗಳೂರು ರಸ್ತೆ, ಚನ್ನಪಟ್ಟಣದ ಹತ್ತಿರ ಬ್ರಾಂಡ್ ಫ್ಯಾಕ್ಟರಿಗೆ ಎದುರಿನಲ್ಲಿ ಎಂದು ಕಟ್ಟಡದೊಡನೆ ಕೂಡಿಕೊಂಡಿರುವ ಸುಮಾರು ೫೦೦೦ ಚದುರ ಗಜದ ಅತ್ಯುತ್ತಮವಾದ ಸ್ವತ್ತು ಮಾರಾಟಕ್ಕಿದೆ

ಇದು ಯಾವುದಾದರೂ ಕೈಗಾರಿಕಾ ಸ್ಥಾಪನೆಗೆ ತಕ್ಕುದಾಗಿದೆ

ಇಷ್ಟವುಳ್ಳವರು ಈ ಕೆಳಗಿನ ವಿಳಾಸಕ್ಕೆ ಪತ್ರ ವ್ಯವಹಾರ ಮಾಡಬಹುದು.

ದಿ ಸೆಕ್ರೆಟರಿ,

ದಿ ಬಿಷೋಪ್ಸ್ ಹೌಸ್,

ಮೈಸೂರು

ರಸಿಕರಿಗೆ ಅತ್ಯಂತ ಮೆಚ್ಚಾದ ಜವಳಿಯಂಗಡಿ

ಮೈಸೂರು ಸಿಲ್ಕ್, ಕ್ರೇಪ್-ಜಾರ್ಜೆಟ್ ಸೀರೆಗಳು

ಧರ್ಮಾವರದ ಕೋರಾ ಸೆರಗಿನ ಸೀರೆಗಳು ಪೂನಾ, ನಾಗಪುರ್ ಸೀರೆಗಳು

ಎಂ. ವಿ. ಭೋಜಯ್ಯ ಬಿ. ಎ. & ಬ್ರದರ್ಸ್,

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

Double Programme!

Prabhudev Talkies

From 3-9-50 :: Daily 3 Shows

The first and the best Glorious Technicolour German Picture on the Silver Screen

GIRL OF MY DREAM & BALLERINA

Edited, printed and published by A K Nagarajan at Sadhvi Press D Subbiah Road, Mysore

5, 6, 8, 9 ಗಜದ ಪ್ರಿಂಟೆಡ್ ವಾಯಿಲ್ ಸೀರೆಗಳು

ಒಳ್ಳೆ ನಮೂನೆಗಳಲ್ಲಿ ಬಂದಿವೆ ಬಂದು ನೋಡಬೇಕಾಗಿ ವಿನಂತಿ ಚಾಮುಸಾಬ್ ಕಂಪೆನಿ, ಬ್ಯಾಂಕು ರೋಡು, ಮೈಸೂರು

ಕೋ೯ ನಂ 792 ॥ವಂದೇ ಮಾತರಂ॥ ಇಂಡಿಯ ಪತ್ರಿಕೆ ಓ ನಂಬು

ಸಾಧ್ವಿ

ಸಂಪುಟ ೫] ಬುಧವಾರ ೬-೯-೫೦ [ಸಂಚಿಕೆ ೩೭

ಅಮೇರಿಕದ ರಕ್ಷಣಾ ವ್ಯೂಹ ಕತ್ತರಿಸಲ್ಪಟ್ಟಿತು

ಕೊರಿಯಾದಲ್ಲಿ ಅಮೇರಿಕದ ರಕ್ಷಣಾ ವ್ಯೂಹ ಒಡೆಯಿತು

ಕೊರಿಯಾದಲ್ಲಿ ಈ ಮೊನ್ನೆ ೨ ಮೈಲಿನಷ್ಟು ಅಮೇರಿಕದ ರಕ್ಷಣಾ ವ್ಯೂಹವು ೩೦ ಸಾವಿರ ಕಮ್ಯೂನಿಸ್ಟರ ದಾಳಿಯ ನ್ನು ತಾಳಲಾರದೆ ಮುರಿದು, ಟಿಂಗ್‌ಡು ಪೊಹಾಂಗ್ ರೇವನ್ನು ರಕ್ಷಿಸುತ್ತಿರುವ ಅ ಮೇರಿಕನ್ನರು ಮತ್ತು ದಕ್ಷಿಣ ಕೊರಿಯನ್ನ ರು ಸುತ್ತುವರಿಯಲ್ಪಟ್ಟಿರುವರು. ಅವರ ಹಿಂಭಾಗದಲ್ಲಿ ೨೦ ಸಾವಿರ ಕಮ್ಯೂನಿಸ್ಟ್ ಸೈನ್ಯದ ಮತ್ತೊಂದು ತಂಡವು ಕಾದು ಕುಳಿತಿದೆ. ಕಮ್ಯೂನಿಸ್ಟರು ಹೈಗೂ ಕಡೆಗೆ ನುಗ್ಗುತ್ತಿರುವರು. ಅವರ ವೇಗವನ್ನು ತಡೆಯಲು ಅಮೇರಿಕನ್ನರು ಬಹಳ ಪ್ರಯತ್ನ ಪಡುತ್ತಿರುವರು.

ಮಧ್ಯ ಇಟಲಿಯಲ್ಲಿ ಭೂಕಂಪ

ಮಧ್ಯ ಇಟಲಿಯಲ್ಲಿ ನಿನ್ನೆ ಬೆಳಗ್ಗೆ ತೀವ್ರವಾದ ಭೂಕಂಪವಾಗಿ, ರಾಜಧಾನಿ ರೋಂ ನಗರದಲ್ಲಿ ೧೨ ಮನೆಗಳು ಉರುಳಿ ದವು. ೧೪ ಜನರು ಗಾಯಗೊಂಡರು. ಪ ಕ್ಕದ ಅನೇಕ ಹಳ್ಳಿಗಳ ಮನೆಗಳು ಬಿರುಕು ಬಿಟ್ಟುಕೊಂಡು, ಒಂದು ಹಳ್ಳಿಯು ಪೂ ರ್ಣ ನಾಶವಾಗಿದೆ. ೨೪ ಗಂಟೆಯಲ್ಲೇ ವ ತ್ತೊಂದು ಭೂಕಂಪವಾಗುವ ಭೀತಿಯು ಜನರು ಗಾಬರಿಯಾಗಿರುತ್ತಾರೆ.

ಲಾಭದಾಕೋರ ವರ್ತಕರಿಗೆ ನಮ್ಮ ಸೊಡಬೇಡೆಂದು ನೆಹರೂ

ಭೂಕಂಪದಿಂದ ಪೀಡಿತವಾದ ಅಸ್ಸಾ ಮಿನ ದಿಬ್ರುಗಢ ನಗರದ ಲಕ್ಷ ಜನ ಸಭೆಯಲ್ಲಿ ಭಾಷಣ ಮಾಡುತ್ತಾ ಪ್ರ ಧಾನಿ ನೆಹರೂರವರು ಜನತೆ ಮತ್ತು ಕಷ್ಟ ದಲ್ಲಿ ಇರುವಾಗ ಲಾಭಾರ್ಜನೆಯಲ್ಲಿ ತೊ ಡಗುವ ವರ್ತಕರ ವರ್ತನೆಯನ್ನು ಖಂಡಿ ಸಿ ಅವರ ವಂಚನೆ ವ್ಯಾಪಾರಿಗಳು ಮತ್ತು ಲಾಭಕೋರರಿಗೆ ಸೊಪ್ಪು ಹಾಕಬಾರದೆಂದು ತಿಳಿಸಿದರು.

ಮೈಸೂರಿನಲ್ಲಿ ದಾಸಪ್ಪನವರ ಮಾತುಕತೆ

ಈ ಸ್ವಾತಂತ್ರ್ಯ ನಗರದ ... ಅಭಿವೃದ್ಧಿ ಕಾರ್ಯ ಗಳಿಗೆ ಕೇಂದ್ರ ಸರ್ಕಾರದವರ ೫ ಕೋಟಿ ರೂ ಗಳನ್ನು ... ಕೊಡ ಬೇಕೆಂದು ... ಹೇಳಿಕೆ ನೀಡಿರುವ ಕೇಂದ್ರ ಶ್ರೀ ಹೆಚ್. ಸಿ. ದಾಸಪ್ಪನವ ರು ಹಿಂದೊಮ್ಮೆ ಬಾಧಿತರಿಗೆ ಹಿಂದೆ ಇಲ್ಲಿಗೆ ಆಗ ಮಿಸಿರುವ ಕೇಂದ್ರ ಸರ್ಕಾರದ ಸಂಸ್ಥಾನ ಇಲಾಖೆಯ ಕಾರ್ಯದರ್ಶಿ ಶ್ರೀ ವಿ. ಪಿ. ಮೆನನ್‌ರವರನ್ನು ಕಂಡು ಮಾತನಾಡಿದರು. ದೆಹಲಿಯಲ್ಲಿರುವ ಮೈಸೂರು ಅಧಿಕಾರಿಗ ಳಂತೆ ಶ್ರೀ ಕೆ. ವಿ. ಗಣಪತಿ ಅಯ್ಯರ್‌ರವರ ೂ ಹಾಜರಿದ್ದರು. ಸಂಸ್ಥಾನದಲ್ಲಿ ಕ್ಕೆ ಗೊಳ್ಳಲಾಗಿರುವ ಯೋಜನೆ ಅಭಿವೃದ್ಧಿ ಕಾ ರ್ಯವೂ ನಿಲ್ಲುವುದಿಲ್ಲವೆಂದು ಹೇಳಲಾಗಿದೆ.

ವಿವಾಹ ಮಹೋತ್ಸವ

ರಾಜಧಾನಿಯ ಶಿವರಾಂಪೇಟೆಯ ವಿ ಡಲ್ ಸಪ್ಲೈಯಿನ ಪ್ರೊಪ್ರೈಟರ್ ಶ್ರೀ ಹೆಚ್. ವೆಂಕಟಸುಬ್ಬಯ್ಯನವರು ತಮ್ಮ ಮಗಳು ಶ್ರೀ ಎ. ವಿ. ಸುಬ್ಬರಾಯರಿಗೆ ಟಿ. ನರಸೀ ಪುರದ ತಾಲ್ಲೂಕಿನ ವಿಶೇಷ ಅಮಲ್ದಾರ ರಾದ ಶ್ರೀ ಎಸ್. ಎ. ಚಂದ್ರಶೇಖರ ರಾ ಯರ ಮಗಳು ಸೌ॥ ... ಯನ್ನು ಕೊಡು ... ಕಳೆದ ಗುರುವಾರ ಟಿ. ನ ರಸೀಪುರದಲ್ಲಿ ವಿವಾಹವನ್ನು ನೆರವೇರಿಸಿ ದರು.

ಹೊಟೇಲುಗಳ ಮೇಲೆ ಹೆಚ್ಚಿನ ತೆರಿಗೆ

ಪೌರ ಸಭೆಯಲ್ಲಿ ತೀರ್ಮಾನ

ಮೈಸೂರು ೬

ನಗರದಲ್ಲಿರುವ ಹೊಟೇಲು, ಫಲಹಾರ ಮಂದಿರ, ಕಾಫೀಯ ಗೃಹ ಮುಂತಾದವು ಗಳ ಮೇಲೆ ಅವುಗಳ ಕಟ್ಟಡಗಳ ಬಾಡಿ ಗೆಯ ಬಾಡಿಗೆಯಷ್ಟು ತೆರಿಗೆಯನ್ನು ವಿ ಧಿಸುವಂತೆ ನಿಯಮವೊಂದನ್ನು ಅಲ್ಲಿ ಒದಗಿ ಸಿ ಮಾಡಬೇಕೆಂಬುದಾಗಿ ನಿನ್ನೆ ದಿನ ನಡೆದ ಪೌರಸಭೆಯ ಅಧಿವೇಶನದಲ್ಲಿ ನಿ ರ್ಣಯ ಮಾಡಲಾಯಿತು.

ಸೋಡಾ ಕಾರ್ಖಾನೆಗಳಿಗೆ ೫೦ ರೂ ಪಾಯಿಗಳನ್ನು ಮತ್ತು ಹೋಟೆಲ್ ಮಾ ಲಿಕ ಅಂಗಡಿಗಳಿಗೆ ೧೦ ರೂ ತೆರಿಗೆ ಯನ್ನು ವಿಧಿಸುವಂತೆ ನಿರ್ಣಯವಾಯಿತು.

ನಗರಾಭಿವೃದ್ಧಿ ಮತ್ತು ಮತ್ತು ನೌಕ ರರಿಗೆ ಒಬ್ಬರೇ ಅಧ್ಯಕ್ಷರಿರಬೇಕೆ ಬುದಾಗಿ ಪೌರಸಭೆಯವರು ಹಿಂದೆ ಮಾ ಡಿದ್ದ ಸೂಚನೆಗಳಿಗೆ ಸರ್ಕಾರದವರು ಒ ಪ್ಪಿಗೆ ಕೊಡುವುದಿಲ್ಲವೆಂದು ಬಂದಿದ್ದ ಪತ್ರ ದ ಮೇಲೆ ಚರ್ಚೆ ನಡೆದು ಈ ವಿಷಯವ ನ್ನು ಪುನರ್ವಿಮರ್ಶೆ ಮಾಡುವಂತೆ ಸರ್ಕಾ ರವನ್ನು ಕೋರುವ ನಿರ್ಣಯ ಮಾಡಲಾ ಯಿತು. ಪ್ರಜಾ ಸಂಘದ ಸದಸ್ಯರು ಅದ ನ್ನು ವಿರೋಧಿಸಿದರು.

ಪೌರಸಭೆಯ ಆವರಣದಲ್ಲಿ ಆರೋಗ್ಯ ಕರವಾದ ಮತ್ತು ಅಚ್ಚುಕಟ್ಟಾದ ಮನೆ ಯ ಮಾದರಿಯೊಂದನ್ನು ಕಟ್ಟಿ ಇಡಬೇ ಕೆಂಬ ನಿರ್ಣಯವು ಈ ಮುಂಚೆ ... ಯಿತು. ಡಾ॥ ಎಸ್. ಶೇಷಗಿರಿರಾಯರನ್ನು ಪೌರಸಭೆಯ ಆರೋಗ್ಯಾಧಿಕಾರಿಗಳನ್ನಾ ಗಿ ನೇಮಿಸುವ ತೀರ್ಮಾನವೂ ಆಗ ಅಂಗೀಕರಿಸಲ್ಪಟ್ಟಿತು.

೩೭ ವರ್ಷ ಕಾಲ ಪೊಲೀಸರ ಕೈಗೆ ಸಿಕ್ಕಿಲ್ಲ

ದಕ್ಷಿಣ ಅಮೇರಿಕದಲ್ಲಿರುವ ಚಿಲಿ ದೇಶ ದ ಒಲಿಗೇರಿಯಾ ಪೆಲಸ್ಕೋ ಎಂಬ ಕೊಲೆ ಗಾರನ ಸುಳುಹನ್ನೇ ನೂ ಕಂಡುಹಿಡಿಯಲು ಫ್ರೆಂಚ್ ಪೊಲೀಸರಿಗೆ ೩೭ ವರ್ಷ ಹಿಡಿಯಿತು. ಬಂಧಿಸಲ್ಪಟ್ಟಾಗ ಅವನ ದಕ್ಷಿಣಕ್ಕೆ ಹಾರಿಹೋಗಿ ಬಿಟ್ಟಿದ್ದ. ಅವನಿ ಗೆ ಈಗ ೭೮ ವರ್ಷವಾಗಿದೆ. ಯೌವ್ವನದ ದಾಕ್ಷೆ ಇದ್ದಾಗ ಅವನು ದಕ್ಷಿಣಕ್ಕೆ ಹಾ ರಿದನು.

ಪಂಚವಟಿ ಕ್ಷೇತ್ರದ ಬಳಿ ಕಾಂಗ್ರೆಸ್ ಅಧಿವೇಶನ

ಶ್ರೀ ರಾಮಾಯಣದಲ್ಲಿ ರಾಮಚಂದ್ರ ಲಕ್ಷ್ಮಣರ ಸಮೇತ ಹಲವು ಕಾಲ ತಂಗಿದ್ದ ನಾಸಿಕದ ಪಂಚವಟಿ ಕ್ಷೇತ್ರದ ಬಳಿ ಭಾ ರತದ ರಾಷ್ಟ್ರೀಯ ಅಧಿವೇಶನವು ೩೦ ಲಕ್ಷ ರೂಪಾಯಿ ವೆಚ್ಚದಿಂದ ... ವರೆಗೆ ಅದು ನಡೆಯುವುದು.

ಕಾಸಿಂ ರಜ್ವಿಯ ಮೊಕದ್ದಮೆ ತೀರ್ಪು ಕೃ

ಕಾಸಿಂ ರಜ್ವಿ ಮತ್ತು ಇತರರ ... ಸೊಲ್ಲಾಪುರ ಕೋರ್ಟಿನಲ್ಲಿ ನಡೆದ ... ಮೊಕದ್ದಮೆಗಳ ತೀರ್ಪು ಗಳನ್ನು ಈ ತಿಂಗಳು ... ನೀಡಲಾಗುವುದು.

ಕಲ್ಲೀಕೋಟೆ ಅಂಗಡಿಗಳ ಮುಂದೆ ಪಿಕೆಟಿಂಗ್

ನಿತ್ಯಜೀವನಕ್ಕೆ ಅವಶ್ಯಕವಾದ ವಸ್ತುಗ ಳ ಬೆಲೆಗಳನ್ನು ಅನಾವಶ್ಯಕವಾಗಿ ಏರಿಸಿ ವ್ಯಾಪಾರಿಗಳು ಹೆಚ್ಚಿಸಿದ ಸಂದರ್ಭದಲ್ಲಿ ಅವರ ಅಂಗಡಿಗಳ ಮುಂದೆ ಅಲ್ಲಿನ ಸಮಾ ಜವಾದಿ ಪಕ್ಷದವರು ಪಿಕೆಟಿಂಗ್ ಅನ್ನು ನಿನ್ನೆಯಿಂದ ಪ್ರಾರಂಭಿಸಿದ್ದಾರೆ.

ಪೂರ್ವ ಬಂಗಾಳದಲ್ಲಿ ಭೂಮಿಯೊಳಗೆ ಫಿರಂಗಿ ಶಬ್ದ

ಪೂರ್ವ ಬಂಗಾಳಕ್ಕೆ ಸೇರಿದ ಮೈಮನ್ ಸಿಂಗ್ ಜಿಲ್ಲೆಯ ಮಧುಪುರ ಅರಣ್ಯದಲ್ಲಿ ಭೂಮಿಯು ಕೆಳಗಿನಿಂದ ಭಾರಿ ಫಿರಂಗಿ ಹಾರಿಸಿದ ಶಬ್ದಗಳು ಕೇಳಬರುತ್ತಿವೆಯೆಂ ದೂ, ಐವತ್ತು ವರ್ಷಗಳಲ್ಲಿ ಆ ಪ್ರದೇಶದ ಲ್ಲಿ ಜ್ವಾಲಾಮುಖಿ ಇದ್ದ ಭೂಮಿಯು ಮೇಲಕ್ಕೇಳಬಹುದಾದೆಂದು ಭೂಗರ್ಭ ಶಾಸ್ತ್ರಜ್ಞರು ನುಡಿದಿದ್ದ ವಿಷಯವು ನಿಜವಾಗಬಹುದೆಂದು ಜನರ ಭ ಯ ಪ್ರಸ್ತುತಗಿರುವರೆಂದೂ ಹೇಳಲಾಗಿದೆ. ಅಸ್ಸಾಮಿನ ಭೂಕಂಪ ಮತ್ತು ರಾಂಗ್ಪ ರ ಜಿಲ್ಲೆಗಳ ಮಧ್ಯೆ ಇದು ಇದೆ.

ಹಳ್ಳಿಗಳಿಗೆ ಹೆಚ್ಚಿನ ಬೋರ್ಡುಗಳು

ಹಳ್ಳಿಗಳ ಹಣವನ್ನು ಬರಿದ ಪಟ್ಟಣಗಳ ... ಪಂಚಾಯಿತಿಗಳು ಹಳ್ಳಿಗಳಿಗೆ ... ಸರ್ಕಾರದ ಆಜ್ಞೆಯಾಗಿದೆ. ... ರೂ ಗಳಿಗಿಂತ ಹೆಚ್ಚಾಗಬಾ ರದು.

ವನಸ್ಪತಿ ನಿರೋಧ ಮಸೂದೆ ಬಿದ್ದರೆ ಸತ್ಯಾಗ್ರಹ

ವನಸ್ಪತಿ ತುಪ್ಪವನ್ನು ನಿಷೇಧಿಸುವ ಬ ಗ್ಗೆ ಸಾರ್ವಜನಿಕ ಅಭಿಪ್ರಾಯವನ್ನು ಲಕ್ಷಿ ಸದೇ, ಸರ್ಕಾರದವರು ಪಾರ್ಲಿಮೆಂಟಿನಲ್ಲಿ ತಂದಿರುವ ಮಸೂದೆಯನ್ನು ತಿರಸ್ಕರಿಸಿದ ರೆ, ತಾವು ಆ ಸಂಬಂಧವಾಗಿ ಸತ್ಯಾಗ್ರಹ ವನ್ನು ನಡೆಸುವ ವಿಷಯವನ್ನು ಪರ್ಯಾ ಲೋಚಿಸಬೇಕಾಗಿ ಬರುವುದೆಂದು ಅ॥ ಭಾ॥ ಗ್ರಾಮ ಕೈಗಾರಿಕೆಗಳ ಸಂಘದ ಅ ಧ್ಯಕ್ಷರಾದ ಡಾ॥ ಜೆ. ಸಿ. ಕುಮಾರಪ್ಪನವ ರು ತಿಳಿಸುತ್ತಾರೆ.

ಅಸ್ಸಾಂಗೆ ಪೂರ್ಣ ಸಹಾಯ ಒದಗಿಸಲು ಭರವಸೆ

ಭೂಕಂಪದಿಂದ ಪರಿತಪಿಸುತ್ತಿರುವ ಅ ಸ್ಸಾಂ ಜನರಿಗೆ ಪೂರ್ಣ ಸಹಾಯವನ್ನೊ ದಗಿಸುವುದಾಗಿ ಪ್ರಧಾನಿ ನೆಹರೂರವರು ತಿಳಿಸುತ್ತಾರೆ. ಅವರು ಭೂಕಂಪದ ಪ್ರ ದೇಶಗಳ ಪರಿಶೀಲನೆ ನಡೆಸುತ್ತಲಿದ್ದಾರೆ.

ಭಾರತಕ್ಕೆ ೭೦ ಸಾವಿರ ಟನ್ ಈಜಿಪ್ಟ್ ಅಕ್ಕಿ

ಭಾರತಕ್ಕೆ ೭೦ ಸಾವಿರ ಟನ್ ಈಜಿಪ್ಟಿನ ಅಕ್ಕಿಯನ್ನು ತರಿಸಿಕೊಳ್ಳಲು ಎಲ್ಲ ಏರ್ಪಾ ಡುಗಳೂ ಆಗಿವೆ. ಇಟಲಿಯೊಡನೆ ಈ ಬಗ್ಗೆ ನಡೆಸಿದ ವ್ಯವಹಾರವು ನಿಷ್ಫಲವಾ ಯಿತು. ಇದಲ್ಲದೆ ೨೫ ಸಾವಿರ ಟನ್ ಸ ಕ್ಕರೆಯನ್ನೂ ತರಿಸಿಕೊಳ್ಳಲು ಪ್ರಯತ್ನಿಸ ಲಾಗುವುದೆಂದು ತಿಳಿದಿದೆ.

ಅವರ್ಷದಲ್ಲ ನಾನ್‌ಕಿಂಗ್ ಗೆಲ್ಲುವುದಾಗಿ ಚಿಯಾಂಗ್

ಚೀಣದ ರಾಜಧಾನಿ ನಾನ್‌ಕಿಂಗ್ ನಗ ರವನ್ನು ಪುನಃ ತಾವು ಈ ವರ್ಷಗಳಲ್ಲೇ ವಶಪಡಿಸಿಕೊಳ್ಳುವುದಾಗಿ ಫಾರ್ಮೋಸಾದ ಲ್ಲಿರುವ ಚಿಯಾಂಗ್ ಕೈಷೇಕರು ಭರವಸೆ ಹೊಂದಿದ್ದಾರೆ.

ಡಾ॥ ಹರ್ಡೀಕರರಿಗೆ ಸತ್ಕಾರ

ಸೇನಾಪತಿ ಡಾ॥ ಎನ್. ಎಸ್. ಹರ್ಡೀ ಕರರ ಗೌರವಾರ್ಥವಾಗಿ ನಿನ್ನೆ ರಾತ್ರಿ ಚಾ ಮರಾಜೇಶ್ವರಿ ಭವನದ ಮಾಲೀಕರಾದ ಶ್ರೀ ಮುನಿಸ್ವಾಮಿ ಮತ್ತು ಶ್ರೀ ಟಿ. ವಿ. ರಾ ಮಸ್ವಾಮಿರವರುಗಳು ಭೋಜನ ಕೂಟ ವನ್ನು ಏರ್ಪಡಿಸಿದ್ದರು. ಸ್ನೇಹಿತರಿಂದ ಬಂದಿ ಗ ಸ್ವಾಗತವಾದ ಬಳಿಕ, ಅನಂತರ ರಂಗಯ್ಯ ವ ಕೀಲ್ ಹೆಚ್. ಕೆ. ಕುಮಾರಸ್ವಾಮಿಗಳು ಹ ರ್ಡೀಕರರಿಗೆ ಸ್ವಾಗತವನ್ನು ಕೋರಿ, ಅವ ರ ಕಾರ್ಯಗಳಲ್ಲಿ ಪ್ರೋತ್ಸಾಹಿಸುವಿಕೆಯ ಪೂ ರ್ಣ ಸಹಕಾರವನ್ನು ನೀಡುವುದಾಗಿ ತಿಳಿ ಸಿದರು. ಡಾ॥ ಹರ್ಡೀಕರರು ಭಾಷಣ ಮಾಡಿ ತಾವು ೩೦ ವರ್ಷ ಅಮೆರಿಕದಲ್ಲಿದ್ದಾಗ ನಡೆದ ಪತ್ರಿಕಾ ವೃತ್ತಾಂತವನ್ನು ಜ್ಞಾಪಿಸಿ ಕೊಂಡು, ಹಿಂದೂಸ್ಥಾನಿ ಸೇವಾದಳದ ಇತಿಹಾಸವನ್ನು ವಿವರಿಸಿ ದೇಶಕ್ಕೆ ಬಂದಿ ರುವ ಸ್ವಾತಂತ್ರ್ಯವನ್ನು ರಕ್ಷಿಸುವ ಭಾರವು ಈ ಯುವಕರ ಮೇಲೆ ಬಿದ್ದಿರುವುದಾಗಿ ತಿಳಿ ಸಿ, ವಿದ್ಯಾರ್ಥಿಗಳು ಈ ಘಟನೆಯನ್ನು ಒಟ್ಟು ಮಾಡಿ ತಮ್ಮ ಕೆಲಸವನ್ನು ನೆರವೇರಿಸಲು ತಾ ವು ಬಂದಿರುವುದಾಗಿ ತಿಳಿಸಿದರು.

ರಾಜೇಂದ್ರ ಪ್ರಸಾದರ ಭಾವಚಿತ್ರದ ಅನಾವರಣ

ರಾಷ್ಟ್ರಾಧ್ಯಕ್ಷರಾದ ಡಾ॥ ರಾಜೇಂದ್ರ ಪ್ರಸಾದರ ಭಾವಚಿತ್ರವನ್ನು ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವ ರು ನಗರದ ಪೌರಸಭೆಯಲ್ಲಿ ನಾಳೆ ಸಂ ಜೆ ೬-೩೦ ಗಂಟೆಗೆ ಅನಾವರಣ ಮಾಡು ವರು.

ಮೆಡಿಕಲ್ ಕಾಲೇಜಿನ ರಜತ ಮಹೋತ್ಸವ

ಮೈಸೂರು ೬

ಶ್ರೀಮನ್ಮಹಾರಾಜರು ನಾಳೆ ಬೆಳಿಗ್ಗೆ ೧೦ ಗಂಟೆಗೆ ರಾಜಧಾನಿಯ ಕೃಷ್ಣ ಪ್ರದರ್ಶನಾಲಯದಲ್ಲಿ ಸ್ಥಳೀಯ ಮೆಡಿಕಲ್ ಕಾಲೇಜಿನ ರಜತ ಮಹೋತ್ಸವದ ಪ್ರಾರಂಭೋತ್ಸವವನ್ನು ನೆರವೇರಿಸುವರು. ಶಸ್ತ್ರವೈದ್ಯ ಪ್ರವೀಣ ಡಾ॥ ಎಸ್ ಸುಬ್ಬರಾಯರು ಪ್ರದರ್ಶನವನ್ನು ತೆರೆಯುವರು ೯ನೇ ತಾ॥ ಸಂಜೆ ೪ ಗಂಟೆಗೆ ಪ್ರೊ॥ ಚಾನ್ಸಲರಾದ ಡಾ॥ ಸಿ ಆರ್ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆಯು ಜರುಗುವುದು

ಖದ್ದರ್ ಸಹಕಾರ ಸಂಘ

ರಾಜಧಾನಿಯ ಖದ್ದರ್ ಪರಸ್ಪರ ಸಹಾಯ ಸಂಘದ ಪ್ರಸಕ್ತ ಸಾಲಿನ ಡೈರೆಕ್ಟರುಗಳ ಚುನಾವಣೆಯು ನಡೆದು ಕೆಳಗಿನವರು ಆರಿಸಲ್ಪಟ್ಟಿರುತ್ತಾರೆ:— ಅಧ್ಯಕ್ಷರು:- ಶ್ರೀ ಎಂ ಲಕ್ಷ್ಮೀನಾರಾಯಣರಾವ್, ಉಪಾಧ್ಯಕ್ಷರು:- ಶ್ರೀ ಎಸ್ ಶ್ರೀರಂಗಾಚಾರ್, ಕಾರ್ಯದರ್ಶಿ- ಶ್ರೀ ಆರ್ ಶ್ರೀನಿವಾಸಾಚಾರ್; ಸದಸ್ಯರು ಶ್ರೀಗಳಾದ ಎಂ ಎ ದೊರೆಸ್ವಾಮಿ ಅಯ್ಯಂಗಾರ್, ಟಿ ಗೋಪಾಲಕೃಷ್ಣ ಶೆಟ್ಟಿ, ಎ ಸೂರ್ಯನಾರಾಯಣ ಪಂಡಿತ್, ಎಂ ಎ ರಾಮಚಂದ್ರ ಜೋಯಿಸ್, ಕೆ ರಾಮಕೃಷ್ಣ, ಎಂ ಕೆ. ರಾಜಗೋಪಾಲ್, ಕೆ ಆರ್ ರಾವ್, ವೈ ಎಸ್ ಶ್ರೀಕಾದ್ರಿ, ಕೆ ನಾರಾಯಣಸ್ವಾಮಿ, ಹೆಚ್ ಎ ಸುಬ್ರಹ್ಮಣ್ಯ, ಕೆ ಕೃಷ್ಣಯ್ಯಂಗಾರ್, ಮತ್ತು ಟಿ ಎ ಪದ್ಮನಾಭರಾವ್

"ಮಜ್‌ದೂರ್" ವಾರಪತ್ರಿಕೆ

ರಾಜಧಾನಿಯ ಸಮಾಜವಾದಿ ಪಕ್ಷದ ಸದಸ್ಯರಾದ ಶ್ರೀ ಬಿ ಶ್ರೀಕಂಠಪ್ಪನವರ ಹೊರಡಿಸಿರುವ "ಮಜದೂರ್" ಎಂಬ ಸ್ವತಂತ್ರ ವಾರಪತ್ರಿಕೆಯು ಸಂಚಿಕೆಯೊಂದು ನಮ್ಮ ಕೈ ಸೇರಿದೆ. ಪತ್ರಿಕೆಯಲ್ಲಿ ಪ್ರಚಲಿತ ರಾಜಕೀಯ, ಸಮಾಜವಾದಿ ಪಕ್ಷದ ಧೋರಣೆ ಬಗ್ಗೆ ಲೇಖನಗಳಿವೆ

ಭೂಕಂಪದ ನಿವಾರಣೆಗಾಗಿ ಯಜ್ಞ ಯಾಗಾದಿಗಳು

ಅಸ್ಸಾಮಿನಲ್ಲಿ ದಿನಕ್ಕೆ ಸರಾಸರಿ ೧೩ ಬಾರಿ ಭೂಮಿಯು ನಡುಗುತ್ತಿದ್ದು, ಇದುವರೆಗೆ ೨೫೦ ಸಾರಿ ಭೂಕಂಪವಾಗಿದೆ. ಭಯಗ್ರಸ್ತರಾದ ಜನರು ಯಜ್ಞ ಯಾಗಾದಿಗಳನ್ನೂ, ಕಾಡುಜನರು ಪ್ರಾಣಿಬಲಿಗಳನ್ನೂ ಮಾಡಿ ಭೂದೇವಿಯನ್ನು ತೃಪ್ತಿಪಡಿಸುತ್ತಿದ್ದಾರೆ

ಸುಂದರವೂ ಬಾಳಿಕೆಯುಳ್ಳವೂ ಆದ

ಬೋರ್ಡುಗಳನ್ನು

ಅಗ್ಗವಾಗಿ ಬರೆದುಕೊಡುತ್ತೇವೆ

ಓರಿಯಂಟಲ್ ಇಂಡಸ್ಟ್ರೀಸ್,

ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು.

ಗಣೇಶಾ ಟಾಕೀಸ್

7-9-50ನೇ ಗುರುವಾರದಿಂದ

ಪ್ರತಿ ದಿನ 3 ಆಟಗಳು

ಲವಂಗಿ

(ತಮಿಳು)

ಪಾತ್ರ:- ವೈ. ವಿ ರಾವ್, ಸಾರಂಗಪಾಣಿ ಟಿ. [illegible], ಮತ್ತು ರುಕ್ಮಿಣಿ

"ಯುಗಾಂತರ" ಪತ್ರಿಕೆ

ಕಮ್ಯೂನಿಸ್ಟ್ ಸಹಾನುಭೂತಿಗಳಾದ ಶ್ರೀ ಎಸ್ ಡಿ ಶಂಕರರವರು ಈ ತಿಂಗಳು ೧ನೇ ತಾರೀಖಿನಿಂದ "ಯುಗಾಂತರ" ಎಂಬ ಕನ್ನಡ ವಾರ ಪತ್ರಿಕೆಯನ್ನು ಹೊರಡಿಸುತ್ತಿದ್ದಾರೆ. ಪತ್ರಿಕೆಯು ೮ ಪುಟಗಳದ್ದು. ಅದರಲ್ಲಿ ಪ್ರಸಿದ್ಧ ಸಾಹಿತಿಗಳಾದ ಅ ನಾ ಕೃಷ್ಣರಾವ್, ಪತ್ರಿಕಾ ಸಂಪಾದಕರಾದ ಶ್ರೀ ಹೆಚ್ ಎಸ್ ದೊರೆಸ್ವಾಮಿ, ಕುವೆಂಪು ವಿ ಕಣ್ಣ, ಸಂಪಾದಕರ ಲೇಖನಗಳು ಪ್ರಕಟವಾಗಿವೆ. ಕೊರಿಯಾ ಯುದ್ಧದ ಕಾರಣ ಮುಂತಾದ ವಿಚಾರಗಳನ್ನು ತಿಳಿಸುವ ಲೇಖನವೂ ಇದೆ. ಮುಖಪತ್ರದಲ್ಲಿ ಸುಪ್ರಸಿದ್ಧ ರಷ್ಯಾ ಬರಹಗಾರರಾದ ಮ್ಯಾಕ್ಸಿಂ ಗಾರ್ಕಿಯವರ ಚಿತ್ರವಿದೆ. ವಿಚಾರ ಪ್ರಚೋದಕವಾದ ವಿಷಯಗಳನ್ನು ಈ ಪತ್ರಿಕೆಯು ಒಳಗೊಂಡ ಸಕಲರೂ ಓದಲು ಅರ್ಹವಾಗಿದೆ. ಪತ್ರಿಕೆಯು ಚಿರಕಾಲ ಬಾಳಲೆಂದು ನಾವು ಹಾರೈಸುತ್ತೇವೆ. ಇದರ ಬೆಲೆ ೦ ೪-೦

○ ಅಮೇರಿಕದ ಕೊಲೆಗಾರರ ಸಂಖ್ಯೆಯಲ್ಲಿ ಪುರುಷರ ಸಂಖ್ಯೆಗಿಂತಲೂ ಸ್ತ್ರೀಯರ ಸಂಖ್ಯೆ ಹೆಚ್ಚಾಗಿರುವುದಾಗಿ ಅಲ್ಲಿನ ಪೊಲೀಸ್ ಇಲಾಖಾ ಮುಖ್ಯಾಧಿಕಾರಿಗಳು ತಿಳಿಸಿರುವರು

ಉಪನ್ಯಾಸಗಳು

ರಾಜಧಾನಿಯ ಪಂಡಿತರಾದ ಶ್ರೀ ಎಂ ಎ ದೊರೆಸ್ವಾಮಿ ಅಯ್ಯಂಗಾರ್ಯರು "ಬಹು ಸಂಖ್ಯಾತರ ಆಳ್ವಿಕೆ" ಎಂಬ ವಿಷಯದ ಮೇಲೆ ಈ ಸಂಜೆ ೬ ಗಂಟೆಗೆ ರಾಜಧಾನಿಯ ಕೌಟಿಲ್ಯ ಮಂಡಲಿ ಆಶ್ರಯದಲ್ಲಿ ಮಹಾರಾಜಾ ಕಾಲೇಜಿನಲ್ಲಿ ಉಪನ್ಯಾಸ ಮಾಡುವರು. ಶ್ರೀ ಜಿ ಎಸ್ ಚಿತ್ರಪತಿಗಳು ೧೪ನೇ ತಾ॥ ಸಂಜೆ ೬ ಗಂಟೆಗೆ ಅದೇ ಕಟ್ಟಡದಲ್ಲಿ "ಗೀತಾ ಮತ್ತು ರಾಜಕೀಯ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

ಸಾರ್ವಜನಿಕ ವಿದ್ಯಾರ್ಥಿನಿಲಯಕ್ಕೆ ಡಾ॥ ಹರಿಕೇಶರರ ಭೇಟಿ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ಮೊನ್ನೆ ಸಂಜೆ ಸೇನಾಪತಿ ಡಾ॥ ಹರಿಕೇಶರರು ಭೇಟಿಯಿತ್ತು, ವಿದ್ಯಾರ್ಥಿಗಳ ಪಕ್ಷದ ಗಾರ್ಡ್ ಆಫ್ ಆನರ್ ಅನ್ನು ಸ್ವೀಕರಿಸಿದರು. ವ್ಯವಸ್ಥಾಪಕರಾದ ಶ್ರೀ ಟಿ ಎಸ್ ತಿಪ್ಪಣ್ಣನವರು ನಿಲಯದ ಪರಿಚಯವನ್ನು ಅತಿಥಿಗಳಿಗೆ ಮಾಡಿಕೊಟ್ಟರು. ವಿದ್ಯಾರ್ಥಿಗಳಿಗೆ ಸೇನಾಪತಿಗಳು ಸೂಕ್ತ ಬುದ್ಧಿವಾದಗಳನ್ನು ಹೇಳಿದರು.

ರಸಿಕರಿಗೆ ಅಚ್ಚು ಮೆಚ್ಚಾದ ಜವಳಿಯೆಂದರೆ

ಮೈಸೂರು ಸಿಲ್ಕ್ ಕ್ರೇಪ್-ಜಾರ್ಜೆಟ್ ಸೀರೆಗಳು

ಧರ್ಮಾವರದ ಕೋರಾ ಕೆಂಪು ಸೀರೆಗಳು ಪೂನಾ, ನಾಗಪೂರ್ ಸೀರೆಗಳು

ಎಂ. ವಿ. ಭೋಜಯ್ಯ ಬಿ ಎ & ಬ್ರದರ್ಸ್,

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು.

NOTIFICATION

Quotations are invited for supply of stone Road Rollers of the following sizes and the frames suitable to them The last date of the receipt of quotation is 8th September at 5 P. M

STONE ROAD ROLLERS

2½ feet diameter, 3 feet long or 3 feet diameter, 3 feet long. (No Required 12)

FRAMES---

1) Frames to suit stone Rollers of 3 feet x 3 feet with frame work out of 2½ inches by 2½ inches by ¼ inch angles and 2½ inches by 3/8 inch flat iron for the yoke portion with 2 numbers C. I Pedastal with gun metal bearing 2½ inches diameter and two numbers M S. axles with paintings etc, complete (No Required 12)

2) Frames to suit stone rollers of 2 1/2 feet diameter, 3 feet long as per above specification.

3) do- do- without gun metal bearings (No. Required 12)

District Board, Mysore 29-8-50

B. M. CHANNABASAPPA, President,

ಪ್ರಭಾ * ಮುಂದಿನ ಬದಲಾವಣೆ

(ಫೋನ್ 569)

ಸ್ಕ್ರೀನ್ ಥಿಯೇಟರ್ಸ್‌ರವರ (ಹಿಂದಿ) ಚಿತ್ರ

ಮಂಜೂರ್

ಪಾತ್ರ:- ರೇಹಾನ ರಾಜ್ ಕಪೂರ್

ಚಂದ್ರಮೋಹನ [illegible]

ಸಂಗೀತ:-ಶಂಕರ ಜೈಕಿಷನ್

ಗೋಮಟೇಶ್ವರರಿಗೆ ಮಸ್ತಕಾಭಿಷೇಕ

ಬೆಳಗೊಳ ರಾಜ ವಂಶದವರಿಂದ ನಿರ್ಮಿತವಾದ ಶ್ರೀ ಶ್ರವಣ ಗುಡ್ಡದಲ್ಲಿರುವ ಗೋಮಟ ಗಿರಿ ಕ್ಷೇತ್ರದಲ್ಲಿ ಇದ್ದಾಗ ನಾಗಿದ್ದ ಗಿರಿಯ ಮೇಲೆ ಶಿಥಿಲವಾಗಿರುವ ಚೈತ್ಯಾಲಯ ಪ್ರವೇಶಕ್ಕೆ ಅನುಕೂಲ ಕಲ್ಪಿಸಿರುವುದರಿಂದ ೧೦ರ ಗೋಮಟೇಶ್ವರರಿಗೆ ಬರುವ ೧೦ನೇ ತಾ॥ ಬೆಳಿಗ್ಗೆ ೧೦॥ ಗಂಟೆಗೆ ಮಸ್ತಕಾಭಿಷೇಕವು ನಡೆಯುವುದು. ಮೈಸೂರಿನಿಂದ ಹುಣಸೂರು ರಸ್ತೆಯ ಮೂಲಕ ೧೬ ಮೈಲಿ ದೂರದಲ್ಲಿ ಈ ಕ್ಷೇತ್ರವಿದ್ದು, ಸಾಗರಕಟ್ಟೆ ರೈಲ್ವೆ ಸ್ಟೇಷನ್ನಿನಿಂದ ಬೆಟ್ಟದ ತಪ್ಪಲಿಗೆ ಹೋಗಲು ವಾಹನ ಸೌಕರ್ಯ ಮತ್ತು ಭೋಜನವನ್ನು ಏರ್ಪಡಿಸಲಾಗಿದೆ. ಸಕಲರೂ ಉತ್ಸವದಲ್ಲಿ ಭಾಗಿಗಳಾಗಬೇಕೆಂದು ರಾಜಧಾನಿಯ ಜೈನ ಮುಖಂಡರು ತಿಳಿಸಿರುತ್ತಾರೆ

ನಂಜನಗೂಡು ವಕೀಲರ ಸಂಘದ ಕಟ್ಟಡದ ಪ್ರಾರಂಭೋತ್ಸವ

ಸಂಸ್ಥಾನದ ಶ್ರೇಷ್ಠ ನ್ಯಾಯಾಧೀಶರಾದ ರಾವ್ ಬಹದ್ದೂರ್ ಸಿ. ವೆಂಕಟಸುಬ್ಬಯ್ಯನವರು ಅಲ್ಲಿನ ವಕೀಲರುಗಳ ಸಂಘದ ಕಟ್ಟಡದ ಪ್ರಾರಂಭೋತ್ಸವವನ್ನು ನಾಳೆ ಬೆಳಿಗ್ಗೆ ೯-೩೦ ಗಂಟೆಗೆ ನೆರವೇರಿಸುವರು

ಲೋಯರ್ ಸೆಕೆಂಡರಿ ಮತ್ತು ಹಿಂದಿ ತರಗತಿಗಳು

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀರಾಮ ಸಹಾಯ ಸಂಘದ ಆಶ್ರಯದಲ್ಲಿ ಲೋಯರ್ ಸೆಕೆಂಡರಿ ತರಗತಿಗಳನ್ನೂ ಮತ್ತು ಹಿಂದಿ ಪ್ರಾಥಮಿಕ ಮಾಧ್ಯಮ ರಾಷ್ಟ್ರಭಾಷಾ ತರಗತಿಗಳನ್ನೂ ಹಲವು ದಿವಸಗಳಿಂದಲೂ ನಡೆಯುತ್ತಲಿದ್ದಾರೆ. ಸೇರಲು ಇಚ್ಛೆಯುಳ್ಳವರು ಇದೇ ಮಾಹೆ ೧೦ನೇ ತೇದಿಯೊಳಗೆ ಸೇರಬಹುದೆಂದು ಸಂಚಾಲಕ ಶ್ರೀ ಸಿದ್ದಗಾಲಂ ಶಾಮರಾಯರು ತಿಳಿಸಿರುತ್ತಾರೆ

ಗುರುದೇವ ಹಾಲ್

ಶಿವರಾಂಪೇಟೆ .. ಮೈಸೂರು

ನವೀನವಾದ ಡಿಸೈನುಗಳಲ್ಲಿ

ಧರ್ಮಾವರಂ, ಕಂಚಿ ಸೀರೆಗಳು

ಹೊಸದಾಗಿ ಬಂದಿರುತ್ತವೆ

ಇಂದೇ ದಯಮಾಡಿ ಭೇಟಿ ಕೊಡಿ

ಒಲಂಪಿಯಾ

'ಆಬೀದ್' ಇನ್ನು 2 ದಿನಗಳು ಮಾತ್ರ

8-9-50ರಿಂದ :. ಅಮೋಘ ಪ್ರಾರಂಭ

ಜೆಮಿನಿ ಅಲ್ಲ ಸಹಸ್ರಾದಿನ

ಅಪೂರ್ವ ಪೌರಾಣಿಕ ಚಿತ್ರ

ಭೀಷ್ಮಪ್ರತಿಜ್ಞ

ಪಾತ್ರ:- ನಳ್ಳಿ, ಸಾಹು ಮೋದಕ್, ಪೂರ್ಣಿಮಾ

ಬೆಳಗಿನ ಪ್ರದರ್ಶನ 8-9-50ರಿಂದ

ಮೂರು ದಿನಗಳು ಮಾತ್ರ

ರಿಪಬ್ಲಿಕ್‌ರವರ

ಅಡ್ವೆಂಚರ್ಸ್ ಆಫ್ -

- ಫ್ರಾಂಕ್ ಜೆಸ್ಸಿ ಜೇಮ್ಸ್

೧೩ ಭಾಗಗಳ ಪೂರ್ಣ ಸೀರಿಯಲ್

Edited, printed and published by A K Nagarajan at Sadhvi Press D Subbiah Road, Mysore

ಫೋನ್ ನಂ 792 ॥ ಶ್ರೀ ದೇವಿ ಪ್ರಸನ್ನ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೯] ಗುರುವಾರ ೭-೯-೫೦ [ಸಂಚಿಕೆ ೩೯

ಲಾಹೋರ್ ನಗರಕ್ಕೆ ಪ್ರವಾಹದಿಂದ ವಿಪತ್ತು

ಬಹು ಮಹಾಪಕ್ಷ ಮತ್ತು ಅಲ್ಪಸಂಖ್ಯಾತರು

ಶ್ರೀ ದೊರೆಸ್ವಾಮಿ ಅಯ್ಯಂಗಾರ್ಯರ ಭಾಷಣ

ಮೈಸೂರು ೭

ರಾಜಧಾನಿಯ ಕೌಟಿಲ್ಯ ಮಂಡಲಿಯ ಆಶ್ರಯದಲ್ಲಿ ನೆನ್ನೆ ಮಹಾರಾಜಾ ಕಾಲೇಜಿನಲ್ಲಿ ವಕೀಲರಾದ ಶ್ರೀ ಎಂ. ಎ. ದೊರೆಸ್ವಾಮಿ ಅಯ್ಯಂಗಾರ್ಯರು "ಬಹು ಮಹಾಪಕ್ಷ" ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಂ. ವಿ. ಗೋಪಾಲಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು. ಗ್ರೀಸಿನಲ್ಲಿ ಮೊದಲು ಬಹುಮಹಾಪಕ್ಷವು ಜಾರಿಯಲ್ಲಿದ್ದಂತೆ ತಿಳಿಯಲಾಗುತ್ತಿರುವುದು ತಪ್ಪೆಂದೂ, ಕ್ರಿ. ಪೂ. ೫೦೦ರಲ್ಲಿ ಭಾರತದಲ್ಲಿ ಆ ಪದ್ಧತಿಯು ಇತ್ತೆಂದೂ, ಬೌದ್ಧ ಧರ್ಮ ಮತ್ತು ಕೌಟಿಲ್ಯರ ಅರ್ಥಶಾಸ್ತ್ರಗಳಲ್ಲಿ ಬಹುಮಹಾಪಕ್ಷ ಪದ್ಧತಿಯ ಸ್ಪಷ್ಟ ಉಲ್ಲೇಖವಿರುವುದರಿಂದಲೂ, ಹೇಳಿದರು. ಬಹುಮಹಾಪಕ್ಷವೇ ಪ್ರಜಾ ಪ್ರಭುತ್ವವಲ್ಲ. ಅದು ಅದರಲ್ಲಿ ಒಂದು ವಿಭಾಗ, ಬಹುಮತದವರಿಗೆ ಇರುವಷ್ಟೇ ಪ್ರಾಮುಖ್ಯತೆಯು ಅಲ್ಪಸಂಖ್ಯಾತರಿಗೂ ಇರಬೇಕು. ಯೋಗ್ಯತಾ ಪರೀಕ್ಷೆ, ರಹಸ್ಯ ಮತದಾನಗಳನ್ನುಳ್ಳ ಜನರು ಅಲ್ಪಸಂಖ್ಯಾತರಾಗಿದ್ದರೂ ಅವರಿಗೂ ಪ್ರಾಧಾನ್ಯತೆ ಇರುವುದು ಪ್ರಜಾ ಪ್ರಭುತ್ವದ ಲಕ್ಷಣ—ಎಂದು ಭಾಷಣಕಾರರು ಹೇಳಿದರು.

ಮೈಸೂರು ಸಬ್ ಜೈಲಿನ ಖಾಸಗಿ ವಿಸಿಟರುಗಳು

ಮೈಸೂರು ಸಬ್ ಜೈಲಿನ ಪರಿಶೀಲನೆ ನಡೆಸಲು ಸರ್ಕಾರದವರು ಕೆಳಗೆ ಕಂಡವರನ್ನು ಎರಡು ವರ್ಷ ಕಾಲ ಖಾಸಗೀ ವಿಸಿಟರುಗಳನ್ನಾಗಿ ನೇಮಿಸಿರುತ್ತಾರೆ:—ಶ್ರೀಗಳಾದ ಇ. ಪಿ. ನಂಜಪ್ಪ, ಯು. ಎಲ್. ರಾಮಚಂದ್ರರಾವ್, ಎಸ್. ಲಿಂಗಪ್ಪ, ಎ. ಆರ್. ಪೂರ್ಣಯ್ಯ, ಎಂ. ಆರ್. ಸಿ. ಸಪ್ಪ ಮತ್ತು ಶ್ರೀಮತಿ ಸುನಂದಮ್ಮ.

ಸ್ವಾಗತ ಸಮಾರಂಭ

ಮುಖ್ಯ ಮಂತ್ರಿಗಳಾದ ಶ್ರೀ ಕೆ. ಸಿ. ರೆಡ್ಡಿಯವರ ಸಹೋದರರು, ಶ್ರೀಮಾನ್ ಕ್ಯಾಸಂಬಳ್ಳಿ ವೆಂಕಟರಾಮ ರೆಡ್ಡಿಯವರು ತಮ್ಮ ಪುತ್ರಿ ಸೌ॥ ವಿಮಲಾರವರನ್ನು ಬೆಂಗಳೂರು ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಹೆಚ್. ಆರ್. ಗುರುವಾ ರೆಡ್ಡಿಯವರ ಮಕ್ಕಳು ಶ್ರೀ ಹೆಚ್. ಜಿ. ಸುಂದರರಾಮ ರೆಡ್ಡಿಯವರಿಗೂ ಮತ್ತು ಮತ್ತೊಬ್ಬ ಪುತ್ರಿ ಸೌ॥ ಲೀಲಾರವರನ್ನು ಶ್ರೀ ರಾಜಾ ಹೇಟೆಯ ಮುನಿಸ್ವಾಮಿ ರೆಡ್ಡಿಯವರ ಮಕ್ಕಳು ಶ್ರೀ ಆರ್. ರಘುರಾಮ ರೆಡ್ಡಿಯವರಿಗೂ ಕೊಟ್ಟು ವಿವಾಹಗಳನ್ನು ನಡೆಸಿದ ಸಂದರ್ಭದಲ್ಲಿ ನೆನ್ನೆ ಬೆಂಗಳೂರು ಟೌನ್ ಹಾಲ್ ಭವನದಲ್ಲಿ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು.

ವಿಶ್ವಸಂಸ್ಥೆಯ ಕೊರಿಯ ನೀತಿ ಬಗ್ಗೆ ವಕೀಲರ ಖಂಡನೆ

ಸಂಯುಕ್ತ ರಾಷ್ಟ್ರ ಸಂಸ್ಥೆಯು ಎಲ್ಲ ಮೂಲತತ್ವಗಳನ್ನು ಅತಿಕ್ರಮಿಸಿ ವಿಶ್ವ ಸಂಸ್ಥೆಯು ಕೊರಿಯದಲ್ಲಿ ಅಕ್ರಮವಾದ ರೀತಿಯ ಯುದ್ಧವನ್ನು ಹೂಡಿರುವುದಾಗಿ ಆಕ್ಷೇಪಿಸಿ, ಬೊಂಬಾಯಿನ ಸುಮಾರು ೫೦೦ ಮಂದಿ ವಕೀಲರು ಸಂಯುಕ್ತ ರಾಷ್ಟ್ರ ಸಂಸ್ಥೆಯ ಕಾರ್ಯದರ್ಶಿ ಮಿ॥ ಟ್ರಿಗ್ವೆಲೀಯವರಿಗೆ ಪತ್ರ ಬರೆದಿದ್ದಾರೆ.

ಭೂಮಿ ಕುಸಿದು ಪವಿತ್ರ ಧಾಮ ಕಣ್ಮರೆ ಮುಚ್ಚಿತು

ಭೂಕಂಪದ ಪ್ರದೇಶದಲ್ಲಿದ್ದ ಹಿಂದೂಗಳಿಗೆ ಪವಿತ್ರ ಕ್ಷೇತ್ರವಾದ ಪರಶುರಾಮ ಕುಂಡವು ಪಕ್ಕದಲ್ಲಿದ್ದ ಗುಡ್ಡವು ಕುಸಿದು ಬಿದ್ದುದರಿಂದ ಮುಚ್ಚಿಹೋಗಿದೆಯೆಂದು ಅಧಿಕೃತ ವರದಿಬಂದಿದೆ.

ಅಣು ಕಾರ್ಖಾನೆಯಲ್ಲಿ ಮುಷ್ಕರ

ನ್ಯೂ ಜರ್ಸಿಯಲ್ಲಿರುವ ಅಣು ಶಕ್ತಿ ಯಂತ್ರಗಾರಿಕೆಯ ೩೦೦ ಜನ ಕಾರ್ಮಿಕರು ನೆನ್ನೆಯಿಂದ ಮುಷ್ಕರ ಹೂಡಿದ್ದಾರೆ. ಸರ್ಕಾರದವರು ಮುಷ್ಕರವನ್ನು ನಿಷೇಧಿಸಿ ಆಜ್ಞೆ ಮಾಡಿದ್ದರೂ, ಅದನ್ನು ಉಲ್ಲಂಘಿಸಲಾಗಿದೆ. ಗಂಟೆಗೆ ೧೦ ಸೆಂಟುಗಳ ಕೂಲಿ, ವಿಶ್ರಾಂತಿ ವೇತನ ಮತ್ತು ರಜಾ ದಿನಗಳ ಬೇಡಿಕೆಗಳನ್ನು ಸಲ್ಲಿಸಿ, ಮುಷ್ಕರ ಹೂಡಲಾಯಿತು.

ಗರ್ಭಸ್ರಾವಮಾಡಿಕೊಳ್ಳಲು ಜಪಾನಿನಲ್ಲಿ ಶಾಸನ

ಜಪಾನಿನಲ್ಲಿ ಮಿತಿಮೀರಿ ಹೆಚ್ಚುತ್ತಿರುವ ಜನಸಂಖ್ಯೆಯ ಬಗ್ಗೆ ಅಲ್ಲಿನ ಸರ್ಕಾರಕ್ಕೆ ಬಹಳ ಗಾಬರಿಯುಂಟಾಗಿ, ಇದನ್ನು ತಡೆಗಟ್ಟುವ ಸಲುವಾಗಿ ಮೂರು ಮಕ್ಕಳನ್ನು ಪಡೆದ ನಂತರ ತಾಯಂದಿರು ಗರ್ಭಸ್ರಾವ ಮಾಡಿಕೊಳ್ಳಬೇಕೆಂಬ ಬಗ್ಗೆ ಶಾಸನವನ್ನು ಮಾಡಲು ಸರ್ಕಾರದವರು ಆಲೋಚಿಸುತ್ತಿರುವರೆಂದು ವರದಿಯಾಗಿದೆ.

ಖಾಸಿಂ ರಜ್ವಿ ಮೊಕದ್ದಮೆ ತೀರ್ಪು ೧೧ಕ್ಕೆ

ಹೈದರಾಬಾದಿನಲ್ಲಿ ನಡೆದ ಜೋಬಿಪಲ್ಲಿ ೩೯ ಕೊಲೆ ಮತ್ತು ಬೀಬಿನಗರದ ದರೋಡೆ ಸಂಬಂಧದ ಮೊಕದ್ದಮೆಯ ತೀರ್ಪನ್ನು ಈ ತಿಂಗಳು ೯ಕ್ಕೆ ಬದಲಾಗಿ ೧೧ನೇ ತಾರೀಖು ಕೊಡಲಾಗುವುದೆಂದು ಗೊತ್ತಾಗಿದೆ.

ಉದಾರ ದಾನ

ರಾಜಧಾನಿಯ ವಕೀಲರ ಸಂಘದ ಸದಸ್ಯರುಗಳ ಉಪಯೋಗಕ್ಕಾಗಿ ವಕೀಲರುಗಳಾದ ಶ್ರೀ ಸಿ. ನರಸಿಂಹಯ್ಯ ಮತ್ತು ಶ್ರೀ ಟಿ. ಆ. ರಾಮಚಂದ್ರ ರಾಯರು ಆಲ್ ಇಂಡಿಯಾ ರಿಪೋರ್ಟರಿನ ೧೦೭ ಪುಸ್ತಕಗಳನ್ನು ತೀಗದ ಮಾರನೆ ಬೀರುವಿನೊಡನೆ ಸಂಘಕ್ಕೆ ದಾನ ಮಾಡಿರುತ್ತಾರೆ.

ತೆಂಗಿನ ಫಸಲು ಕದ್ದುದಕ್ಕಾಗಿ ಪೆಟ್ಟು

ಮೈಸೂರು ೭

ರಾಜಧಾನಿಗೆ ನಮ್ಮ ಹರಾಜ ಮೊಹಲ್ಲಾ ವಿಭಾಗದಲ್ಲಿರುವ ದೇವನೂರ ಗ್ರಾಮದ ಬಳಿ ಜಮೀನಿನಲ್ಲಿ ನೆನ್ನೆ ರಾತ್ರಿ ಬೆಟ್ಟ ಎಂಬುವನು ಕದ್ದುಮುಚ್ಚಿ ತೆಂಗಿನ ಫಸಲನ್ನು ಕುಯ್ಯುತ್ತಿದ್ದನೆಂದು ಕೆಲವರು ಅವನನ್ನು ಹಿಡಿದು ಹೊಡೆದರು. ಗಾಯಗೊಂಡ ಅವನಿಗೆ ಪ್ರಜ್ಞೆ ತಪ್ಪಿದೆ. ಅವನನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲಾಗಿದೆ. ಈಗ ಗಣಪ ಮತ್ತಾಗ ಶ್ರೀರಾಮನೆ ಪೋಲೀಸರು ತನಿಖೆ ನಡೆಸುತ್ತಿರುವರು.

ಧ್ವಜ ಸ್ತಂಭದ ಮೇಲಿನ ಚಿನ್ನದ ಕಳವು

ತಿರುನೆಲ್ವೇಲಿ ಬಳಿ ಆಳ್ವಾರ್ ತಿರುನಗರಿ ಎಂಬಲ್ಲಿ ಶ್ರೀ ಆದಿನಾಥಸ್ವಾಮಿ ಮತ್ತು ಶ್ರೀ ನಮ್ಮಾಳ್ವಾರ್ ದೇವಾಲಯಗಳ ಮುಂದೆ ಧ್ವಜಸ್ತಂಭದ ತಾಮ್ರದ ಕಲಶಗಳಿಗೆ ಹಾಕಲಾಗಿದ್ದ ಚಿನ್ನದ ಮುಲಾಮನ್ನು ಯಾರೋ ಒಡೆದು ಕಳವು ಮಾಡಿದ್ದುದನ್ನು ಹಿಂದೂ ಧರ್ಮ ಸಂಸ್ಥೆಯ ಅಸಿಸ್ಟೆಂಟ್ ಕಮಿಷನರು ಪತ್ತೆ ಹಚ್ಚಿದ್ದಾರೆ. ಕಲಶದ ಬಳಿ ಕೆಲವು ಆಯುಧಗಳೂ, ಇತರ ಉಪಕರಣಗಳೂ ಮತ್ತು ಒಂದು ಬಟ್ಟೆಯೂ ಬಿದ್ದಿದ್ದುವೆಂದು ಹೇಳಲಾಗಿದೆ.

ಸುಣ್ಣದ ಗೂಡಿಗೆ ಬಿದ್ದು ವಿದ್ಯಾರ್ಥಿಗಳ ಮರಣ

ದೇವಕೋಟೆಯ ಶಾಲೆಯಲ್ಲಿ ಓದುತ್ತಿದ್ದ ೧೩ ವರ್ಷ ವಯಸ್ಸಿನ ಇಬ್ಬರು ವಿದ್ಯಾರ್ಥಿಗಳು ಕಳೆದ ಶನಿವಾರ ಸಂಜೆ ಹತ್ತಿರದ ಒಂದು ಹಳ್ಳಿಗೆ ಹೋಗುತ್ತಿದ್ದಾಗ ಆಕಸ್ಮಾತ್ ದಾರಿಯಲ್ಲಿದ್ದ ಒಂದು ಸುಣ್ಣದ ಗೂಡಿಗೆ ಬಿದ್ದು ಮೃತಪಟ್ಟರೆಂದು ವರದಿಯಾಗಿದೆ.

ಮಕ್ಕಳೊಡನೆ ಬಾವಿಗೆ ತಾಯಿ ಬಿದ್ದಳು

ಕಡೂರು ತಾಲ್ಲೂಕು ಚಿಕ್ಕದೇವನ ಹಳ್ಳಿಯ ಹೆಂಗಸೊಬ್ಬಳು ಜೀವನದಲ್ಲಿ ಬೇಸತ್ತು ತನ್ನ ಎರಡು ಮಕ್ಕಳನ್ನು ಬಾವಿಗೆ ಎತ್ತಿ ಹಾಕಿ ಅನಂತರ ತಾನೂ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ವರದಿಯಾಗಿದೆ.

ಲಾಹೋರು ನಗರಕ್ಕೆ ವಿಪತ್ತು

ರಾವಿ ನದಿಯು ಉಕ್ಕುತ್ತಿರುವುದರಿಂದ ಲಾಹೋರ್ ನಗರದ ಬಹು ಭಾಗಗಳಿಗೆ ವಿಪತ್ತು ಸಂಭವಿಸಿದೆ. ಪಶ್ಚಿಮ ಪಂಜಾಬಿನ ಬಿಯಾಸ್ ಮತ್ತು ಸಟ್ಲೆಜ್ ನದಿಗಳಲ್ಲಿ ನೀರು ಉಕ್ಕಿ ಬರುತ್ತಿದೆ. ಭಾರಿ ಮಳೆ ಸುರಿದ್ದು, ಆ ಪ್ರದೇಶದಲ್ಲಿ ಒಂದು ದಿನದಲ್ಲಿ ೧೧ ಇಂಚು ಮಳೆಯಾಗಿದೆ. ೧೩ ಹಳ್ಳಿಗಳು ಕೊಚ್ಚಿಹೋಗಿವೆ. ೪೫ ಚದುರ ಮೈಲಿ ಪ್ರದೇಶವು ನೀರಿನಲ್ಲಿ ಮುಳುಗಿದೆ.

ಕೊರಿಯಾದಲ್ಲಿ ೯ ಸಾವಿರ ಅಮೆರಿಕನ್ನರ ಸಾವುನೋವು

ಕೊರಿಯಾದ ಯುದ್ಧದಲ್ಲಿ ೮೭೬೩ ಜನ ಅಮೆರಿಕನ್ನರಿಗೆ ಸಾವು ನೋವುಗಳಾಗಿರುವುದಾಗಿ ಅಧಿಕಾರಯುತ ಪ್ರಕಟನೆಯು ತಿಳಿಸಿದೆ. ಬ್ರಿಟಿಷ್ ಸೈನ್ಯವು ನೆನ್ನೆ ಇದೇ ಮೊದಲಾಗಿ ಕಮ್ಯೂನಿಸ್ಟರೊಡನೆ ನಾಕ್ಟಾಂಗ್ ನದಿ ಹತ್ತಿರ ಕಾಳಗವನ್ನು ಪ್ರಾರಂಭಿಸಿದವು. ಟೇಗೂ ನಗರಕ್ಕೆ ಒದಗಿದ್ದ ಅಪಾಯವು ಕಡಿಮೆಯಾಗಿದೆ.

ಮಾಂಚೂರಿನಲ್ಲಿ ಆಹಾರ ಧಾನ್ಯದ ಲೂಟಿ

ಮಾಂಘೀರ್ ಜಿಲ್ಲೆಯ ಸ್ಥಳಗಳಲ್ಲಿ ಆಹಾರ ಧಾನ್ಯಗಳ ಲೂಟಿ ನಡೆದ ವರದಿಗಳು ಬಂದಿವೆ. ಶಸ್ತ್ರ ಸಜ್ಜಿತರಾದ ನೂರ್ಕು ಜನರ ತಂಡವೊಂದು ನದಿಯಲ್ಲಿ ಹೋಗುತ್ತಿದ್ದ ದೋಣಿಯ ಮೇಲೆ ಧಾಳಿ ಮಾಡಿ ೨೫೦ ಮೂಟೆ ಧಾನ್ಯವನ್ನು ಲೂಟಿ ಮಾಡಿದೆ. ಮತ್ತೊಂದು ಕಡೆ ೨೫ ಜನರು ೧೦೦ ಮಣ ಧಾನ್ಯವನ್ನು ಲೂಟಿ ಮಾಡಿದರೆಂದೂ ಹೇಳಲಾಗಿದೆ.

ಖಾದಿಗೆ ಉತ್ತೇಜನಕ್ಕಾಗಿ ಬಾಬು ರಾಜೇಂದ್ರರ ಮನವಿ

ದೆಹಲಿಯ ಗಾಂಧಿ ಆಶ್ರಮದವರು ನಡೆಸಿದ ಗಾಂಧಿ ಜಯಂತಿ ಸಂದರ್ಭದಲ್ಲಿ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ಒಂದು ಸಂದೇಶವನ್ನು ಕಳುಹಿಸಿ, ದೇಶದಲ್ಲಿ ರಾಜಕೀಯ ದ ಉತ್ತಮವು ಪ್ರಾಪ್ತಿಯಾಗಿ, ಚರಖ ಮತ್ತು ಖಾದಿ ಪ್ರಚಾರ ಕಾರ್ಯಗಳು ಮೂಲೆಗೆ ಬೀಳುತ್ತಿರುವುವೆಂದೂ, ಖಾದಿ ಮತ್ತು ಚರಖಗಳನ್ನು ಎಲ್ಲ ರಚನಾತ್ಮಕ ಕಾರ್ಯಗಳಿಗೂ ಮೂಲಾಧಾರವೆಂದು ಮಹಾತ್ಮ ಗಾಂಧಿಯವರು ಭಾವಿಸಿದ್ದರೆಂದೂ, ಅಂತಹುದನ್ನು ನಶಿಸಿ ಹೋಗಲು ಅವಕಾಶ ಕೊಡದೆ ಹೆಚ್ಚು ಹೆಚ್ಚಾಗಿ ಉತ್ತೇಜನ ಕೊಡಬೇಕೆಂದೂ ಮನವಿ ಮಾಡಿಕೊಂಡಿದ್ದಾರೆ.

ಮಹಾತ್ಮರ ದಕ್ಷಿಣ ಆಫ್ರಿಕದ ಸಹೋದ್ಯೋಗಿಯ ಮರಣ

ದಕ್ಷಿಣ ಆಫ್ರಿಕದಲ್ಲಿ ನೆಟಾಲ್ ಭಾರತೀಯ ಕಾಂಗ್ರೆಸ್ಸನ್ನು ಸ್ಥಾಪಿಸಲು ಮಹಾತ್ಮರಿಗೆ ನೆರವು ನೀಡಿದ ಇಬ್ರಾಹಿಂ ಮಹಮದ್ ಎಂಬುವರು ೬೫ನೇ ವಯಸ್ಸಿನಲ್ಲಿ ನೆನ್ನೆ ದಿನ ಡರ್ಬಾನಿನಲ್ಲಿ ಮೃತರಾದರೆಂದು ವರದಿಯಾಗಿದೆ.

ಬೆಲೆ ನಿಗದಿಯಾಗುವವರೆಗೆ ಮಾರಾಟಕ್ಕೆ ನಿಷೇಧ

ರಾಷ್ಟ್ರಾಧ್ಯಕ್ಷರು ಹೊರಡಿಸಿರುವ ಬೆಲೆ ಹತೋಟಿಯ ವಿಶೇಷಾಜ್ಞೆಯ ಅನುಸಾರವಾಗಿ ಮದ್ರಾಸಿನ ಸರ್ಕಾರದವರು ಸಾಮಾನುಗಳ ಬೆಲೆ ನಿಗದಿಯಾಗುವವರೆಗೆ, ಮುಖ್ಯ ಆಹಾರ ಪದಾರ್ಥ, ಸೈಕಲ್, ಬ್ಲೇಡು ಮುಂತಾದುವುಗಳನ್ನು ವರ್ತಕರು ಮಾರಕೂಡದೆಂದು ಆಜ್ಞಾಪಿಸಿದ್ದಾರೆ.

ಲಾಹೋರಿನ ೧ ಲಕ್ಷ ಜನರು ಪ್ರವಾಹದ ಮಧ್ಯೆ ಸಿಕ್ಕಿರುವರು

ಪಶ್ಚಿಮ ಪಂಜಾಬಿನಲ್ಲಿ ಹರಿಯುವ ರವಿ ನದಿಯಲ್ಲಿ ಮಹಾ ಪ್ರವಾಹವು ಬಂದು ಲಾಹೋರ್ ನಗರದ ಶಹದಾರ್, ಒಡಾ ಲವ್ ಬಾಗ್, ಮಿಸ್ರಿ ಷಾ ಪ್ರದೇಶಗಳಲ್ಲಿ ನೀರು ನುಗ್ಗಿದೆ. ಊರಿನ ಸೇತುವೆಗಳ ಮೇಲೆಲ್ಲಾ ನೀರು ಉಕ್ಕಿ ಹರಿಯುತ್ತಿದೆ. ಪ್ರವಾಹದಲ್ಲಿ ಸಿಕ್ಕಿದ ಜನ ಸ್ವಲ್ಪ … ದಿಯ ಮೃತ ದೇಹಗಳು ಪತ್ತೆಯಾಗಿವೆ. ೫೦ ಹಳ್ಳಿಗಳು ನೀರಿನಲ್ಲಿ ಮುಳುಗಿವೆ. ಜನರು ಪ್ರಾಣ ರಕ್ಷಣೆ ಮಾಡಿಕೊಳ್ಳಲು ದೊಡ್ಡ ದೊಡ್ಡ ಮರಗಳನ್ನೇರುತ್ತಿದ್ದಾರೆ. ಮತ್ತೊಂದು ಕಡೆ ಶಹದಾರ್ ನವರಿಯಲ್ಲಿಯೂ, ಪ್ರವಾಹ ಬಂದು ಅದಕ್ಕೆ ಕಟ್ಟಿದ ಏರಿಗಳು ೭ ಕಡೆಗಳಲ್ಲಿ ಒಡೆದು ಹೋಗಿ ಊರಿನೊಳಗೆ ನೀರು ತುಂಬಿದೆ. ಅಲ್ಲಿನ ವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರವು ನೆನ್ನೆ ಕೆಲಸ ಮಾಡದ ಪ್ರಯುಕ್ತ ನಗರವು ರಾತ್ರಿ ಅಂಧಕಾರದಲ್ಲಿ ಮುಳುಗಿತ್ತು. ಪ್ರವಾಹದಿಂದ ಲಾಹೋರಿನ ೧ ಲಕ್ಷ ಜನರು ನೀರಿನ ಮಧ್ಯೆ ಸಿಕ್ಕಿಕೊಂಡಿರುವರು.

ಮಾದರಿ ಗೋಶಾಲೆ

ಬಿಹಾರ್ ಸಂಸ್ಥಾನದಲ್ಲಿ ಮಾದರಿ ಗೋಶಾಲೆ ಮತ್ತು ಹೈನುಗಾರಿಕೆಯನ್ನು ನಿರ್ಮಿಸಲು ಅಲ್ಲಿನ ಸರ್ಕಾರದವರು ೨ ಲಕ್ಷ ರೂ ಗಳನ್ನು ಮಂಜೂರು ಮಾಡಿದ್ದಾರೆ. ಸದಾ ಖರ್ಚು … ಬಳಿ ಇದನ್ನು ಕಟ್ಟಲಾಗುವುದು.

ಗುರುದೇವ ಹಾಲ್

ಶಿವರಾಂಪೇಟೆ ಮೈಸೂರು

ನವೀನವಾದ ಬಾರ್ಡರುಗಳಲ್ಲಿ

ಧರ್ಮಾವರಂ, ಕಂಚಿ ಸೀರೆಗಳು

ಹೊಸದಾಗಿ ಬಂದಿರುತ್ತವೆ

ಇಂದೇ ದಯವಿಟ್ಟು ಭೇಟಿ ಕೊಡಿ

ಗಣೇಶಾ ಟಾಕೀಸ್

7-9-50ನೇ ಗುರುವಾರದಿಂದ

ಪ್ರತಿ ದಿನ 3 ಆಟಗಳು

ಲವಂಗಿ

(ತಮಿಳು)

ಪಾತ್ರ:- ವೈ ವಿ ರಾವ್, ಸುರಂಗಬಾಲ, ಜಯಮ್ಮ, ಮತ್ತು ರುಕ್ಮಿಣಿ.

ಒಲಂಪಿಯಾ

'ಅಬೇದ' ಇದೇ ಕಡೇ ದಿನ

8-9-50ರಿಂದ :: ಅಮೋಘ ಪ್ರಾರಂಭ

ನರ್ಗಿಸ್ ಆರ್ಟ್ ಕನ್ಸರ್ನ್‌ರವರ

ಅಪೂರ್ವ ಪೌರಾಣಿಕ ಚಿತ್ರ

ಭೀಷ್ಮ ಪ್ರತಿಜ್ಞೆ

ಪಾತ್ರ:- ನರ್ಗಿಸ್, ಸಾಹು ಮೋದಕ್, ಪುಷ್ಪರಾಣಿ

ಬೆಳಗಿನ ಪ್ರದರ್ಶನ 8 9 50ರಿಂದ

ಮೂರು ದಿನಗಳು ಮಾತ್ರ

ರಿಪಬ್ಲಿಕ್‌ರವರ

ಅಡ್ವೆಂಚರ್ಸ್ ಆಫ್ - ಫ್ರಾಂಕ್ ಜೆಸ್ಸಿ ಜೇಮ್ಸ್

೧೩ ಭಾಗಗಳ ಪೂರ್ಣ ಸೀರಿಯಲ್

ಪೊಹಾಂಗ್ ನಗರ ಕಮ್ಯೂನಿಸ್ಟರ ವಶ

ಕೊರಿಯಾದ ಪೂರ್ವ ತೀರದ ನಗರವಾದ ಪೊಹಾಂಗನ್ನು ಕಮ್ಯೂನಿಸ್ಟರು ಹಿಡಿದಿದ್ದಾರೆ. ಟೈಗೂ ನಗರಕ್ಕೆ ಪೂರ್ವದಲ್ಲಿ ೩೦ ಮೈಲಿಯಾಚೆಯ ಮುಖ್ಯ ರಸ್ತೆಗಳ ಜಂಕ್ಷನ್ ನಗರ. ಯಾಂಗ್‌ಚಾನಿಗೆ ಏನ ಗತಿಯಾಗಿದೆಯೆಂಬುದು ಗೊತ್ತಾಗಿಲ್ಲ. ಟೈಗೂ ನಗರಕ್ಕೆ ೪ ಕಡೆಗಳಿಂದ ಕಮ್ಯೂನಿಸ್ಟರು ನುಗ್ಗಲು ಪ್ರಯತ್ನವಾಗುತ್ತಿದೆ.

ಕಲ್ಕತ್ತಾದಲ್ಲಿ ೧ ದಿನದ ಸಾಂಕೇತಿಕ ಮುಷ್ಕರ

ಈ ತಿಂಗಳು ೧೨ನೇ ತಾರೀಖು ಕಲ್ಕತ್ತಾ ನಗರದಲ್ಲಿ ಸಾಂಕೇತಿಕ ಸಾರ್ವತ್ರಿಕ ಮುಷ್ಕರವನ್ನು ಹೂಡಬೇಕೆಂದು ಪಶ್ಚಿಮ ಬಂಗಾಳದ ಹಿಂದ್ ಮಜದೂರ್ ಸಭೆಯವರು ನಿರ್ಧರಿಸಿರುತ್ತಾರೆ. ೧ ಲಕ್ಷಕ್ಕಿಂತ ಹೆಚ್ಚಿನ ಜನರು ಈ ಸಭೆಯ ಸದಸ್ಯರಾಗಿರುವರು.

ಗೋಮಾಂಸದ ಮಾರಾಟ ತಪ್ಪಿಸಲು ಮನವಿ

ಬಹು ದಿನಗಳಿಂದಲೂ ಸಂಯುಕ್ತ ಸಂಸ್ಥಾನದಲ್ಲಿ ಗೋ ವಧೆಯನ್ನು ನಿಷೇಧಿಸಲಾಗಿದೆ. ಆದರೆ ಈಗ್ಗೆ ಕೆಲವು ದಿನಗಳಿಂದ ರಾಜಧಾನಿಯ ಕಸಾಯಿ ಖಾನೆಗಳಿಗೆ ಗೋಮಾಂಸವನ್ನು ಆಮದು ಮಾಡಲು ಅವಕಾಶ ಕೊಡಲಾಗಿದೆ. ಇದನ್ನು ಕೂಡಲೇ ನಿಲ್ಲಿಸಲು ಕಾರ್ಯಕ್ರಮವನ್ನು ಸರ್ಕಾರದವರು ಕೈಗೊಳ್ಳಬೇಕು ಎಂದು ನಜರ್‌ಬಾದ್ ಮೊಹಲ್ಲೆಯ ಸ್ವಯಂಸೇವಕರುಗಳು ಪ್ರಾರ್ಥಿಸಿರುತ್ತಾರೆ.

ರಘುಲಾಲ್ & ಕೋ.

ಔಷಧ ವ್ಯಾಪಾರಿಗಳು,

ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ

(ಬೆಂಗಳೂರು)

ಔಷಧ ವ್ಯಾಪಾರಿಗಳು,

70 … ರಸ್ತೆ, ಬೆಂಗಳೂರು.

Edited, printed and published by A. K. Nagarajanat Sadhvi Press D Subbiah Road, Mysore

ಪ್ರವಾಹದಿಂದ ೪ ಲಕ್ಷ ಎಕರೆ ಫಸಲು ನಷ್ಟ

ಕಳೆದ ತಿಂಗಳು ಒರಿಸ್ಸಾ ನದಿಗಳಲ್ಲಿ ಪ್ರವಾಹವು ಹೆಚ್ಚಿದುದರಿಂದ ಕಟಕ್, ಪುರಿ ಮತ್ತು ಬಾಲಸೋರ್ ಜಿಲ್ಲೆಗಳ ೪ ಲಕ್ಷ ಎಕರೆ ಸಾಗುವಳಿಯಾದ ಜಮೀನುಗಳಲ್ಲಿ ನೀರು ತುಂಬಿ, ಪೈರು ಪೂರ್ಣವಾಗಿ ನಾಶವಾಗಿದೆ.

ಪೂರ್ವ ಬಂಗಾಳದಿಂದ ೬೦ ಸಾವಿರ ಟನ್ ಅಕ್ಕಿ

ಪೂರ್ವ ಬಂಗಾಳವು ಭಾರತಕ್ಕೆ ಸುಮಾರು ೫೦ರಿಂದ ೬೦ ಸಾವಿರ ಟನ್ ಅಕ್ಕಿಯನ್ನು ಒದಗಿಸಲು ಸಾಧ್ಯವಾಗಬಹುದೆಂದು ಅಲ್ಲಿನ ಆಹಾರ ಮಂತ್ರಿ ಮಹಮದ್ ಅಫಜಲ್‌ರವರು ತಿಳಿಸಿರುತ್ತಾರೆ. ಇದರ ಬದಲು ಭಾರತವು ಅಲ್ಲಿಗೆ ಕಲ್ಲಿದ್ದಲನ್ನು ಸರಬರಾಜು ಮಾಡುವುದು.

ಚಿಟ್ಟದಪುರದ ವಿದ್ಯಾರ್ಥಿ ನಿಲಯದ ಸಂಘ

ಮೇಲ್ಕಂಡ ಸಂಘದ ಕಟ್ಟಡದಲ್ಲಿ ಕಳೆದ ಭಾನುವಾರ ಸಂಜೆ ಸಂಘದ ಪ್ರಾರಂಭ ಭಾಷಣವನ್ನು ನಂಜನಗೂಡು ವಕೀಲರಾದ ಶ್ರೀ ಎಲ್ ಶ್ರೀಕಂಠಯ್ಯನವರು ಮಾಡಿದರು. ಹುಜೂರು ಸೆಕ್ರೆಟರಿಗಳಾದ ಶ್ರೀ ಹೆಚ್ ಎನ್ ಪಾಳೇಗಾರರು ಅಧ್ಯಕ್ಷತೆ ವಹಿಸಿದ್ದರು. ಡಾ|| ವಿ|| ಎಂ ಶಿವಪ್ಪ ಮತ್ತು ಪಾರ್ಟಿಯವರಿಂದ ಸಂಗೀತ ಕಚೇರಿ ನಡೆಯಿತು.

SRI GAYATHRI

TALKIES

Daily 3 Shows

From 8-9-50 For 2 Days

PARAMOUNT'S

DEAR WIFE

With:-William Holdel

-: Morning Shows :-

On 9th Sat. & 10th Sun

CAGED FURY

Coming Shortly:-

PRINCE OF FOXES

ಸಂಸ್ಥಾನದಲ್ಲಿ ೫ ಲಕ್ಷ ಮರಗಳ ನೆಡುವಿಕೆ

ಕಳೆದ ಜುಲೈ ತಿಂಗಳಲ್ಲಿ ನಡೆದ ವನಮಹೋತ್ಸವದ ಸಂದರ್ಭದಲ್ಲಿ ಸಂಸ್ಥಾನದಲ್ಲಿ ಒಟ್ಟು ೫,೩೧,೮೯೪ ಸಸಿಗಳನ್ನು ನೆಡಲಾಯಿತು. ತಿರುವಾಂಕೂರಿನಲ್ಲಿ … ಸಾವಿರ ಗಿಡಗಳನ್ನು ನೆಡಲಾಗಿದೆ. … ಜಿಲ್ಲೆಯ ಸಂಖ್ಯೆಯು ತಿಳಿದುಬಂದಿಲ್ಲ. ರಾಜಧಾನಿಯ … ಯವರು ೧೮೭ ಸಸಿಗಳನ್ನು ನೆಟ್ಟಿದ್ದಾರೆ.

ವುಡ್‌ಲ್ಯಾಂಡ್ಸ್

8-9-50ರಿಂದ ದಿನವೂ 3 ಆಟ

ಎಂ ಆಂಡ್ ಟಿ ರವರ ಅತ್ಯುತ್ತಮ ಸಂಗೀತ ಮತ್ತು ನೃತ್ಯಗಳಿಂದ ಕೂಡಿದ ಸಾಮಾಜಿಕ ಹಿಂದಿ ಚಿತ್ರ

- ನ ಮೂ ನ

ಪಾತ್ರ - ಕಾಮಿನಿ ಕೌಶಲ್, ಕಿಶೋರ್ ಸಾಹು, ದೇವಾನಂದ್

ಬೆಂಗಳೂರು ಸ್ಟೇಟ್ಸ್ ಚಿತ್ರಮಂದಿರದಲ್ಲಿ 3ನೇ ವಾರದಲ್ಲಿ ಪ್ರದರ್ಶಿಸಲ್ಪಡುತ್ತಿದೆ

ರಾಜಕಮಲ್

ಮೈಸೂರು

— ಬೆಳಗಿನ ಪ್ರದರ್ಶನ —

8-9-50ರಿಂದ 3 ದಿನಗಳು ಮಾ

ಜಮೀನ್ದಾರ

(ಹಿಂದಿ)

ಪಾತ್ರ - ಶಾಂತಾ ಆಪ್ಟೆ, ಮನೋರಮ, ಗುಲಾಂ ಮಹಮದ್, ಎಂ ಇಸ್ಮೈಲ್

ಮೈಸೂರು ವಿಶ್ವವಿದ್ಯಾಲಯ

ಮೈಸೂರು ವಿಶ್ವವಿದ್ಯಾಲಯದ ಎಸ್.ಸಿ ಪದವಿಯಲ್ಲಿ ಅತ್ಯುತ್ತಮ ಶ್ರೇಣಿಯನ್ನು ಪಡೆದು ಬೇರೆ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಮಾಸ್ಟರ್ ಪದವಿಗಾಗಿ ಓದುತ್ತಿರುವ ಹುಡುಗರ ಸಂಗಡ … ಸಮೀಪದವರಿಗೆ ೧೯೫೦-೫೧-೫೨ ಸಾಲಿನಲ್ಲಿ ಹತ್ತು ತಿಂಗಳ ಕಾಲ ಮಾಸ ೧೦೦ ರೂ. ನ ಒಂದು ವಿದ್ಯಾರ್ಥಿ ವೇತನವನ್ನು ಪಡೆಯಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. … ಮೇಲುವಾರಕ್ಕೆ ತನ್ನ ವ್ಯಾಸಂಗವನ್ನು ಯಶಸ್ವಿಯಾಗಿ ಪೂರ್ಣಗೊಳಿಸದಲ್ಲಿ ಗಳಿಸಿಕೊಂಡಿರುವ ವಿದ್ಯಾರ್ಥಿ ವೇತನವನ್ನು ವಾಪಸು ಕೊಡಬೇಕೆಂಬ ಷರತ್ತಿನ ಮೇಲೆ ಇದನ್ನು ಕೊಡಲಾಗುವುದು.

ಅರ್ಜಿಯಲ್ಲಿ ಈ ಕೆಳಗೆ ಕಂಡ ವಿವರಗಳಿರಬೇಕು:-

೧ ಹೆಸರು ೨ ಜಾತಿ ೩ ವಿಳಾಸ ೪. ತೇರ್ಗಡೆಯಾಗಿರುವ ಪರೀಕ್ಷೆ, ರಿಜಿಸ್ಟರ್ ನಂಬರು ಮತ್ತು ವರ್ಷಗಳು ೫ … ಮುಂದುವರಿಸುತ್ತಿರುವ ವಿಷಯ

೧೬-೯-೧೯೫೦ನೇ ತಾರೀಖು ಅಥವಾ ಅದಕ್ಕೆ ಮುಂಚಿತವಾಗಿ ತಲುಪುವಂತೆ ಸೂಚಿಸಲ್ಪಟ್ಟಿರುವ ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರರಿಗೆ ಅರ್ಜಿಗಳನ್ನು ಕಳುಹಿಸಬಹುದು.

ಅಪ್ಪಣೆ ಪ್ರಕಾರ

ಸಿ. ರಂಗಾಚಾರ್, ಬಿ' ರಿಜಿಸ್ಟ್ರಾರ್

ಗೌರ್ನಮೆಂಟ್ ಶ್ರೀಲ್ಕ್ ಫ್ಯಾಬ್ರಿಕ್ ಕ್ರೇಪ್ ಜಾರ್ಜೆಟ್

ಸೀರೆಗಳಿಗೆ

ಧರ್ಮಾವರದ ಕೋರ ಸೀರೆಗಳಿಗೆ, … ನಾಗಪುರ್ ಸೀರೆಗಳಿಗೆ

ಎಂ. ವಿ. ಭೋಜಯ್ಯ ಬಿ. ಎ. & ಬ್ರದರ್ಸ್,

… ಪ್ಯಾಲೇಸ್ ಎದುರು, ಮೈಸೂರು.

— ಪ್ರಕಟಣೆ —

ಬಹಳ ದಿವಸಗಳಿಂದಲೂ ನಿರೀಕ್ಷಿಸುತ್ತಿದ್ದ ವಿಶೇಷ ಮಾದರಿಯ ನೂತನ … ಬಣ್ಣದ … ಗಳು ಈಗತಾನೆ ಬಂದಿವೆ. ಕೇವಲ ಸ್ವಲ್ಪ ಪ್ರಮಾಣದಲ್ಲಿ ಮಾತ್ರ ಸರಬರಾಜು ಆಗಿರುವುದರಿಂದ ನಮ್ಮ ಗ್ರಾಹಕರೂ, ಗಿರಾಕಿಗಳೂ ಜಾಗ್ರತೆ ಮಾಡಿ ಕೂಡಲೆ ಸಾಮಾನುಗಳನ್ನು ಪಡೆದುಕೊಳ್ಳಬೇಕೆಂದು ಕೋರಲಾಗಿದೆ. "ನ್ಯಾಯವಾದ ಬೆಲೆ ಮತ್ತು ನಗದು ವ್ಯಾಪಾರದ ಛಲ"—ಇದೇ ನಮ್ಮ ಕಾರ್ಯಶೈಲಿ.

ಅಬೀದ್ಸ್

ಗೃಹ ಸಾಮಗ್ರಿಗಳ ವರ್ತಕರು … ಚೌಕ, ಮೈಸೂರು.

ರೀ॥ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಉತ್ತರ ಅಸ್ಸಾಮಿನ ದಿಬ್ರುಗಢ ಮತ್ತು ನೆರೆಹೊರೆಗಳಲ್ಲಿ ನೆನ್ನೆ ಮತ್ತೆ ಹಲವು ಸೆಕೆಂಡುಗಳ ಕಾಲ ಭೂಕಂಪವಾಯಿತೆಂದು ವರದಿಯಾಗಿದೆ. ಶಿಲಾಂಗಿನಲ್ಲೂ ನೆನ್ನೆ ಸುಮಾರು ಬಾರಿ ಭೂಕಂಪ ಸಂಭವಿಸಿತು. ಕಳೆದ ಒಂದು ತಿಂಗಳಿಂದ ಒಂದೇ ಸಮನಾಗಿ ನಡೆಯುತ್ತಿರುವ ಭೂಕಂಪದ ಪರಿಣಾಮವಾಗಿ ದಿಬ್ರುಗಢಕ್ಕೆ ದಿನಗಂಡ, ಕ್ಷಣಗಂಡಗಳು ಒದಗುತ್ತಿವೆ. ನೆನ್ನೆ ದಿನ ಭೂಕಂಪ ಸಂಭವಿಸುವುದಕ್ಕೆ ಮುಂಚೆ ಗುಡುಗಿನಂತೆ ಭಾರಿ ಶಬ್ದ ಬಂದಿತೆಂದೂ, ಒಂದು ಚರ್ಚು ಮತ್ತು ಹಲವು ಮನೆಗಳು ನೆಲಸಮವಾದುವೆಂದೂ ಗೊತ್ತಾಗಿದೆ

ಜಪಾನಿನಲ್ಲಿ ಸೈಕಲ್ ಪಂದ್ಯಗಳಿಗೆ ನಿಷೇಧ

ಜಪಾನಿನಲ್ಲಿ ಸೈಕಲ್ ಪಂದ್ಯಗಳನ್ನು ಮಾಡಬಾರದೆಂದು ನಿಷೇಧಿಸಲಾಗಿದೆ. ಕಳೆದ ವರ್ಷ ಈ ಪಂದ್ಯವು ಆ ದೇಶದಲ್ಲಿ ಆರಂಭವಾಗಿ ಅದರಿಂದ ೩೦ ಭಾರಿ ದೊಂಬಿಗಳಾಗಿದ್ದುವು. ಕೋಬೆ ನಗರದ ಒಳ ಕಳೆದ ವಾರ ಈ ಪಂದ್ಯದ ಸಂಬಂಧವಾಗಿ ಗಲಭೆಯುಂಟಾಗಿ ಪೋಲೀಸಿನವರು ಒಬ್ಬ ಪ್ರೇಕ್ಷಕನನ್ನು ಗುಂಡು ಹೊಡೆದು ಕೊಂದರು. ಗಲಭೆಕಾರರು ಪೋಲೀಸಿನವನೊಬ್ಬನನ್ನೂ, ೩ ಜನ ಟಿಕೆಟ್ ಮಾರುವ ಹುಡುಗಿಯರನ್ನೂ ಗಾಯಗೊಳಿಸಿದರು. ಕಳೆದ ಆಗಸ್ಟ್ ತಿಂಗಳ ವರೆಗೆ ಈ ಪಂದ್ಯದಿಂದ ೨೭ ಲಕ್ಷ ಪೌಂಡುಗಳಷ್ಟು ಲಾಭ ಬಂದಿರುವುದಾಗಿ ಹೇಳಲಾಗಿದೆ

೫ ಕೋಟಿ ರೂ. ಸಾಲವೆತ್ತಲು ಕೇಂದ್ರದ ಅನುಮತಿಯಿಲ್ಲ

ಸ್ವಂ ವ ವರದಿಗಾರ] ಬೆಂಗಳೂರು ೧೪

ಸಂಸ್ಥಾನದ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸುವುದಕ್ಕಾಗಿ ೫ ಕೋಟಿ ರೂ ಗಳ ಸಾಲವನ್ನೆತ್ತುವ ಬಗ್ಗೆ ಹಣಕಾಸಿನ ಸಚಿವರಾದ ಎಚ್. ಸಿ. ದಾಸಪ್ಪನವರು ಸಂಸ್ಥಾನ ಹಣಕಾಸು ಕಾರ್ಯದರ್ಶಿಗಳೊಡನೆ ಮಾತನಾಡಿಕೊಂಡು ಬಂದರಷ್ಟೆ. ಆದರೆ ಈ ಸಾಲವನ್ನೆತ್ತಲು ಅನುಮತಿ ಕೊಡಲು ಸಾಧ್ಯವಿಲ್ಲವೆಂದು ಭಾರತ ಸರ್ಕಾರದವರು ತಿಳಿಸಿರುವುದಾಗಿ ವರ್ತಮಾನ ಬಂದಿದೆ

○ ಸಧ್ಯದಲ್ಲಿಯೇ ನಡೆಯಲಿರುವ ಜಾಂಬೂರಿ ವ್ಯವಸ್ಥೆಗಾಗಿ ಕಳೆದೊಂದು ಸಲ ಒಂದಾವರ್ತಿಯಂತೆ ಒಟ್ಟು ೫ ಲಕ್ಷ ರೂ ಅನ್ನು ಮೈಸೂರು ಸರ್ಕಾರದವರು ವೆಚ್ಚ ಮಾಡಲು ಮಂಜೂರು ಮಾಡಿರುವರೆಂದು ತಿಳಿದು ಬಂದಿದೆ

ಆಹಾರ ಪದಾರ್ಥಗಳಲ್ಲಿ ಬೆರಿಕೆ ಮಾಡುವವರ ಖಂಡನೆ

ಭಾರತದ ಸುಪ್ರೀಂ ಕೋರ್ಟಿನ ಶ್ರೀ ಪ್ರಧಾನ ನ್ಯಾಯಾಧೀಶರಾದ ಹೀರಾಲಾಲ್ ಕಾನಿಯಾರವರ ಮೊನ್ನೆ ಅಪೀಲೊಂದರಲ್ಲಿ ತೀರ್ಪು ಕೊಡುತ್ತಾ, ಆಹಾರ ಪದಾರ್ಥಗಳನ್ನು ಬೆರಕೆ ಮಾಡುವವರು ಸಾರ್ವಜನಿಕರಿಗೆ ಅಪಾಯ ಕಾರಿಗಳೆಂದು ಹೇಳುತ್ತಾ, ಆ ಅಪೀಲುದಾರರ ಪರ ವಕಾಲತ್ತು ವಹಿಸಿದ್ದ ವಕೀಲರನ್ನು ಕುರಿತು ನ್ಯಾಯಾಧೀಶರು, 'ಇವರ ಪರವಾಗಿ ನೀವು ವಕಾಲತ್ತು ವಹಿಸುವಿರಾ?' ಎಂದು ಪ್ರಶ್ನಿಸಿದರು

ಸತ್ಕಾರ ಸಮಾರಂಭ

ಅಖಿಲ ಭಾರತ ಕಾಂಗ್ರೆಸ್ ಸಮಿತಿಗೂ, ಮೈಸೂರು ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಮಂಡಲಿಗೂ ಸದಸ್ಯರಾಗಿ ಆರಿಸಲ್ಪಟ್ಟಿರುವ ಶ್ರೀ ಎಸ್. ಚೆನ್ನಯ್ಯ ಮತ್ತು ನಾಸಿಕ ಕಾಂಗ್ರೆಸ್ ಅಧಿವೇಶನಕ್ಕೆ ಪ್ರತಿನಿಧಿಗಳಾಗಿ ಚುನಾಯಿತರಾದ ಶ್ರೀ ಹೆಚ್. ಕೆ. ಶಿವರಾಮಸ್ವಾಮಿ ಇವರುಗಳ ಗೌರವಾರ್ಥವಾಗಿ ನೆನ್ನೆ ರಾತ್ರಿ ಧನ್ವಂತರಿ ರಸ್ತೆಯಲ್ಲಿರುವ ಇಂದ್ರ ಭವನದಲ್ಲಿ ಭೋಜನ ಕೂಟವೊಂದನ್ನು ಕುಷ್ಠರೋಗಾಲಯದ ಚೇರ್ಮನ್ ಕೆ. ಕೆಂಪೇಗೌಡರವರೂ, ಸಿದ್ಧರಾಮನ ಹುಂಡಿಯ ಚೇರ್ಮನ್ ಶ್ರೀ ಎಸ್. ಚೆನ್ನಸ್ವಾಮಿಯವರೂ, ಕಪ್ಪೇಗಾಲದ ಶ್ರೀ ವಿ. ಚೆನ್ನಸ್ವಾಮಿಯವರೂ ಏರ್ಪಡಿಸಿದ್ದರು. ರಾಜಧಾನಿಯ ಸರ್ಕಾರಿ ಉದ್ಯೋಗಿಗಳೂ, ಹಲವು ಪುರ ಪ್ರಮುಖರೂ ಆಹ್ವಾನಿತರಾಗಿದ್ದರು. ಶ್ರೀ ಚೆನ್ನಸ್ವಾಮಿಯವರು ಭಾಷಣ ಮಾಡಿ, ಅತಿಥಿಗಳನ್ನು ಸ್ವಾಗತಿಸಿದರು. ಶ್ರೀಗಳಾದ ಎಸ್. ಚೆನ್ನಯ್ಯ ಮತ್ತು ಹೆಚ್. ಕೆ. ಶಿವರಾಮಸ್ವಾಮಿಯವರುಗಳು ಸೂಕ್ತ ಉತ್ತರವಿತ್ತು, ಧನ್ಯವಾದಗಳನ್ನು ಸಮರ್ಪಿಸಿದರು.

ಮಿತ್ರ ಸಂಘ

ರಾಜಧಾನಿಯ ಸೋಮನಾಥ್ ಬೀದಿಯಲ್ಲಿರುವ ಈ ಸಂಘದಲ್ಲಿ ನಾಳೆಯಿಂದ ೨೦ನೇ ತಾರೀಖಿನವರೆಗೆ ವಿದ್ಯಾ ಗಣಪತಿ ಉತ್ಸವವನ್ನು ನಡೆಸಲಾಗುವುದು. ಸರ್ವರೂ ಸಹಕರಿಸಬೇಕೆಂದು ಪ್ರಾರ್ಥಿಸಲಾಗಿದೆ

ಒಂದೇ ದಿನದಲ್ಲಿ ರಷ್ಯವನ್ನು ನಿರ್ನಾಮ ಮಾಡಬಹುದು

ಇನೇ ವಿಶ್ವ ಸಂಗ್ರಾಮದ ಬಗ್ಗೆ ಜನರಲ್ ಮೆಕಾರ್ಥರು ಫಾರ್ಮೋಸಾದಲ್ಲಿ ಕೆಲ ಪ್ಟರಿಂದು ಹೇಳಲಾದ ವರದಿಯು ಅಮೇರಿಕದ ಪತ್ರಿಕೆಯಲ್ಲಿ ಕೇಳಿ ಕಂಡ ಶಿಷ್ಟ ಕಟ ವಾಗಿದೆ. ಯುದ್ಧವು ಬೆಳಗಿನ ಜಾವದ ಘಂಟೆಗೆ ಆರಂಭವಾದರೆ ... ವೇಳೆಗೆ ಮಾಡಿ ಟರೇನಿಯನ್ ಅಥವಾ ... ವಿಮಾನ ನೆಲೆಯಿಂದ ದಕ್ಷಿಣ ರಷ್ಯದ ನಗರಗಳು ಮತ್ತು ಕಾರ್ಖಾನೆಗಳು ನಾಶ ಮಾಡಲ್ಪಡುವುವು. ಬ್ರಿಟನ್ನಿನಲ್ಲಿ ಅಣು ಬಾಂಬುಗಳನ್ನು ಶೇಖರಿಸಿಟ್ಟುಕೊಂಡು ಅಲ್ಲಿರುವ ಅಮೇರಿಕದ ಬಾಂಬರ್ ವಿಮಾನಗಳು ೧೦-೩೦ ಘಂಟೆಯ ವೇಳೆಗೆ ಮಾಸ್ಕೊ ಮತ್ತು ಅಲ್ಲಿನ ಕೈಗಾರಿಕಾ ಕೇಂದ್ರಗಳ ಮೇಲೆ ಧಾಳಿ ನಡೆಸಿ ನಿರ್ನಾಮ ಮಾಡಬಹುದು. ಬ್ರಿಟನ್ನಿನಲ್ಲಿರುವ ಇತರ ಅಮೇರಿಕದ ಬಾಂಬರ್ ವಿಮಾನಗಳು ... ಘಂಟೆ ವೇಳೆಗೆ ಯುರಲ್ ಪರ್ವತದ ಬಳಿ ಇರುವ ರಷ್ಯದ ಮದ್ದು ಗುಂಡುಗಳ ಕೈಗಾರಿಕಾ ಕೇಂದ್ರಗಳ ಮೇಲೆ ಧಾಳಿ ಮಾಡುವುವು. ಸಂಜೆ ... ಘಂಟೆಯ ವೇಳೆಗೆ ರಷ್ಯದ ಸೈನ್ಯಗಳು ಪ್ರತಿಭಟಿಸಲು ಬರುವುವು. ಆಗ ಬ್ರಿಟನ್ ಅಥವಾ ಅಲಾಸ್ಕಾದಿಂದ ಅಮೇರಿಕದ ಬಾಂಬರ್ ವಿಮಾನಗಳು ರಷ್ಯದ ಉನ್ನತ ಕೈಗಾರಿಕಾ ಕೇಂದ್ರದ ಮೇಲೆ ಧಾಳಿ ನಡೆಸುವುವು. ಇದಕ್ಕೆ ಪ್ರತಿಯಾಗಿ ರಷ್ಯವು ಅಮೇರಿಕದ ಹಲವು ನಗರಗಳ ಮೇಲೂ ಮತ್ತು ವಿಮಾನ ಕೇಂದ್ರಗಳ ಮೇಲೂ ಧಾಳಿ ಮಾಡುವುದು.

ಉತ್ತರ ಕೊರಿಯನ್ನರ ಮೇಲೆ ರಾಕೆಟ್ ಧಾಳಿ

ಉತ್ತರ ಕೊರಿಯನ್ನರ ಟ್ಯಾಂಕುಗಳ ಪಡೆಗಳ ಮೇಲೆ ಅಮೇರಿಕದ ವಿಮಾನಗಳು ರಾಕೆಟ್ ಧಾಳಿಗಳನ್ನು ನಡೆಸಿದುದಾಗಿ ಹೇಳಲಾಗಿದೆ. ೫೦೦ ಪೌಂಡುಗಳ ಬಾಂಬುಗಳನ್ನು ಅವುಗಳ ಮೇಲೆ ಹಾಕಲಾಯಿತು.

ಲಕ್ಷ ಜನ ಸಂತತಿಯುಳ್ಳವನ ೩೦೦ ವರ್ಷದ ಉತ್ಸವ

ಉತ್ತರ ಅಮೇರಿಕದವನ್ನು ಪ್ರಿನ್ಸ್‌ಬರ್ಗ್ ನಗರದಲ್ಲಿ ೩೦೦ ವರ್ಷಗಳ ಕೆಳಗೆ ... ಲಿವಿಂಗ್‌ಸ್ಟನ್ ಎಂಬಾತನ ಜನ್ಮೋತ್ಸವವನ್ನು ಕೆಲವು ದಿನಗಳಲ್ಲಿ ಆಚರಿಸಲಾಗುವುದು. ಅವನಿಗೆ ಈಗ ಲಕ್ಷ ಜನ ಸಂತತಿಯವರು ಇರುವುದಾಗಿ ಹೇಳಲಾಗಿದೆ.

ವಿಶ್ವೇಶ್ವರಯ್ಯನವರ ವರ್ಧಂತಿ ದಿನಾಚರಣೆ

ಮೈಸೂರು ೧೪

ರಾಜಧಾನಿಯ ಪೌರಸಭೆಯ ಆಶ್ರಯದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ವರ್ಧಂತಿ ದಿನಾಚರಣೆಯು ನಾಳೆ ... ಗಂಟೆಗೆ ರಂಗಾಚಾರ್ಲು ಸ್ಮಾರಕ ಭವನದಲ್ಲಿ ನಡೆಯುವುದು. ವಿಶ್ವವಿದ್ಯಾಲಯದ ಪ್ರೊಫೆಸರಾದ ಡಾ|| ... ರೆಡ್ಡಿಯವರು ಅಧ್ಯಕ್ಷತೆ ವಹಿಸುವರು.

ಮೈಸೂರಿಗೆ ಗೋಧಿ

ಆಸ್ಟ್ರೇಲಿಯಾದಿಂದ ೮೧೯೦ ಟನ್ ಗೋಧಿಯನ್ನು ತಂದ ಹಡಗು ಮದ್ರಾಸ್ ರೇವನ್ನು ಮೊನ್ನೆ ತಲುಪಿತು. ಆ ಪೈಕಿ ೨೦೦೦ ಟನ್ ಧಾನ್ಯವನ್ನು ಮೈಸೂರಿಗೂ, ಉಳಿದುದನ್ನು ಕಲ್ಲಿಕೋಟೆಗೂ ರವಾನಿಸಲಾಗುವುದು.

ಹರಿಕಥೆ

ಮೈಸೂರು ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ವಿನಾಯಕ ಚತುರ್ಥಿ ಪ್ರಯುಕ್ತ ನಾಳೆ ಸಂಜೆ ೭ ಘಂಟೆಗೆ ಶ್ರೀ ... ಸುಬ್ಬದಾಸರಿಂದ ಸ್ಯಮಂತಕೋಪಾಖ್ಯಾನ ಎಂಬ ಹರಿಕಥೆಯು ನಡೆಯುವುದು.

ಅಕ್ರಮ ಬಂಧನ ಮಾಡಿದವರಿಗೆ ಶಿಕ್ಷೆ ವಿಧಿಸಲು ಸಲಹೆ

ಜನರು ಅಕ್ರಮವಾಗಿ ಬಂಧಿಸಲ್ಪಟ್ಟ ನಂತರ ಮೇಲಧಿಕಾರಿಗಳಿಂದ ಬಿಡುಗಡೆಯಾದ ಸಂದರ್ಭಗಳಲ್ಲಿ, ಅಕ್ರಮ ಬಂಧನಕ್ಕೆ ಕಾರಣವಾದ ಅಧಿಕಾರಿಗಳ ಮೇಲೆ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕೆಂದು ಮೊನ್ನೆ ಸುಪ್ರೀಂ ಕೋರ್ಟಿನಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿಯ ಬಗ್ಗೆ ತೀರ್ಪು ಕೊಡುತ್ತಾ, ನ್ಯಾಯಾಧೀಶರಾದ ಪಾತಂಜಲಿ ಶಾಸ್ತ್ರಿಯವರು ಅಭಿಪ್ರಾಯಪಟ್ಟಿರುವರು.

ರಿವಾಲ್ವರ್ ಇಟ್ಟುಕೊಂಡಿದ್ದ ಪಠಾಣ್ ಮಹಿಳೆಗೆ ಶಿಕ್ಷೆ

ಅಕ್ರಮವಾಗಿ ಗನ್ ರಿವಾಲ್ವರುಗಳನ್ನು ಇಟ್ಟುಕೊಂಡಿದ್ದ ಆಪಾದನೆ ಮೇಲೆ ರಾವಲ್ಪಿಂಡಿಯ ಜಿಲ್ಲಾ ಮ್ಯಾಜಿಸ್ಟ್ರೇಟರು ವೃದ್ಧ ಪಠಾಣ್ ಮಹಿಳೆಯೊಬ್ಬಳಿಗೆ ೨ 1 ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಭಾರತದ ಮುಸ್ಲಿಮರಿಗಾಗಿ ಪಾಕ್ ಬಲಿಷ್ಠವಾಗಬೇಕು

[illegible] ರಕ್ಷಣೆಗಾಗಿ ... ಆಕ್ಷೇಪಿಸಿ ... ರಕ್ಷಣೆಗೆ ... ಬಲಿಷ್ಠ ... ಸಂಪಾದಕರು ... [illegible]

SRI LAKSHMI, THEATRE

[illegible] 9 50 Daily 3 Shows

THE GALLANT BLADE

[illegible] color

[illegible] - Larry Parks and Marguerite Chapman

A [illegible] of the Greatest Swordsman [illegible] France

[illegible] booking

On 16 9 50 [illegible] only

Mating of Millie

Cast Glenn [illegible] Ford Evelyn Keyes

ಆಜಾದ್ ಕಾಶ್ಮೀರದಲ್ಲಿ ಅನೇಕರ ಬಂಧನ

ಆಜಾದ್ ಕಾಶ್ಮೀರದ ಮುಖಂಡರಾದ ಚೌಧುರಿ ಗುಲಾಂ ಅಬ್ಬಾಸ್ ಮತ್ತು ಸರ್ದಾರ್ ಇಬ್ರಾಹಿಂರವರುಗಳಿಗೆ ಮುಷ್ಕರ ಬೆಳೆದು, ಈಗಾಗಲೇ ಇಬ್ರಾಹಿಂ ಪಕ್ಷದ ಅನೇಕರನ್ನು ಬಂಧಿಸಲಾಗಿದೆ. ... ರ ಶಾಂತಿ ಸಂಧಾನ ವಿಫಲವಾದ ... ಅಲ್ಲಿ ಅಶಾಂತಿ ... ಘರ್ಷಣೆಗಳಾಗುತ್ತಿವೆ.

ಗುರುದೇವ ಹಾಲ್

ಶಿವರಾಂಪೇಟೆ ಮೈಸೂರು

ನವೀನವಾದ ಡಾರ್ಡರುಗಳಲ್ಲಿ

ಧರ್ಮಾವರಂ, ಕಾಂಜೀವರಂ, ಆರಣಿ ಸೀರೆಗಳು ಹೊಸದಾಗಿ ಬಂದಿರುತ್ತವೆ.

ಇಂದೇ ದಯಮಾಡಿ ಭೇಟಿ ಕೊಡಿ

ಒಲಂಪಿಯಾ

15-9-50ರಿಂದ ಅಮೋಘ 2ನೇ ವಾರ

ವೆರೈಟಿ ಪಿಕ್ಚರ್ಸ್ ಕರ್ಣಾಟಕದವರ ಅಪೂರ್ವ ಪೌರಾಣಿಕ ಚಿತ್ರ

ಭೀಷ್ಮ ಪ್ರತಿಜ್ಞೆ

ಪಾತ್ರ - ನಟ್ಟಿಸ್ ಮಾಮ ಮೋದಲ್, ಪೂರ್ಣಿಮಾ

ಬೆಳಗಿನ ಪ್ರದರ್ಶನ 15 9 50ರಿಂದ

ನಾಲ್ಕು ದಿನಗಳು ಮಾತ್ರ

ರಿಪಬ್ಲಿಕ್ ಪಿಕ್ಚರ್ಸ್‌ರವರ

ಡೇರ್ ಡೆವಿಲ್ಸ್ ಆಫ್ ದಿ ರೆಡ್ ಸರ್ಕಲ್

15 ಭಾಗಗಳ ಪೂರ್ಣ ಸೀರಿಯಲ್

ಪ್ರಭುದೇವಾ ಟಾಕೀಸ್

ದಿನವೂ ಮೂರು ಆಟಗಳು

17—9—50ನೇ :: ಭಾನುವಾರದಿಂದ

ಘೋಸ್ಟ್ ಆಫ್ ಜೋರೊ

GHOST OF ZORRO

ಶಾಲೀವಾಹನ — 3 ದಿನಗಳು ಮಾತ್ರ

ರಾಜಕಮಲ್,

ಮೈಸೂರು

15 9 50 ರಿಂದ

ದಿನವೂ 3 ಪ್ರದರ್ಶನಗಳು

ಶಶಿಪುನ್ನು

(ಹಿಂದಿ)

ಪಾತ್ರ, ಗೀತಾ ನಿಜಾಮಿ, ಮುಕೇಶ್, ... ಗೋಪ್, ... ಕಳ್ಳು

15-9-50ರಿಂದ ಬೆಳಗಿನ ಪ್ರದರ್ಶನ 3 ದಿನಗಳು ಮಾತ್ರ

- ಪ್ರೇಮನಿರ್ಮಲ -

ಕಿಶೋರ್ ಸಾಹು, ಸ್ನೇಹ ಪ್ರಭಾ ಪಾತ್ರವಹಿಸಿರುವ ಹಿಂದಿ ಚಿತ್ರ

||ಶ್ರೀ||

ಗಣೇಶಾ ಟಾಕೀಸ್

15-9-50ರಿಂದ ಪ್ರತಿದಿನ 3 ಆಟಗಳು

ಮ್ಯಾಜೆಸ್ಟಿಕ್‌ರವರ ತಮಿಳು ಚಿತ್ರ

- ವೇಲೆಕಾರಿ -

ಪಾತ್ರ:- ಕೆ. ಆರ್. ರಾಮಸ್ವಾಮಿ, ಟಿ. ಎಸ್. ಬಾಲಯ್ಯ, ವಿ. ಎನ್. ಜಾನಕಿ, ಎಂ. ವಿ. ರಾಜಮ್ಮ, ಲಲಿತಾ-ಪದ್ಮಿನಿ

Edited, printed and published by A. R. Nagarajan at Sadhvi Press D Subbiah Road, Mysore

ಗೌರ್ನಮೆಂಟ್ ಶ್ರೀಲ್ಕ ಫ್ಯಾಕ್ಟರಿ ಕ್ರೇಪ್ ಜಾರ್ಜೆಟ್ ಸೀರೆಗಳು

ಧರ್ಮಾವರದ ಕೋಲಿತಿಪ್ಪೆ ಸೀರೆಗಳಿಗೆ, ಧೋತ್ರ, ಕೂಸಿಪೂರ್ ಸೀರೆಗಳಿಗೆ

ಎಂ. ವಿ. ಭೋಜಯ್ಯ ಅ ಎ. & ಬ್ರದರ್ಸ್,

ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ರಣಜಿತ್ - 14-9-50ನೇ ಗುರುವಾರದಿಂದ ಪ್ರತಿದಿನ 3 ಪ್ರದರ್ಶನ

ಮಹಾ ಜನಗಳ ಕೋರಿಕೆಯ ಮೇರೆ 3 ದಿನಗಳು ಮಾತ್ರ

ಮೆಹಬೂಬ್‌ರವರ ಹಿಂದಿ ಚಿತ್ರ

✱ ಅಂದಾಜ್ ✱

ಪಾತ್ರ.— ಧರ್ಮ, ನರ್ಗಿಸ್, ರಾಜ ಕಪೂರ್, ದಿಲೀಪ್ ಕುಮಾರ್

ಬೆಳಗಿನ ಪ್ರದರ್ಶನ :: 15-9-50ರಿಂದ 3 ದಿನ ಮಾತ್ರ

ಸುರಯ್ಯ ನಟಿಸಿರುವ — **ನಾಟಕ್**

ರಿ. ನಂ. 798 ||ಶಾಂತೀ ಜಾತಂ|| ಬಿಡಿ ಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೯] ಶನಿವಾರ ೧೬-೯-೫೦ [ಸಂಚಿಕೆ ೪೬

ಸಿಯೋಲ್ ಕಡೆಗೆ ಮಿತ್ರ ಸೈನ್ಯದ ಮುನ್ನೋಟ

ಪತ್ರಿಕೋದ್ಯೋಗಿಗಳ ಸಮ್ಮೇಳನ ಸ್ವಾಗತಸಮಿತಿ

ಮೈಸೂರು ೧೬.

ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘದ ಸದಸ್ಯರ ಸಭೆಯು ನೆನ್ನೆ ಸಂಜೆ ನಡೆದು ಡಿಸೆಂಬರ್ ತಿಂಗಳಲ್ಲಿ ಮೈಸೂರಿನಲ್ಲಿ ಸೇರುವ ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಮ್ಮೇಳನದ ಏರ್ಪಾಟಿಗಾಗಿ ಸ್ವಾಗತ ಸಮಿತಿಯೊಂದು ರಚನೆಯಾಯಿತು. ಶ್ರೀ ಡಾ. ಕೆ. ಕುಮಾರಸ್ವಾಮಿಯವರು ಅಧ್ಯಕ್ಷರಾಗಿಯೂ, ಶ್ರೀ ಎಂ. ಗೋಪಾಲಕೃಷ್ಣರಾವ್, ಟಿ. ಕೃಷ್ಣರಾವ್ ಮತ್ತು ಟಿ. ಕೆ. ಗೌರ್ ರವರುಗಳು ಉಪಾಧ್ಯಕ್ಷರುಗಳಾಗಿಯೂ, ಶ್ರೀಗಳಾದ ಎಸ್. ಸ್ವಾಮಿ ಮತ್ತು ಟಿ. ಬಾಲಯ್ಯನವರು ಕಾರ್ಯದರ್ಶಿಗಳಾಗಿಯೂ, ಶ್ರೀ ಟಿ. ರಂ. ರಂಗಯ್ಯನವರು ಖಜಾಂಚಿಯಾಗಿಯೂ ಆರಿಸಲ್ಪಟ್ಟರು. ಸಮ್ಮೇಳನದ ವ್ಯವಸ್ಥೆಗಳಿಗಾಗಿ ಉಪಸಮಿತಿಗಳನ್ನು ರಚಿಸಲಾಯಿತು. ಅಸ್ಸಾಂ ಭೂಕಂಪದ ಸಂಬಂಧ ನಿಧಿಗೆ ೫೫ ರೂ. ಗಳನ್ನು ಕೊಡಲಾಯಿತು.

ಸರ್ ವಿಶ್ವೇಶ್ವರಯ್ಯನವರಿಗೆ ಪತ್ರಿಕೋದ್ಯೋಗಿಗಳ ಶುಭಾಶಯ

ರಾಜಧಾನಿಯ ಪತ್ರಿಕೋದ್ಯೋಗಿ ಸಂಘದ ಸಭೆಯು ನೆನ್ನೆ ನಡೆದು ಮಹಾ ವಿಖ್ಯಾತರಾದ ಸರ್ ಎಂ. ವಿಶ್ವೇಶ್ವರಯ್ಯನವರ ೯೦ನೇ ವರ್ಷ ವರ್ಧಂತಿ ಸಂಭ್ರಮದಲ್ಲಿ ಅವರಿಗೆ ದೀರ್ಘಾಯುರಾರೋಗ್ಯವನ್ನು ಕೋರುವ ಮತ್ತು ಅವರ ಸೇವೆಯು ಇನ್ನೂ ಹೆಚ್ಚಾಗಿ ದೇಶಕ್ಕೆ ಲಭಿಸಲೆಂದು ಹಾರೈಸುವ ನಿರ್ಣಯವನ್ನು ಮಾಡಲಾಯಿತು.

ವಿದ್ಯಾ ಗಣಪತಿ ಉತ್ಸವ

ರಾಜಧಾನಿಯ ಶ್ರೀ ವರಲಕ್ಷ್ಮೀ ಸಂಘದ ವಿದ್ಯಾ ಮಂದಿರದವರು ಕೃಷ್ಣ ರಾಜಪುರದ ಬಾಡಿಯಲ್ಲಿ ಶ್ರೀ ವಿದ್ಯಾ ಗಣಪತಿ ಮಹೋತ್ಸವದ ಅಂಗವಾಗಿ ಸಂಗೀತ ಸಭೆಗಳನ್ನು ಏರ್ಪಡಿಸಿದೆ. ಪ್ರತಿ ಸಂಜೆ ೬ ಗಂಟೆಗೆ ಏರ್ಪಡಿಸಿರುತ್ತಾರೆ. ಸಾರ್ವಜನಿಕರು ಈ ಉತ್ಸವವನ್ನು ಭಾಗಿಗಳಾಗಬೇಕೆಂದು ಕೋರಲಾಗಿದೆ.

ಮತ್ತಾಯದ ವ್ಯವಸಾಯಕ್ಕೆ ಮದ್ರಾಸ್ ಸರ್ಕಾರದ ಅಪ್ಪಣೆ

ಮದರಾಸಿನಲ್ಲಿ ಬಂಜರು ಬಿದ್ದಿರುವ ಜಮೀನುಗಳನ್ನು ಕಷ್ಯಾಯವಾಗಿ ಸಾಗುವಳಿ ಮಾಡುವ ಬಗ್ಗೆ ಸರ್ಕಾರದವರು ಒಂದು ಆಜ್ಞೆ ಹೊರಡಿಸಿದ್ದಾರೆ. ಅದರ ಪ್ರಕಾರ ಜಮೀನುಗಳ ಮಾಲೀಕರು ಕಡ್ಡಾಯವಾಗಿ ಜಮೀನನ್ನು ಬೆಳೆಯಬೇಕು. ಇಲ್ಲವಾದ ಪಕ್ಷದಲ್ಲಿ ಬಂಜರು ಜಮೀನುಗಳನ್ನು ಆಯಾ ಜಿಲ್ಲೆಗಳ ಕಲೆಕ್ಟರುಗಳು ವಶಪಡಿಸಿಕೊಂಡು ಅವುಗಳನ್ನು ಮೂರು ವರ್ಷ ಸಾಗುವಳಿ ಮಾಡುವ ಹಕ್ಕನ್ನು ಜನ ಮೂಲಕ ನಿರ್ಧರಿಸಬಹುದಾಗಿದೆ.

ಉತ್ತರ ಅಟ್ಲಾಂಟಿಕ್ ರಾಷ್ಟ್ರಗಳಿಗೆ ಏಕೈಕ ಸೇನಾನಿ

ಉತ್ತರ ಅಟ್ಲಾಂಟಿಕ್ ರಾಷ್ಟ್ರಗಳ ಸೇನೆಗಾಗಿ ಶ್ರೇಷ್ಠ ಸೇನಾಧಿಪತಿಯೊಬ್ಬನನ್ನು ನೇಮಿಸಲು ಅಮೆರಿಕ, ಬ್ರಿಟನ್ ಮತ್ತು ಫ್ರಾನ್ಸ್‌ಗಳು ಒಪ್ಪಿ, ಆ ಸ್ಥಾನಕ್ಕೆ ಕ್ಷಿಪ್ರ ಕಾಲದಲ್ಲಿ ಮಿತ್ರ ರಾಷ್ಟ್ರಗಳ ಸೇನಾಧಿಪತಿಯಾಗಿದ್ದ ಐಸೆನ್ ಹೋವರ್‌ರನ್ನು ನೇಮಿಸಿವೆ.

ಜಿಲ್ಲೆಯಿಂದ ಜಿಲ್ಲೆಗೆ ೪೦ ಸೇರು ಧಾನ್ಯದ ರವಾನೆಗೆ ಅವಕಾಶ

ಸ್ವಂ ವು. ಪ್ರೋ.] ಬೆಂಗಳೂರು ೧೬.

ಸಂಸ್ಥಾನದಲ್ಲಿ ಜಿಲ್ಲೆಯಿಂದ ಜಿಲ್ಲೆಗೆ ಒಂದು ಬಾರಿಗೆ ೪೦ ಸೇರು ಅಕ್ಕಿ ಅಲ್ಲದ ಇತರ ಧಾನ್ಯವನ್ನು ರವಾನಿಸಲು ನವೆಂಬರ್ ತಿಂಗಳ ಮಧ್ಯ ಭಾಗದವರೆಗೆ ಸಾಗಿಸಿಕೊಳ್ಳಲು ಅವಕಾಶ ಕೊಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಸರ್ಕಾರದವರ ಸೂಚನೆ ಕೊಟ್ಟಿರುತ್ತಾರೆ.

○ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಈ ದಿನ ಬೊಂಬಾಯಿಗೆ ಹೊರಟಿದ್ದು ಬಾಳೆ ದಿನ ಹೊರಟು, ಅಲ್ಲಿಂದ ದಾಸಿಸಳ್ಳಿ ಪ್ರಯಾಣ ಮಾಡುವರು.

○ ಭಾರತದ ಸೈನ್ಯಾಧಿಕಾರಿಗಳ ಪ್ರತಿನಿಧಿಯಾದ ಜನರಲ್ ಕೆ. ಎಂ. ಕಾರ್ಯಪ್ಪನವರು ಈ ತಿಂಗಳ ಕೊನೆಯ ವಾರದ ಹೊತ್ತಿಗೆ ಇಲ್ಲಿಗೆ ಬರುವರು.

○ ದೊಡ್ಡಬಳ್ಳಾಪುರದಲ್ಲಿ ನಡೆಯುವ ಗ್ರಾಮಾಭಿವೃದ್ಧಿ ಕಾರ್ಯಕರ್ತರುಗಳ ತರಬೇತಿ ಶಿಬಿರದ ಮುಕ್ತಾಯ ಭಾಷಣವನ್ನು ಸರ್ ಎಂ. ವಿಶ್ವೇಶ್ವರಯ್ಯನವರು ಈ ತಿಂಗಳ ಕಡೆಯಲ್ಲಿ ಮಾಡುವರು.

ಅಸ್ಸಾಂ ಭೂಕಂಪ ನಿಧಿಗೆ ನಿಮ್ಮ ಕಾಣಿಕೆ ಸಲ್ಲಿಸಿ

ಸಂಪಾದಕ,
ಮುನಿಸಿಪಲ್ ಆಫೀಸ್, ಮೈಸೂರು

ಮತ್ತೆ ದಿಬ್ರುಗಡದಲ್ಲಿ ೧೩ ಬಾರಿ ಭೂಕಂಪ

ನೆನ್ನೆ ದಿನ ದಿಬ್ರುಗಡದಲ್ಲಿ ೧೩ ಬಾರಿ ಭೂಮಿ ನಡುಗಿ ಕಂಪಿಸಿತು. ಆದರೆ ಆ ಕಟ್ಟಡಗಳ ರಾಶಿಯು ಬಿದ್ದ ಪರಿಣಾಮವಾಗಿ ಒಬ್ಬ ಹೆಂಗಸಿಗೆ ಗಾಯ ಮಾಡಿದ್ದಲ್ಲದೆ ಬೇರೆ ಯಾವ ಸಾವುನೋವುಗಳೂ ವರದಿಯಾಗಿಲ್ಲ.

ಜಪಾನಿಗೆ ಮತ್ತು ಚೀನಕ್ಕೆ ನೆಹರೂರವರ ಗಟ್ಟಿ ದಾಸ

ಭಾರತದ ಪ್ರಧಾನಿ ಪಂಡಿತ ಜವಾಹರಲಾಲ್ ನೆಹರೂರವರು ಜಪಾನಿ ಮತ್ತು ಚೀನಕ್ಕೆ ಒಂದೊಂದು ಆನೆಯನ್ನು ಇತ್ತೀಚೆಗೆ ಕಾಣಿಕೆ ಕಳುಹಿಸಿಕೊಡುವರೆಂದು ತಿಳಿದು ಬಂದಿದೆ.

ವಿಶ್ವೇಶ್ವರಯ್ಯನವರಿಗೆ ಶುಭಾಶಯ

ಟೌನ್‌ಹಾಲಿನಲ್ಲಿ ಪೌರಜನರ ಸಭೆ

ಮೈಸೂರು ೧೬.

ಮಾಜಿ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯನವರ ೯೦ ನೇ ವರ್ಷ ವರ್ಧಂತಿಯ ನಿನ್ನೆ ದಿನ ಟೌನ್‌ಹಾಲಿನಲ್ಲಿ ಡಾ|| ಸಿ. ಆರ್. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಪೌರಸಭಾಧ್ಯಕ್ಷರಾದ ಶ್ರೀ ಎಸ್. ಲಿಂಗಣ್ಣನವರ ಸ್ವಾಗತ ಭಾಷಣವಾದ ನಂತರ ಶ್ರೀಮತಿ ಜೋಗ್ಯಮ್ಮನವರ ಸುಶ್ರಾವ್ಯವಾದ ಪ್ರಾರ್ಥನೆ ನಡೆಯಿತು.

ಸೆಂಟ್ ಫಿಲೋಮಿನಾ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಸಿ. ಜೆ. ವಾರ್ಕೆ ಮತ್ತು ಶ್ರೀಗಳಾದ ಆಗರಂ ರಂಗಯ್ಯ, ಎ. ನರಸಿಂಹಮೂರ್ತಿ, ಎಂ. ಎಸ್. ಹೊಯ್ಸಳ, ಎಚ್. ಪುಟ್ಟರಾವ್, ರಾವ್ ಬಹದ್ದೂರ್ ಎಂ. ರಾಮಸ್ವಾಮಿಯವರುಗಳು ಭಾಷಣ ಮಾಡಿ ವಿಶ್ವೇಶ್ವರಯ್ಯನವರ ಅನೋಘವಾದ ಪ್ರತಿಭೆ, ದೇಶಾಭಿಮಾನ, ಸರಳ ಜೀವನ ಮತ್ತು ಸೇವಾ ತತ್ಪರತೆಗಳನ್ನು ಕೊಂಡಾಡಿದರು.

ಅಧ್ಯಕ್ಷರಾದ ಡಾ|| ರೆಡ್ಡಿಯವರು ದೀರ್ಘವಾದ ಭಾಷಣ ಮಾಡಿ, ವಿಶ್ವೇಶ್ವರಯ್ಯನವರ ದಿವಾನಗಿರಿಯು ಮೈಸೂರಿನ ಇತಿಹಾಸದಲ್ಲಿ ಧೀರೋದಾತ್ತವಾದ ಒಂದು ಪರ್ವಕಾಲವಾಗಿತ್ತೆಂದು ತಿಳಿಸಿದರು. ಒಂದೊಂದು ಭಾಗದ ಅಭಿವೃದ್ಧಿಯೋಜನೆಗಳನ್ನು ಕೈಗೊಂಡ ಮಹಶ್ರೇಯಸ್ಸು ಅವರದು. ಅನೇಕ ಪ್ರಭೃತಿಗಳಿಗೆ ದುಸ್ತರವಾಗಿದ್ದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ಮೈಸೂರು ಸ್ಥಾನದ ಪರವಶರೂಪವಾದ ಅಭ್ಯುದಯದ ಸಾಧನೆಯನ್ನು ಎಷ್ಟು ಪ್ರಮಾಣದಲ್ಲಿ ಸಾಧಿಸಿದರೆಂದು ವಿವರಿಸಿ, ಹೇಳಿದ ಅಂಕಿಗಳಲ್ಲಿ ಮೈಸೂರು ಸಂಸ್ಥಾನದಲ್ಲಿ ಉದ್ಯಮಗಳ ಇತರ ಸಾಮಾಜಿಕ ಚಟುವಟಿಕೆಗಳ ವಿವರವನ್ನು ಸಹ ರೆಡ್ಡಿಯವರು ತಿಳಿಸಿದರು. ಭಾರತ ದೇಶದ ರಾಷ್ಟ್ರಕ್ಕೆ ವಿಶ್ವೇಶ್ವರಯ್ಯನವರು ಎಲ್ಲಾ ರೀತಿಯಿಂದಲೂ ಮಾರ್ಗದರ್ಶಕರೆಂದೂ ಅವರ ಆದರ್ಶವನ್ನು ಪಾಲಿಸಬೇಕೆಂದೂ ಹೇಳಿದರು.

ಸ್ವರಾಜ್ಯ ಮತ್ತು ಸುರಾಜ್ಯ ಸಾಧನೆಗೆ ಉತ್ಸಾಹವನ್ನು ತೋರಿಸಿ ಪ್ರೋತ್ಸಾಹಿಸುವ ಪ್ರಜಾ ಪ್ರಭುತ್ವದಲ್ಲಿಯೂ ಸಹ ಅವರಿಗೆ ತೃಪ್ತಿ ಇಲ್ಲ.

ವಿಶ್ವಸಂಸ್ಥೆ ಸೈನ್ಯಗಳು ಉ. ಕೊರಿಯನ್ನರ ಹಿಂಭಾಗದಲ್ಲಿ

ಕೊರಿಯಾ ಯುದ್ಧವು ಪ್ರಾರಂಭವಾದಾಗ ದಕ್ಷಿಣದವರ ರಾಜಧಾನಿಯಾಗಿದ್ದ ಸಿಯೋಲ್ ನಗರಕ್ಕೆ ೧೦ ಮೈಲಿ ದೂರದಲ್ಲಿ ವಿಶ್ವ ಸಂಸ್ಥೆಯ ಜಲ ನೌಕಾ ವಾಯು ಮಾರ್ಗಗಳ ಸೈನ್ಯಗಳು ಬಂದಿಳಿದಿವೆ. ಆ ನಗರಕ್ಕೆ ೧೮ ಮೈಲಿ ದೂರ ಇರುವ ಇಂಚಾನ್ ರೇವು ಪಟ್ಟಣದ ಮೇಲೆಯೂ ಧಾಳಿಯು ನಡೆದಿದೆ. ಈಗ ಉತ್ತರದವರು ನಡೆಸುತ್ತಿರುವ ಹೋರಾಟಗಳ ಕ್ಷೇತ್ರದಿಂದ ೧೨೦ ಮೈಲಿ ಹಿಂಭಾಗದಲ್ಲಿ ಈ ರೀತಿಯ ಹೋರಾಟ ಪ್ರಾರಂಭವಾಗಿರುವುದು. ಸಿಯೋಲ್ ಬಳಿಯ ಕಿಂಪೋ ನಗರ ಮತ್ತು ವಿಮಾನ ನಿಲ್ದಾಣಗಳನ್ನು ವಶಪಡಿಸಿಕೊಳ್ಳಲಾಗಿದೆ. ದಕ್ಷಿಣ ಕೊರಿಯನ್ನರು ಪೊಹಾಂಗ್ ಬಳಿ ಸಲವು ಮಾರ್ಗಗಳನ್ನು ಹಿಡಿದಿರುವರು. ಜನರಲ್ ಮೆಕಾರ್ಥರರು ಸಿಯೋಲ್ ಬಳಿ ಇಳಿಯುತ್ತಿದ್ದ ಸೈನಿಕರನ್ನು ನೋಡುತ್ತಾ, ಒಂದು ಯುದ್ಧ ನೌಕೆಯ ಮೇಲೆ ನಿಂತಿದ್ದರು. ಸಿಯೋಲ್ ನಗರವನ್ನು ಹಿಡಿದರೆ, ದಕ್ಷಿಣ ಕೊರಿಯದ ಬೇಗದಲ್ಲಿ ವಿಶ್ವ ಸಂಸ್ಥೆಯ ಸೈನ್ಯಗಳಿಗೆ ಶಕ್ತಿ ಅಧಿಕವಾಗುವುದೆಂದು ಹೇಳಲಾಗಿದೆ.

ಶಿಸ್ತಿನ ಜೀವನದಿಂದ ಆಯುವೃದ್ಧಿಯೆಂದು ವಿಶ್ವೇಶ್ವರಯ್ಯ

ತಮಿಳು ಸಾಹಿತ್ಯ ಸಂಘದವರು ನೆನ್ನೆ ದಿನ ಬೊಂಬಾಯಿಯಲ್ಲಿ ತಮ್ಮ ಸಂಘದ ಅಧ್ಯಕ್ಷರಾದ ಸರ್ ಎಂ. ವಿಶ್ವೇಶ್ವರಯ್ಯನವರ ೯೦ನೇ ವರ್ಷ ವರ್ಧಂತಿ ಸಂದರ್ಭದಲ್ಲಿ ಅವರನ್ನು ಅಭಿನಂದಿಸುವ ಸಲುವಾಗಿ ಒಂದು ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು. ಆಗ ವಿಶ್ವೇಶ್ವರಯ್ಯನವರು ಭಾಷಣ ಮಾಡುತ್ತಾ, ಶಿಸ್ತಿನಿಂದ ಕೂಡಿದ ಜೀವನದಿಂದ ಆಯುಸ್ಸನ್ನು ವೃದ್ಧಿ ಪಡಿಸಿಕೊಳ್ಳಬಹುದೆಂದು ತಿಳಿಸಿದರು. ತನಗೆ ೯೦ ವರ್ಷವಾಗಿದ್ದರೂ, ತಾವು ಯಾವ ಕಾಯಿಲೆಯಿಂದಲೂ ನರಳಿರಲಿಲ್ಲವೆಂದೂ, ವೃದ್ಧಾಪ್ಯದ ಕುಗ್ಗದೇ ಇರುವುದಾಗಿಯೂ, ಕನ್ನಡಕವನ್ನು ಉಪಯೋಗಿಸದೆ ಓದುವುದಾಗಿಯೂ ಮತ್ತು ದಿನವೂ ೩-೪ ಮೈಲಿಗಳು ನಡೆಯುವುದಾಗಿಯೂ ಅವರು ಹೇಳಿದರು.

ವಾದ ಅಭಿವೃದ್ಧಿ ಕಾರ್ಯಗಳು ನಡೆಸದೇ ಇದ್ದ ಪ್ರಜಾ ಪ್ರಭುತ್ವವು ಸಾರ್ಥಕವಾಗಲಾರದು ಎಂದು ಹೇಳಿದರು. ಕೊನೆಯಲ್ಲಿ ವರು ಪ್ರಶ್ನೆ ವಿಚಾರವನ್ನೆತ್ತಿ ಭಾರತ ಪ್ರಭುತ್ವದಲ್ಲಿ ಆಗಲೇ ಒಬ್ಬ ರಾಷ್ಟ್ರಪತಿ ಪ್ರಜಾ ಸರ್ಕಾರವಾಗಿ ಎಂತಹ ಸ್ಥಿತಿಯಾಗಿದೆ ವ್ಯವಸ್ಥೆಯು ಏರ್ಪಾಡಾಗುವುದು ಅವಶ್ಯಕವೆಂದು ರೆಡ್ಡಿಯವರು ಸೂಚಿಸಿದರು.

ಸರ್ ವಿಶ್ವೇಶ್ವರಯ್ಯನವರಿಗೆ ಅಭಿನಂದನೆಗಳನ್ನು ಸಲ್ಲಿಸಿ ಅವರಿಗೆ ದೀರ್ಘಾಯುರಾರೋಗ್ಯಗಳನ್ನು ಕೋರಿ ಇಂಗ್ಲೀಷಿನಲ್ಲಿ ಯವಾಗಿ ಬರೆದ ಅವರು ಸೇವೆ, ಕೀರ್ತಿ, ವಂಶ ಅನುಗ್ರಹಿಸಲೆಂದು ಭಗವಂತನನ್ನು ಕೋರುವ ನಿರ್ಣಯವು ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು.

ಉಪಾಧ್ಯಕ್ಷರಾದ ಶ್ರೀ ಎ. ಕೃಷ್ಣನವರ ವಂದನಾರ್ಪಣೆಯಿಂದ ಧನ್ಯವಾದಗಳಾದ ನಂತರ ಸ್ವಾಗತಕಾರ್ಯದೊಡನೆ ಸಮಾರಂಭವು ಮುಕ್ತಾಯವಾಯಿತು.

ದೇವಾಲಯಕ್ಕೆ ಸಿಡಿಲಿನಿಂದ ಹೊಡೆತ

ಬಿಹಾರಿನ ಸಿತಾಮರ್ಹಿ ಎಂಬಲ್ಲಿ ಲಕ್ಷ್ಮ ಎಂಬ ನದಿ ತೀರದಲ್ಲಿದ್ದ ಹಿಂದು ದೇವಸ್ಥಾನಕ್ಕೆ ಕಳೆದ ಬುಧವಾರ ಸಿಡಿಲು ಹೊಡೆದು ನಷ್ಟ ಸಂಭವಿಸಿತೆಂದೂ ಮತ್ತು ಊರಿನಲ್ಲಿಯೂ ಸಿಡಿಲಿನ ದೆಸೆಯಿಂದ ಬಹಳ ನಷ್ಟವಾಗಿರುವುದೆಂದೂ ಹೇಳಲಾಗಿದೆ

ನೆಹರೂ ಭವನದ ಮುಂದೆ ಕಾರ್ಮಿಕರ ಪ್ರದರ್ಶನ

ಬೊಂಬಾಯಿ ಗಿರಣಿ ಕಾರ್ಮಿಕರ ಮುಷ್ಕರದ ಬಗ್ಗೆ ತಾವು ಮಧ್ಯಸ್ಥಿಕೆ ವಹಿಸಬೇಕೆಂದು ಪಂಡಿತ ನೆಹರೂರವರನ್ನು ಒತ್ತಾಯ ಪಡಿಸಿ, ದೆಹಲಿಯ ಮುಷ್ಕರ್ ಸಭೆಗೆ ಸೇರಿದ ೩೦೦ ಮಂದಿ ಕೊಳ್ಳಿದಿನ ನೆಹರೂರವರ ಭವನದ ಮುಂದೆ ಪ್ರದರ್ಶನ ನಡೆಸಿದರು. ಅವರನ್ನು ಪೋಲೀಸರು ಚದುರಿಸಿದರು

ಮದ್ರಾಸಿನ ನಿವೃತ್ತ ಜಡ್ಜರಿಗೆ ಸುಪ್ರೀಂ ಕೋರ್ಟ್ ಹುದ್ದೆ

ಮದರಾಸಿನ ನಿವೃತ್ತ ನ್ಯಾಯಾಧೀಶರಾದ ಶ್ರೀ ಎನ್ ಚಂದ್ರಶೇಖರಯ್ಯರವರನ್ನು ಭಾರತದ ಸುಪ್ರೀಂ ಕೋರ್ಟಿನ ನ್ಯಾಯಾಧೀಶನನ್ನಾಗಿ ನೇಮಿಸಲಾಗಿದೆ.

ಕಮ್ಯೂನಿಸ್ಟ್ ಮುಖಂಡರ ಬಂಧನ

ಕೆಲವು ದಿನಗಳ ಹಿಂದೆ ಬಂಧಿಸಲಾಗಿದ್ದ ರಾಜಧಾನಿಯ ಕಮ್ಯೂನಿಸ್ಟ್ ಮುಖಂಡರಾದ ಶ್ರೀ ಎಂ ಎನ್ ರಾಮುರಾವ್‌ರವರನ್ನು ಕಳೆದ [illegible] ಮಾಡಲಾಯಿತು

ಮೈಸೂರು ವಿಶ್ವವಿದ್ಯಾಲಯ,

ಮೈಸೂರು

ನಂ G [illegible]

[illegible] ಆಗಸ್ಟ್ [illegible]

ನೋಟಿಫಿಕೇಷನ್

[illegible] ಪದವೀದಾನ ಸಮಾರಂಭ

ಪದವೀದಾನ ಸಮಾರಂಭಕ್ಕೆ ಖುದ್ದಾಗಿ ಯಾಗಲಿ ಅಥವಾ ಗೈರುಹಾಜರಿಯಲ್ಲಾಗಲಿ ಪ್ರವೇಶ ಮಾಡಲಿಚ್ಛಿಸುವ ವಿದ್ಯಾರ್ಥಿಗಳು ಅರ್ಜಿಗಳನ್ನು ಕಳೆದ ಸಾಲಿನಲ್ಲಿ ಯಾವ ಕಾಲೇಜ್ ಮುಖಾಂತರ [illegible] ಅಲ್ಲಿಂದಲೇ ಪಡೆಯಬಹುದು

ಈ ಕಾರ್ಯಕ್ಕಾಗಿ [illegible] ಪರೆಯ [illegible] ಟಿಗಳಾಗಲಿ [illegible] ಬರೆದ ಅಂಚೆಯ ಕವರ್ ಆಗಲಿ ಕಳುಹಿಸುವುದು

ಪದವೀದಾನ ಸಮಾರಂಭದ ತಾರೀಖನ್ನು ಮುಂದೆ ತಿಳಿಸಲಾಗುವುದು ಇದು [illegible]ನೇ ಅಕ್ಟೋಬರ್ [illegible] ನಂತರ ಜರುಗುವುದು

ಪದವೀದಾನ ಸಮಾರಂಭದ ಪ್ರವೇಶದ ಸಲುವಾಗಿ ಹಾಕುವ ಅರ್ಜಿಗಳು [illegible]ನೇ ಸೆಪ್ಟೆಂಬರ್ [illegible] ಶನಿವಾರದೊಳಗಾಗಿ, ಮೈಸೂರಿನ ಕ್ರಾಫರ್ಡ್ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್‌ರವರಿಗೆ ತಲುಪುವಂತೆ ಕಳುಹಿಸುವುದು

ಸಿ. ರಂಗಾಚಾರ್,

ಆಫೀಸಿಂಗ್ ರಿಜಿಸ್ಟ್ರಾರ್

ಭಾರತ,ಸ್ವಿಟ್ಜರ್ಲೆಂಡ್ ಪ್ರತಿನಿಧಿಗಳ ಮೇಲೆ ರಷ್ಯದ ತರಾಟೆ

ಮಾಂಟ್‌ರಿಯಾಲಿನಲ್ಲಿ ಅಧಿವೇಶನದ ವಿವಿಧ ನಗರಗಳ [illegible] ರಷ್ಯಾ ಹಾಗೂ ಕಮ್ಯೂನಿಸ್ಟ್ ಚೀನಾವು ವಿಶ್ವ [illegible] ಪ್ರತಿನಿಧಿಗಳು ಭಾರತ ಮತ್ತು ಸ್ವಿಟ್ಜರ್ಲೆಂಡ್‌ಗಳ ಪ್ರತಿನಿಧಿಗಳನ್ನು [illegible] ಮಂಡಲವನ್ನು ನೇಮಿಸಬೇಕೆಂದು ಅವರಿಗೆ [illegible] ಪ್ರತಿನಿಧಿಗಳು ಭದ್ರತಾ ಸಮಿತಿಯಲ್ಲಿ [illegible] ರಷ್ಯವು ವೀಟೋ ಅಧಿಕಾರ ಚಲಾಯಿಸಿತ್ತೆಂದಿದೆ. ಈ ರೀತಿ ಮಾಡುವ [illegible] ದಲ್ಲಿ ರಷ್ಯದ ಪ್ರತಿನಿಧಿ [illegible] ರವರು ಭಾರತ ಮತ್ತು ಸ್ವಿಟ್ಜರ್ಲೆಂಡಿನ ಪ್ರತಿನಿಧಿಗಳು ಅಮೆರಿಕದ [illegible] ಅರ್ಥ ಬರುವಂತೆ [illegible] ದರು. ಇದನ್ನು ಭಾರತದ ಪ್ರತಿನಿಧಿ ಬಿ ಎನ್ ರಾಯರು ತೀವ್ರವಾಗಿ ಪ್ರತಿಭಟಿಸಿ ಆಕ್ಷೇಪಿಸಿದರು. ಭಾರತ ಮತ್ತು [illegible] ಗಳಿಗೆ ಮಾಡಿದ [illegible] ದೇ ಮೊದಲೆಂದು ಹೇಳಲಾಗಿದೆ

ವೃಷ್ಲಾಂಡ್ಸ್

15-9-50ರಿಂದ ಯಶಸ್ವಿ 2ನೇ ವಾರ

* ನಮೂನ *

ಪಾತ್ರ – [illegible], [illegible] ಮತ್ತು [illegible] ಚಿಟ್ನಿಸ್

[illegible]

ರಘುಲಾಲ್ & ಕೋ,

ಔಷಧ ವ್ಯಾಪಾರಿಗಳು

ಸಯ್ಯಾಜಿರಾವ್ ರಸ್ತೆ, ಮೈಸೂರು

ರಘುಲಾಲ್ ಅಂಡ್ ಕಂಪೆನಿ

ಬೆಂಗಳೂರು

ಔಷಧ ವ್ಯಾಪಾರಿಗಳು

70 [illegible] ರಸ್ತೆ

ಬೆಂಗಳೂರು

Edited printed and published by A K Nagarajan at [illegible] Press D Subbiah Road Mysore

SRI LAKSHMI, MYSORE

From 17-9-50 [illegible] Shows

THE GALLANT BLADE

In [illegible]

Glorious [illegible]

Starring Larry P[illegible] Margu[illegible]

Morning Sh[illegible] From [illegible] 9 50

THE MATING OF MILLIE

ಸಂಸ್ಕೃತಿ ಸಂಗೀತ ಸಮಾಜ (ರಿ)

ಶ್ರೀ

ಮೈಸೂರು

17-9-50ನೇ ಭಾನುವಾರ

ಸಂಜೆ 6 15 ಘಂಟೆಗೆ

ಚಾಮುಂಡಿ ರಸ್ತೆಯಲ್ಲಿರುವ [illegible] ಹೋಮಿನಲ್ಲಿ

ಸಂಗೀತ ಕಛೇರಿ

ಶ್ರೀಮತಿ

ಸೀತಮ್ಮ ಕಡಾಂಬಿಯವರ

ವೀಣಾವಾದನ ಮತ್ತು ಹಾಡುಗಾರಿಕೆ

ⓐ ಬಿ. ಕೆ. ಮೂರ್ತಿಯವರ

ಪಿಟೀಲು

ⓑ ಎಂ ಎಸ್. ರಾಮಯ್ಯನವರ

ಮೃದಂಗ

ಮೆಂಬರುಗಳಲ್ಲದವರಿಗೆ ಟಿಕೆಟ್ ಮೂಲಕ ಪ್ರವೇಶ ಮೆಂಬರುಗಳಿಗೆ ಇದುವರೆಗೆ ಆಹ್ವಾನವು ಬರದಿದ್ದಲ್ಲಿ ಇದನ್ನೇ ಆಹ್ವಾನವೆಂದು ಭಾವಿಸಿ ಬರಬೇಕಾಗಿ ಕೋರಲಾಗಿದೆ

ಟಿಕೆಟ್ ದರ

ದೊಡ್ಡವರಿಗೆ 1 ರೂ. ಹುಡುಗರಿಗೆ 8 ಆ

ಸಂಗೀತ ವಿದ್ಯಾರ್ಥಿಗಳಿಗೆ ಅರ್ಧ ಛಾರ್ಜ್

ಚಾಮುಂಡೇಶ್ವರೀ ಟಾಕೀಸ್

16 9-50ನೇ — [illegible] — [illegible]

ದಿನವಹಿ ಮೂರು ಪ್ರದರ್ಶನಗಳು

[illegible]

ಮಂದಿರ್ MANDIR

[illegible] — [illegible], [illegible], [illegible]

[illegible] ಮಂಗೇಶ್ಕರ್ (ಎ ಐ ಆರ್ ಖ್ಯಾತಿ) ಮತ್ತು [illegible]

ಪ್ರಭುದೇವಾ ಟಾಕೀಸ್

17–9–50ನೇ : ಭಾನುವಾರದಿಂದ

ದಿನವಹಿ ಮೂರು ಆಟಗಳು

ಘೋಸ್ಟ್ ಆಫ್ ಜೋರೊ

Ghost of Zorro

ಅಬೀದ್‌ರವರ ಅಮೋಘ ಔಟ್‌ರೈಟ್ ಹರಾಜು

17-9-50ನೇ — ಭಾನುವಾರ — ಬೆಳಿಗ್ಗೆ 9-30ಕ್ಕೆ

ಹೋಟೇಲ್ ಫರ್ನಿಚರುಗಳ ಪೂರ್ತಿ ಸೆಟ್ಟು, ಗೃಹಕೃತ್ಯದ ಸಾಮಾನುಗಳು ಮತ್ತು ಫರ್ನಿಚರುಗಳು, ಒಳ್ಳೆಯ ಸ್ಥಿತಿಯಲ್ಲಿರುವ ಸೈಕಲ್ ರಿಕ್ಷಾ, ರಿಸ್ಟ್ ವಾಚುಗಳು, ಎಂಟು ದಿನಕ್ಕೊಮ್ಮೆ ಕೀಲು ಕೊಡುವ ಒಳ್ಳೆಯ ಸ್ಥಿತಿಯಲ್ಲಿರುವ ಗುಂಡು ವಾಲ್ ಕ್ಲಾಕುಗಳು, ಕಬ್ಬಿಣದ ಸಾಮಾನುಗಳು, ಸೈಕಲ್ಲುಗಳು, [illegible] ಗ್ರಾಮಫೋನುಗಳು ಮತ್ತು ರಿಕಾರ್ಡುಗಳು, [illegible] ಮರದ ಸಿಂಗಲ್ ಮತ್ತು ಡಬ್ಬಲ್ ಮಂಚಗಳು, ಇತ್ಯಾದಿ, ಇತ್ಯಾದಿ

ಪದಾರ್ಥಗಳನ್ನು 16ನೇ ತಾ॥ ಶನಿವಾರ ಮಧ್ಯಾಹ್ನ 3 ರಿಂದ ಸಂಜೆ 6 ಘಂಟೆ ವರೆಗೆ [illegible]

ಮಾರಾಟದ ಷರತ್ತು — [illegible]

ರಾಜಕಮಲ್,

ಮೈಸೂರು

15_9_50 ರಿಂದ

ದಿನವಹಿ 3 ಪ್ರದರ್ಶನಗಳು

ಶತ್ರಿಪುನ್ನು

(ಹಿಂದಿ)

ಪಾತ್ರ, [illegible], ಯಶೋಧರ [illegible], [illegible]

16-9-50ರಿಂದ ಬೆಳಗಿನ ಪ್ರದರ್ಶನ 3 ದಿನಗಳು ಮಾತ್ರ

- ಪುನರ್ಮಿಲನ -

ಕಿಶೋರ್ ಸಾಹು, ಸ್ನೇಹ ಪ್ರಭಾ ಪಾತ್ರವಹಿಸಿರುವ ಹಿಂದಿ ಚಿತ್ರ

ನೋಂ. ನಂ. 792 WEEKLY EDITION ಬಿಡಿ ಪ್ರತಿ ೬ ಕಾಸು

ಸಾಧ್ವಿ

ಸಂಪುಟ ೧೫] ಭಾನುವಾರ ೧೭-೯-೫೦ [ಸಂಚಿಕೆ ೮

ನಾಸಿಕದಲ್ಲಿ ಕಾಂಗ್ರೆಸ್ ಅಧ್ಯಕ್ಷರ ಮೆರವಣಿಗೆ

ಸರ್ಕಾರದಿಂದ ಸಾಲವನ್ನು ತೆಗೆದುಕೊಳ್ಳಬೇಕಾಗಿಲ್ಲ

ಪೌರ ಸಭೆಯ ತೀರ್ಮಾನ

ಮೈಸೂರು, ೧೭

ನಗರದಲ್ಲಿ ಒಳ ಚರಂಡಿ ವ್ಯವಸ್ಥೆಯನ್ನು [illegible] ಸರ್ಕಾರದಿಂದ [illegible] ಪೌರಸಭೆಯ [illegible] ತೀರ್ಮಾನಿಸಲಾಯಿತು.

ನಗರದಲ್ಲಿ ಒಳ ಚರಂಡಿಗಳನ್ನು [illegible]

[illegible]

ಒಳ ಚರಂಡಿ ವ್ಯವಸ್ಥೆ ಮತ್ತು [illegible] ನಗರಾಭಿವೃದ್ಧಿ ಸಮಿತಿಯವರೇ [illegible]

ಮಂಡಿ ಮತ್ತು ಲಷ್ಕರ್ ಮೊಹಲ್ಲಾಗಳ [illegible]

ಉಪನ್ಯಾಸ ಮತ್ತು ಸಂಗೀತ

ರಾಜಧಾನಿಯ [illegible]

ನೂತನ ಕಾಂಗ್ರೆಸ್ ಅಧ್ಯಕ್ಷರು

ಬಾಬು ಪುರುಷೋತ್ತಮ ದಾಸ್ ಟಂಡನ್

ನಾಸಿಕದಲ್ಲಿ ಕಾಂ. ಅಧ್ಯಕ್ಷರ ವೈಭವದ ಮೆರವಣಿಗೆ

ನಾಸಿಕದಲ್ಲಿ [illegible] ಕಾಂಗ್ರೆಸ್ಸಿನ ನೂತನ ಅಧ್ಯಕ್ಷರಾದ ಬಾಬು ಪುರುಷೋತ್ತಮ ದಾಸ್ ಟಂಡನ್ ಅವರ ಮೆರವಣಿಗೆಯು ವೈಭವದಿಂದ ನಡೆಯಿತು. [illegible]

ಕಾಂಗ್ರೆಸ್ಸಿನ ಅಳಿವು ಉಳಿವಿನ ಪ್ರಶ್ನೆ ಎದುರಿಸಬೇಕಾಗಿದೆ

ನಾಸಿಕ ಕಾಂಗ್ರೆಸ್ ಅಧಿವೇಶನವು ಕಾಂಗ್ರೆಸ್ಸಿನ ಅಳಿವು ಉಳಿವಿನ ಪ್ರಶ್ನೆಯನ್ನು ಎದುರಿಸಬೇಕಾಗಿರುವುದೆಂದು [illegible]

ಮಹಾರಾಜಾ ಕಾಲೇಜಿನ ಶತಮಾನೋತ್ಸವದಲ್ಲಿ ಸಹಾಯ

ಮೈಸೂರಿನ ಮಹಾರಾಜಾ ಕಾಲೇಜಿನ ಶತಮಾನೋತ್ಸವ [illegible]

ಸಂಗೀತ

[illegible]

ರಾಜಧಾನಿಯ ಶ್ರೀ [illegible]

ಈ ಮೆರವಣಿಗೆಯು [illegible]

ಶರಣಾಗತರಾಗಲು ಉ. ಕೊರಿಯನ್ನರಿಗೆ ಮೆಕಾರ್ಥರ್ ಕರೆ

[illegible] "ಶರಣಾಗತರಾಗಲು [illegible]" [illegible]

ಅಸ್ಸಾಂ ಪರಿಹಾರ ನಿಧಿಗೆ ಅಂಚೆ ರಿಯಾಯಿತಿ

ಅಸ್ಸಾಂ ಭೂಕಂಪ ಪರಿಹಾರಕ್ಕಾಗಿ [illegible] ಗವರ್ನರು ಮತ್ತು ಭಾರತದ ಪ್ರಧಾನಿಯವರು [illegible] ತೆಗೆದುಕೊಳ್ಳಲಾಗದೆಂದು [illegible]

ಸಿಯೋಲಿನೊಳಗೆ ವಿಶ್ವ ಸೈನ್ಯಗಳ ಪ್ರವೇಶ

ಕೊರಿಯಾ ರಣರಂಗದಲ್ಲಿ ನೆನ್ನೆ ದಿನ ವಿಶ್ವ ಸಂಸ್ಥೆಯ ಪಡೆಗಳು ದಕ್ಷಿಣ ಕೊರಿಯದ ರಾಜಧಾನಿಯಾದ ಸಿಯೋಲಿನೊಳಗೆ [illegible]

ಒಬ್ಬ ಬಟ್ಟೆ ವ್ಯಾಪಾರಿಗೆ ಭಾರಿ ಶಿಕ್ಷೆ

ಬೆಂಗಳೂರಿನ ಒಬ್ಬ ಬಟ್ಟೆ ವ್ಯಾಪಾರಿ [illegible]

ಎರಡು ತಲೆಗಳುಳ್ಳ ಕರು

[illegible]

ಪತ್ರಿಕೋದ್ಯೋಗಿಗಳ ಸಮ್ಮೇಳನಾಧ್ಯಕ್ಷತೆ

[illegible]

ಮೈಸೂರಿಗೆ ಐದು ವರ್ಷಗಳಲ್ಲಿ ಕೇಂದ್ರದ ಹಣ

[illegible] ಮೈಸೂರು [illegible]

ವಾರ ಭವಿಷ್ಯ

ತಾ॥ ೧೭ ರಿಂದ ೨೩-೯ ರವರೆಗೆ

ಮೇಷ—ವಾರದ ಪರಿಸ್ಥಿತಿ ಚೆನ್ನಾಗಿರದು. ಆರೋಗ್ಯ ಉತ್ತಮವಾಗಿರದು. ವ್ಯಾಪಾರದಿ ಕಷ್ಟ ನಷ್ಟ, ಜನರ ಸಂಪರ್ಕ ಮನೆಯಲ್ಲಿ ಕಲಹ, ಸಂಸಾರ ಸೌಕರ್ಯದಲ್ಲಿ ವೈಲಕ್ಷಣ್ಯದಿಂದ ತೊಂದರೆ ತಾ॥ ೧೭-೧೮ ಕತ್ರ್ರುತ್ವ, ಭಯಾನಕ ವಾರ್ತೆ

ವೃಷಭ—ಉದ್ವೇಗಕಾರಕ ವಾರ. ವ್ಯಾಪಾರಾದಿಗಳಲ್ಲಿ ತೊಂದರೆ ಹೆಚ್ಚುವುದು. ಶತ್ರುಗಳಿಂದ ಅನಾರೋಗ್ಯ ಉಂಟಾಗಬಹುದು. ಖರ್ಚು ವೆಚ್ಚದಿಂದ ಚಿಂತೆಗಳು. ತಾ॥ ೧೯, ೨೦ ರ ನಂತರ ಕ್ಲೇಶ, ಜಿಗುಪ್ಸೆ

ಮಿಥುನ—ದೈವ ಕೃಪೆಯುಂಟು. ಮಾನಸಿಕ ಬೌದ್ಧಿಕ ಪ್ರಕಾಶ ಚಿತ್ತಶಾಂತಿ. ಧಾರ್ಮಿಕ ಕಾರ್ಯ, ಇಷ್ಟ ಜನರ ಸಹವಾಸ. ಸ್ತ್ರೀ ಪ್ರವಾಸ ಹಣಕಾಸಿನ ಆದಾಯದ ದೃಷ್ಟಿಯಿಂದ ಸ್ಥಿತಿ ಚೆನ್ನಾಗಿದೆ. ತಾ॥ ೨೧, ೨೨ ಮಿತ್ರರಿಗೆ ಔತಣ. ಸತ್ಕಾರ ನಡೆಯಬಹುದು

ಕರ್ಕ—ವಾರವು ಮಾನಸಿಕ ವ್ಯಗ್ರತೆಯದು. ವ್ಯಾಪಾರ ಉದ್ಯೋಗ ಸೌಕರ್ಯಗಳಲ್ಲಿ ಅಸ್ಥಿರತೆ. ಹಾಗೂ ಶತ್ರುತ್ವ, ಹಣದ ಅಭಾವ. ತಾ॥ ೧೯, ೨೦ ರ ನಂತರ ಅನಾರೋಗ್ಯ. ಅಪ್ರಿಯ ವಾರ್ತೆ

ಸಿಂಹ—ಮೊತ್ತಮೊದಲಿಗೆ ಅನಾರೋಗ್ಯ. ಆದರೆ ಉತ್ತಮವಾಗುವುದು. ಆರೋಗ್ಯ ನೆಟ್ಟಗಿರದು. ಆಯಾಸ, ಉತ್ಸಾಹವಿಲ್ಲ. ವ್ಯಾಪಾರಾದಿಗಳಲ್ಲಿ ಶತ್ರುಗಳ ಕಾಟ, ಧನನಾಶ. ತಾ॥ ೨೧-೨೩ ಅಗ್ನಿಯಿಂದ ಅಪಘಾತ, ಕಲಹ

ಕನ್ಯಾ—ಕೈಗೊಂಡ ಕಾರ್ಯಕ್ಕೆ ಪ್ರಸಿದ್ಧಿಯುಂಟು. ಆರೋಗ್ಯ ನೆಟ್ಟಗೆ. ಧನಲಾಭ, ಪ್ರಿಯ ವ್ಯಕ್ತಿಗಳ ಭೇಟಿ, ನೌಕರಿಯಲ್ಲಿ ಅಧಿಕಾರ ಕ್ಷೇತ್ರದ ವಿಸ್ತರಣೆ. ಉತ್ಸಾಹಪ್ರದ ವಾರ. ತಾ॥ ೧೭, ೨೧, ೨೨ ಧಾರ್ಮಿಕ ಕಾರ್ಯ ನಡೆಯಬಹುದು

ತುಲಾ—ಆರೋಗ್ಯ ಉತ್ತಮವಾಗಿರುವುದು. ಮನೆತನದ ಗಳಿಕೆಯಿಂದ ಲಾಭ, ವ್ಯಾಪಾರಾದಿಗಳಲ್ಲಿ ಕೀರ್ತಿಯು ಪ್ರಸಾರ, ಅಭ್ಯುದಯ. ಪ್ರಿಯಜನರ ಸಹವಾಸ. ಉತ್ಸಾಹ ತಾ॥ ೧೭, ೧೯ ಪ್ರವಾಸ, ಮಹತ್ವದ ಪತ್ರ

ವೃಶ್ಚಿಕ—ವಾರ ಬಹು ದಗದಗಿಯ

ದು ಮನಸ್ಸಿಗೆ ವಿರುದ್ಧ ಘಟನೆಗಳು ಸಾಕಾರವಾಗುವುವು. ಅಪರೂಪ ಪ್ರವಾಸದಲ್ಲಿ ಧರ್ಮ ತಾ॥ ೨೧, ೨೨ ಅರ್ಥಿಕ ಚಿಂತಾ ನಿವಾರಣೆ

ಧನು—ಹಣಕಾಸಿನ ವೆಚ್ಚವು ಕಡಿಮೆಯಾಗುವುದು. ಅತಿಯಾದ ಆತುರಗಳ ಸಂಬಂಧ ವ್ಯಾಪಾರಾದಿಗಳಲ್ಲಿ ಜವಾಬ್ದಾರಿ ಹೆಚ್ಚಳ. ಜಾಗರೂಕ ತಾ॥ ೧೭, ೧೮ ಪ್ರವಾಸದಲ್ಲಿ ಸಂಕಟ, ಪತ್ನಿಗೆ ಅನಾರೋಗ್ಯ, ಕಾಲಿಗೆ ಪೆಟ್ಟು, ಚೋರ ಭಯ

ಮಕರ—ಅನಿರೀಕ್ಷಿತವಾದ ಅನೇಕ ಘಟನೆಗಳು ನಡೆಯುವುವು. ದೇವ ಮತ್ತು ಬ್ರಾಹ್ಮಣ ಸೇವೆಗಳು ನಡೆಯುವುವು. ವಿದ್ಯಾರ್ಥಿಗಳಿಗೆ ಲಾಭ. ವ್ಯಾಪಾರಾದಿಗಳಲ್ಲಿ ಧನ ಲಾಭ. ಆರೋಗ್ಯ ನೆಟ್ಟಗೆ ತಾ॥ ೧೯, ೨೦ ಅಪತ್ರದ ಆಗಮನ, ಗೊಂದಲ

ಕುಂಭ—ಕೈಗೊಂಡ ಕಾರ್ಯ ಯಶಸ್ವಿಯಾಗಿ ನೆರವೇರುವುದು. ಆರೋಗ್ಯ ನೆಟ್ಟಗೆ. ವ್ಯಾಪಾರಾದಿಗಳಲ್ಲಿ ಧನ ಲಾಭ. ಎದುರಾಳಿಗಳು ಬೀಳುವರು ತಾ॥ ೨೧, ೨೨ ಜಾಗರಣೆ, ಅನ್ನದಾನ

ಮೀನ—ಲಾಭದಾಯಕವಾದ ವಾರ. ಆರೋಗ್ಯ ನೆಟ್ಟಗೆ. ಮಹತ್ವದ ಪತ್ರಗಳ ಆಗಮನ. ವ್ಯಾಪಾರಾದಿಗಳಲ್ಲಿ ಉತ್ಸಾಹ. ಹೊಸ ಗೆಳೆತನ. ಉತ್ತಮ ಕೌಟುಂಬಿಕ ಸ್ಥಿತಿ. ತಾ॥ ೨೧, ೨೨, ಪ್ರವಾಸ, ಎದುರಾಳಿಗಳ ಸೋಲು

ಕತ್ತಿ ಕಿರುಬ ಮತ್ತು ತೋಳಗಳಿಂದ ಮಕ್ಕಳ ಅಪಹರಣ

ಲಕ್ನೋ ನಗರ ಮತ್ತು ಸುತ್ತಮುತ್ತಲ ಹಳ್ಳಿಗಳ ಮೇಲೆ ಕತ್ತಿ ಕಿರುಬ ಮತ್ತು ತೋಳಗಳು ಧಾಳಿ ಮಾಡಿದ ಪರಿಣಾಮವಾಗಿ ೧೪ ಮಕ್ಕಳು ಅಪಹೃತವಾಗಿ ಮರಣಹೊಂದಿವೆ. ೨೦ ಮಕ್ಕಳನ್ನು ಸಂರಕ್ಷಿಸಲಾಯಿತು. ೧೩ನೇ ತಾರೀಖು ರಾತ್ರಿ ೧೨ ವರ್ಷದ ಹುಡುಗಿಯೊಂದನ್ನು ಅವು ಹೊತ್ತುಕೊಂಡು ಹೋಗುವುದರಲ್ಲಿದ್ದವು. ಅವಳನ್ನು ಸಂರಕ್ಷಿಸಲಾಯಿತು. ಈ ಮೃಗಗಳನ್ನು ನಾಶಪಡಿಸಲು ಸಿಪಾಯಿಗಳನ್ನೂ, ಪೋಲೀಸು ಪಡೆಗಳನ್ನೂ ಕಳುಹಿಸಲಾಗಿದೆ

ಜನ ಗಣತಿ ತೆಗೆದುಕೊಳ್ಳಲು ಪ್ರಜೆಗಳ ಗೃಹ ಬಂಧನ

ಅಲ್ಜೀರಿಯಾದಲ್ಲಿ ಮೊನ್ನೆ ಜನಗಣತಿ ತೆಗೆದುಕೊಳ್ಳುವ ಸಂದರ್ಭದಲ್ಲಿ ಅಲ್ಲಿನ ಎಲ್ಲ ಜನರನ್ನೂ ಬೆಳಗಿನಿಂದ ಸಂಜೆಯವರೆಗೆ ಗೃಹಬಂಧನದಲ್ಲಿಡಲು ಅಲ್ಲಿನ ಸರ್ಕಾರವು ತೀರ್ಮಾನಿಸಿದೆ. ಆ ಅವಧಿಯಲ್ಲಿ ಎಲ್ಲಾ ತರಹ ಸಂಚಾರವನ್ನೂ ನಿಲ್ಲಿಸಿದ್ದಾರೆ. ಜನರು ಮನೆಯಿಂದ ಹೊರಗೆ ಬರುವಂತಿಲ್ಲ. ಪೋಲೀಸರು ಮತ್ತು ಸೈನ್ಯದ ಅಧಿಕಾರಿಗಳು ಮಾತ್ರ ರಸ್ತೆಯಲ್ಲಿ ತಿರುಗಾಡಲು ಅವಕಾಶವಿರುವುದು. ಪ್ರಜೆಗಳು ಏನಾದರೂ ತುರ್ತು ಕಾರ್ಯವಿದ್ದಲ್ಲಿ ಆ ಭಾಗದ ಮನೆಯಲ್ಲಿ ತುರಿದ ಸಂಭವಿಸಿದ್ದಲ್ಲಿ ಪೋಲೀಸ್ ಅಧಿಕಾರಿಗಳಿಗೆ ಮನೆ ಕಿಟಕಿಗಳ ಮೂಲಕ ತಿಳಿಸಬೇಕು

ಅಸ್ಸಾಂ ನಿಧಿಗೆ ನಿಜಾಮರಿಂದ ೫ ಲಕ್ಷ ರೂ.

ಹೈದರಾಬಾದಿನ ನಿಜಾಮರು ಅಸ್ಸಾಮಿನ ಭೂಕಂಪ ಪರಿಹಾರ ನಿಧಿಗೆ ೫ ಲಕ್ಷ ರೂ. ಗಳ ದ್ರವ್ಯ ಸಹಾಯ ಮಾಡುವುದಾಗಿ ತಿಳಿಸಿರುವರು. ಭಾರತದ ಮಾಜಿ ಗವರ್ನರ್ ಜನರಲ್ ಆದ ಲಾರ್ಡ್ ಮೌಂಟ್ ಬ್ಯಾಟನ್ ಅವರು ೫೦೦ ಪೌಂಡುಗಳನ್ನು ಈ ನಿಧಿಗೆ ಅರ್ಪಿಸಿರುವರು

ದೋಣಿಯಲ್ಲಿ ಗಲಭೆಯಾಗಿ ೧೦ ಜನ ನೀರಿಗೆ

ಬಿಹಾರಿನ ಬೇಗುಸರಾಯ್ ಬಳಿ ಒಂದು ನದಿಯಲ್ಲಿ ತುಂಬಿದ್ದ ದೋಣಿಯ ಜನರಲ್ಲಿ ಗಲಭೆಯಾಗಿ ದೋಣಿಯು ಮಗುಚಿಕೊಂಡು ೧೦ ಜನರು ನೀರಿನ ಪಾಲಾದರೆಂದು ತಿಳಿದುಬಂದಿದೆ

ಸುಂದರವೂ ಬಾಳಿಕೆಯುಳ್ಳವೂ ಆದ

ಬೋರ್ಡುಗಳನ್ನು

ಅಗ್ಗವಾಗಿ ಬರೆದು ಕೊಡುತ್ತೇವೆ

ಓರಿಯಂಟಲ್ ಇಂಡಸ್ಟ್ರೀಸ್,

ಜಗನ್ಮೋಹನ ಬಂಗ್ಲೆ ಬೀದಿ, ಮೈಸೂರು

ಎಸ್. ಎ. ಡಾಂಗೆಯವರ ಬಂಧನ ಮತ್ತು ಬಿಡುಗಡೆ

ಬೊಂಬಾಯಿನ ಕಮ್ಯೂನಿಸ್ಟ್ ಪಕ್ಷದ ಮುಖಂಡರಾದ ಶ್ರೀ ಎಸ್. ಎ. ಡಾಂಗೆ ಮತ್ತು ಇತರ ನಾಲ್ವರು ಬೊಂಬಾಯಿ ಪೋಲೀಸು ಕಮೀಷನರ ಅಪ್ಪಣೆಯನ್ನು ಉಲ್ಲಂಘಿಸಿ ನಿನ್ನೆ ದಿನ ನ್ಯಾಯಬಾಹಿರವಾದ ಸಭೆಯನ್ನು ಸೇರಿಸಿದುದಕ್ಕಾಗಿ ಬಂಧಿಸಲ್ಪಟ್ಟು, ಅನಂತರ ತಲಾ ೫೦೦ ರೂ. ಗಳ ಸ್ವಂತ ಜಾಮೀನಿನ ಮೇಲೆ ಬಿಡುಗಡೆ ಮಾಡಲ್ಪಟ್ಟರು.

ಕೇಂದ್ರ ಮಂತ್ರಿಗಳಿಗೆ ಬಹಿಷ್ಕಾರ

ಕೇಂದ್ರ ಸರ್ಕಾರದ ಕೆಲವರು ದಕ್ಷಿಣ ಭಾರತದ ಹಿತವನ್ನು ನಿರ್ಲಕ್ಷಿಸಿರುವರೆಂದೂ ಮತ್ತು ನ್ಯಾಯವಾದ ಅವಶ್ಯಕತೆಗಳನ್ನು ಕೈಗೊಂಡಿಲ್ಲವೆಂದೂ ಆದ ಕಾರಣ ಮದರಾಸಿನ ನ್ಯಾಯ ಶೀಲರನ್ನು ಸಹ ಕೇಂದ್ರ ಮಂತ್ರಿಗಳನ್ನು ಬಹಿಷ್ಕರಿಸಲು ನಿರ್ಧರಿಸಿರುವರೆಂದೂ ಫೆಡರೇಷನ್ನಿನ ಕಾರ್ಯದರ್ಶಿಗಳು ತಿಳಿಸಿರುವರು

ಭಾರತೀಯರನ್ನು ವರಿಸಲು ಚೀನಾ ಸ್ತ್ರೀಯರಿಗೆ ಆಸಕ್ತಿ

ಮಲಯದಲ್ಲಿ ಚೀನಾ ಮಹಿಳೆಯರು ಇತ್ತೀಚೆಗೆ ಭಾರತೀಯರನ್ನು ಹೆಚ್ಚು ಹೆಚ್ಚಾಗಿ ವಿವಾಹವಾಗುತ್ತಿರುವರೆಂದು ವರದಿಯಾಗಿದೆ. ಭಾರತೀಯರನ್ನು ವರಿಸಿದ ಸ್ತ್ರೀಯರಿಗೆ ತೃಪ್ತಿಕರವಾದ ಪೋಷಣೆ, ರಕ್ಷಣೆ ಮತ್ತು ಭದ್ರತೆಗಳು ಖಂಡಿತವಾಗಿಯೂ ದೊರಕುವುವೆಂದು, ಭಾರತೀಯರನ್ನು ವಿವಾಹವಾದ ಒಬ್ಬ ಚೀನಾ ಮಹಿಳೆಯು ಹೇಳಿದ್ದಾಳೆ

ಶುಭಾ

(ಕಂದ ಸುದ್ದಿಗಳ ಸುಂದರ ಪತ್ರಿಕೆ)

ಇದೀಗ ಸಿದ್ಧವಾಗಿದೆ

† ಕಾಲ್ಪನಿಕ - ಸೂಕ್ಷ್ಮ ದೃಷ್ಟಿ

† ಪ್ರಶ್ನೋತ್ತರ - ಒಲವು ಗೆಲುವು

† ವಿನೋದ - ಹರಟೆ

† ಇತ್ಯಾದಿ - ಇತ್ಯಾದಿಗಳಿಂದ ತುಂಬಿ ತುಳುಕುವ

ನೂತನ ಕನ್ನಡ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4

ಎಲ್ಲೆಲ್ಲೂ ಏಜೆಂಟರು ಬೇಕು

ಅಲ್ಲದೆ ಸೊಗಸಾದ ಲೇಖನಗಳಿಗೆ ಸಂಭಾವನೆ

ಸಂಭಾವನೆಯೂ ಸಹಾ

"ಶುಭ"

ನಂ 5 ವೆಂಕಟಾಚಲಯ್ಯ ಲೇನ್, ಸಿಟಿ ಮಾರ್ಕೆಟ್ ಸಮೀಪ, ಬೆಂಗಳೂರು 2

ಚಾಮುಂಡೇಶ್ವರಿ ಟಾಕೀಸ್

16-9-50 ಶನಿವಾರದಿಂದ — ಅನಿರೀಕ್ಷಿತ ಪ್ರಾರಂಭ

ದಿನವಹಿ ಮೂರು ಪ್ರದರ್ಶನಗಳು

ಭಾರತದ ಪ್ರಖ್ಯಾತರ ಉತ್ತಮ ಪಠಣ ಸಂಗೀತಮಯ ಸಾಮಾಜಿಕ ಹಿಂದಿ ಚಿತ್ರ

ಮಂದಿರ್ MANDIR

ಪಾತ್ರವರ್ಗ:— ಸಾಧು ಜೋಸೆಫ್, ಲೀಲಾ ಚಿಟ್ನಿಸ್, ರಾಜಾ ಆಪ್ಟೆ,

ಬಿಜಾ ಮಂಗೇಷ್ಕರ್ (ವಿ. ಬಿ. ಆರ್ ಪ್ರೊಡಕ್ಷನ್ಸ್ ಮತ್ತು ಬೇರೆ ಸಂಗ.

ಪ್ರಭುದೇವಾ ಟಾಕೀಸ್

17—9—50ನೇ :: ಭಾನುವಾರದಿಂದ

ದಿನವಹಿ ಮೂರು ಆಟಗಳು

ಘೋಸ್ಟ್ ಆಫ್ ಜೋರೊ

Ghost of Zorro

ಗುರುದೇವ ಹಾಲ್

ಶಿವರಾಂಪೇಟೆ ಮೈಸೂರು.

ನವೀನವಾದ ಬಾರ್ಡರುಗಳುಳ್ಳ

ಧರ್ಮಾವರಂ, ಕಾಂಚೀವರಂ, ಆರಣಿ

ಸೀರೆಗಳು ಹೊಸದಾಗಿ ಬಂದಿರುತ್ತವೆ

ಒಂದೇ ದಯವಿಟ್ಟು ಭೇಟಿ ಕೊಡಿ

ವುಡ್ ಲ್ಯಾಂಡ್ಸ್

15-9-50ರಿಂದ ಅಮೋಘ 2ನೇ ವಾರ

* ನಮೂನ *

ಪಾತ್ರ:- ಕಾಮಿನಿ ಕೌಶಲ್, ಕಿಶೋರ್ ಸಾಹು, ಕಕ್ಕು, ಲೀಲಾ ಚಿಟ್ನಿಸ್

(ಎ ಎಸ್ ಫಿಲಂಸ್ ರಿಲೀಸ್

ರಾಜಕಮಲ್,

ಮೈಸೂರು

15—9—50 ರಿಂದ

ದಿನವಹಿ 3 ಪ್ರದರ್ಶನಗಳು

ಶತಿಪ್ರನ್ನು

(ಹಿಂದಿ)

ಪಾತ್ರ:-ಗೀತಾ ನಿಜಾಮಿ, ಸುಶೋಭನಾ ಚಟ್ಟು, ಗೋಪ್, ಪೃಥ್ವಿರಾಜ್, ಕಕ್ಕು

Edited, printed and published by A. R. Nagarajan at Sadhvi Press D Subbiah Road, Mysore

ಸಾಧ್ವಿ

ಸಂಪುಟ [illegible]] ಸೋಮವಾರ [illegible] [ಸಂಚಿಕೆ [illegible]

ಸ್ವತಂತ್ರ ಕೊರಿಯಾ ಸ್ಥಾಪನೆಗೆ ಕಾಂಗ್ರೆಸ್ ಕರೆ

ಪ್ರಭುಗಳ [illegible] ದಿನೋತ್ಸವ

ಮೈಸೂರು [illegible]

[illegible]

ರಾಜೇಂದ್ರ ಪ್ರಸಾದರ [illegible] ಚರಿತ್ರೆಗೆ ಬಹುಮಾನ

[illegible]

ಭಾರತ [illegible] ವರ್ಕಿಂಗ್ ಕಮಿಟಿ ನಿರ್ಣಯಗಳು

[illegible]

ಅಸ್ಸಾಂ ಪರಿಹಾರ ನಿಧಿಗೆ ಪ್ರಭುಗಳಿಂದ ೧ ಲಕ್ಷ ರೂ.

ಮೈಸೂರು [illegible]

[illegible]

ಕೊರಿಯಾ ಯುದ್ಧ ನಿಲ್ಲಿಸಲು ರಷ್ಯದ ಶಾಂತಿ ಪ್ರಯತ್ನವೇ?

[illegible]

ಮಧ್ಯಪ್ರಾಚ್ಯದಲ್ಲಿ [illegible] ಪ್ರವಾಸ

[illegible]

[illegible] ಭಾರತದ [illegible]

[illegible]

ವಂಚಕರ ಕೊಲೆ ಅಪರಾಧಿಗಳಿಗೆ ಗಲ್ಲು ಶಿಕ್ಷೆ

[illegible]

"ದಿವಂಗತ ನೇತಾಜಿ" ಎಂದುದಕ್ಕೆ ಸಭೆಯಲ್ಲಿ ಗೊಂದಲ

[illegible]

ಅಹಮದಾಬಾದಿನ ಮೇಲೆ ಬಿರುಗಾಳಿ

[illegible]

೨ನೇ ಸಿನಿಮಾ ಆಟಕ್ಕೆ ಹೋಗಲು ಬಾಲಕರಿಗೆ ನಿರ್ಬಂಧ

[illegible]

ಪೌರಸಭಾ ಉಪಾಧ್ಯಕ್ಷ ಚುನಾವಣೆ

[illegible]

ಗಿಲ್ಗಿಟ್ಟನ್ನು ಅಮೆರಿಕಕ್ಕೆ ಮಾರುವ ಪ್ರಯತ್ನ

ಪಾಕಿಸ್ತಾನದ ವಶದಲ್ಲಿರುವ ಕಾಶ್ಮೀರ ಪ್ರದೇಶದ ಭಾಗವಾದ ಗಿಲ್ಗಿಟ್ ಅನ್ನು ಅಮೆರಿಕಕ್ಕೆ ಮಾರಲು ಪಾಕಿಸ್ತಾನ ಮತ್ತು ಅಮೆರಿಕನರಿಗೆ ಮಾತುಕತೆ ನಡೆಯುತ್ತಿರುವುದೆಂದೂ ಇದರ ಬಗ್ಗೆ ಕಾಶ್ಮೀರದ ಪ್ರಧಾನಿ ಷೇಕ್ ಅಬ್ದುಲ್ಲಾರವರು ಎರಡು ರಾಷ್ಟ್ರಗಳನ್ನೂ ತೀವ್ರವಾಗಿ ಆಕ್ಷೇಪಿಸುತ್ತಿರುವರೆಂದೂ ಗೊತ್ತಾಗಿದೆ

ಫಿಲಿಪೈನಿನಲ್ಲಿ ಜ್ವಾಲಾಮುಖಿ

ಫಿಲಿಪೈನಿನ ದಕ್ಷಿಣ ದ್ವೀಪವಾದ ಮಿಂಡಾನೊದಲ್ಲಿ ಇರುವ ಚಿಕ್ಕ ದ್ವೀಪದ ಹಿಬೊಕ್ ಅಗ್ನಿ ಪರ್ವತವು ಬೆಂಕಿಯನ್ನು ಕಾರಲಾರಂಭಿಸಿದೆ ಇದರಿಂದ ೫೧ ಜನರು ಸತ್ತು ೨೭ ಮಂದಿಗೆ ತೀವ್ರ ಗಾಯವಾಗಿರುತ್ತದೆ

ಬಿಹಾರಿನಲ್ಲಿ ಔಷಧಿಗಳ ಫೇರ್ ಪ್ರೈಸ್ ಅಂಗಡಿಗಳು

ಬಿಹಾರಿನಲ್ಲಿ ಆಮದು ಮಾಡಲ್ಪಟ್ಟ ಔಷಧ ಮುಂತಾದ ವಸ್ತುಗಳು ಕಣ್ಮರೆಯಾಗಿರುವುದರಿಂದ ಫೇರ್ ಪ್ರೈಸ್ ಅಂಗಡಿಗಳನ್ನು ತೆರೆದು ಸದರಿ ಪದಾರ್ಥಗಳು ಜನರಿಗೆ ಸಿಕ್ಕುವಂತೆ ಮಾಡುವ ವಿಷಯವು ಅಲ್ಲಿನ ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದು ವರದಿಯಾಗಿದೆ

City Municipal Office
Mysore Dated 13 9 50

NOTICE

No Fl 141/48 49

Lorries bearing Nos MYZ 2318 and GCD 16 belonging to the Food Supply Department will be sold in public auction by the Municipal Engineer on Sunday the 8th, October 1950 at 9 A. M in the premises of the Municipal Offices Lorry No. MYZ 2319 also belonging to the Food Supply Department will be sold by public auction by the Municipal Engineer on the same day at 11 A. M. in the premises of Mahalakshmi Body Building Works in Vanivilas Road The terms and conditions of the sale and further particulars can be seen from the detailed notification on the Notice Board of the Municipal Offices or obtained from the Office of the Municipal Engineer. The lorries can also be inspected by intending bidders

C NARASIMHA MOORTY.
Municipal Commissioner.

ನಾಯಿಗಳಿಗೆ ಆಹಾರ ನೀಡುವ ಯಂತ್ರ

ಅಮೆರಿಕದಲ್ಲಿ ನಾಯಿಗಳಿಗೆ ಮನೆಯಲ್ಲಿ ಯಾರೂ ಇಲ್ಲದಿರುವಾಗ ಕ್ಲುಪ್ತವಾಗಿ ಆಹಾರ ನೀಡುವ ಯಂತ್ರಗಳಿವೆ ಈ ಯಂತ್ರದಲ್ಲಿ ಒಂದು ಗಡಿಯಾರವೂ, ಆಹಾರವನ್ನಿಡುವ ಸ್ಥಳ ಮತ್ತು ಒಂದು ಮುಚ್ಚಳವೂ ಇರುತ್ತವೆ ಮನೆ ಮಾಲೀಕನು ಆಹಾರ ಕೊಡಬೇಕಾದ ಕಾಲಕ್ಕೆ ಗಡಿಯಾರವನ್ನು ತಿರುಗಿಸಿದ್ದರೆ, ಆ ಹೊತ್ತಿಗೆ ಸರಿಯಾಗಿ ಮುಚ್ಚಳವು ತೆಗೆಯಲ್ಪಟ್ಟು ಆಹಾರವು ದೊರೆಯುತ್ತದೆ

ತಮಗೆ ತಾವೇ ಸಜಾ ವಿಧಿಸಿಕೊಂಡ ಮೇಯರರು

ಅಮೆರಿಕದ ಮಿಚಿಗನ್ನಿಗೆ ಸೇರಿದ ಡಿಯರ್ ಬಾರ್ನ್ ಎಂಬ ನಗರದ ಮೇಯರು ವಾಹನವನ್ನು ವೇಗದಿಂದ ನಡೆಸಿದ್ದಕ್ಕಾಗಿ ತಮ್ಮ ಮೇಲೆ ತಾವೇ ಹಾಕಿಕೊಂಡ ಸಜಾ ವಿಧಿಸಿಕೊಂಡು ಜೈಲಿಗೆ ಹೋದರೆಂದು ವರದಿಯಾಗಿದೆ ಜೈಲಿನಲ್ಲಿದ್ದುಕೊಂಡೇ ಅವರು ಪೌರಾಡಳಿತವನ್ನು ನಡೆಸಲು ಆಲೋಚಿಸಿದ್ದಾರೆ ತಮ್ಮ ತಪ್ಪನ್ನು ಒಪ್ಪಿಕೊಳ್ಳುವುದು ಅವಮಾನವಲ್ಲವೆಂದು ಅವರು ತಿಳಿಸಿರುವರು

ಉಪನ್ಯಾಸ

ರಾಜಧಾನಿಯ ಕೌಟಿಲ್ಯ ಮಂಡಲಿಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಮಹಾರಾಜ ಕಾಲೇಜಿನಲ್ಲಿ 'ಕೌಟಿಲ್ಯ ಮತ್ತು ಅವರ ಮುಖ್ಯೋದ್ದೇಶ" ಎಂಬ ವಿಷಯವಾಗಿ ಸಂಸ್ಥಾನದ ವಿದ್ಯಾಧಿಕಾರಿಗಳಾದ ಶ್ರೀ ಕೆ ಗುರುದತ್ತರವರು ಭಾಷಣ ಮಾಡುವರು. ಸೆಂಟ್ ಫಿಲೋಮಿನಾ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಸಿ. ಜೆ. ವಾರ್ಕಿಯವರು ಅಧ್ಯಕ್ಷತೆ ವಹಿಸುವರು

ವಿವಾಹ ಮಹೋತ್ಸವ

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಪಿ ಸಿ ರಂಗನಾಥ ಚಕ್ರವರ್ತಿ ಅಯ್ಯಂಗಾರ್ಯರ ಕನಿಷ್ಠ ಸಹೋದರರಾದ ಶ್ರೀ ಪಿ ಸಿ ಶ್ರೀನಿವಾಸ ಚಕ್ರವರ್ತಿ ಅಯ್ಯಂಗಾರ್ಯರಿಗೆ ಬೆಂಗಳೂರಿನ ವ್ಯವಸಾಯ ಸಂಶೋಧನಾ ಶಾಖೆಯ [illegible] ಶ್ರೀನಿವಾಸ [illegible] ಯವರ [illegible] ಕುಮಾರಿಯನ್ನು ಕೊಡಲಿದ್ದು, ಬೆಂಗಳೂರಿನ [illegible] ದಲ್ಲಿ [illegible] ವಿವಾಹವನ್ನು ನಿಶ್ಚೈಸಿರುವರು

ಗುರುದೇವ ಹಾಲ್

ಶಿವರಾಂಪೇಟೆ ಮೈಸೂರು.
ನವೀನವಾದ ಮಾದರಿಗಳಲ್ಲಿ
ಕಲ್ಯಾಣರಂ, ಕಾಂಚೀವರಂ, ಅರಣಿ
ಸೀರೆಗಳು ಹೊಸದಾಗಿ ಬಂದಿರುತ್ತವೆ.
ಇಂದೇ ದಯಮಾಡಿ ಭೇಟಿ ಕೊಡಿ

ಅಸ್ಸಾಂ ಜನರಿಂದ "ಮಂತ್ರವಾದಿ" ದಂಪತಿಗಳ ಕೊಲೆ

ಅಸ್ಸಾಮಿನ ಬಂಗ ಪಾಡ ಎಂಬ ಊರಿನ ಬಳಿ ಇರುವ ಹಳ್ಳಿಯೊಂದರ ಆದಿವಾಸಿ ದಂಪತಿಗಳಿಬ್ಬರು ಮಾಟ ಮಂತ್ರಗಳನ್ನು ಮಾಡುತ್ತಿರುವರೆಂಬುದಕ್ಕಾಗಿ ಅಲ್ಲಿನ ಮೂಢ ಜನರು ಅವರನ್ನು ವಿಷಪೂರಿತ ಬಾಣಗಳಿಂದ ಹೊಡೆದು ಕೊಂದಿರುತ್ತಾರೆ ಅನೇಕ ಅಪಘಾತಗಳು ಆ ಪ್ರಾಂತದಲ್ಲಿ ನಡೆದುದು ಇಂತಹ ಮಾಟಗಳಿಂದಲೇ ಎಂದು ಅವರು ಭಾವಿಸಿ, ಕೋಪೋದ್ರಿಕ್ತರಾಗಿ, ಅವರಿಬ್ಬರನ್ನೂ ಅಟ್ಟಿಸಿಕೊಂಡು ಹೋಗಿ, ಅವರನ್ನು ಮುಟ್ಟಲು ಹೆದರಿ ಬಾಣಗಳಿಂದ ಕೊಲೆ ಮಾಡಿರುವರು

ಅಸ್ಸಾಮಿನ ಶಾಲೆಗೆ ಸಿಡಿಲು ಬಡಿತ

ಅಸ್ಸಾಮಿನ ರಾಜಧಾನಿ ಗೌಹಾತಿ ಬಳಿ ರಾಮಪುರದಲ್ಲಿ ಶಾಲೆಯೊಂದು, ನಡೆಯುತ್ತಿದ್ದಾಗ ಸಿಡಿಲು ಬಡಿದುದರ ಪರಿಣಾಮವಾಗಿ ಇಬ್ಬರು ಉಪಾಧ್ಯಾಯರು ಮತ್ತು ಒಬ್ಬ ವಿದ್ಯಾರ್ಥಿಯು ಸತ್ತು, ಏಳು ಜನರು ಪ್ರಜ್ಞೆ ತಪ್ಪಿದ್ದರೆಂದು ವರದಿಯಾಗಿದೆ.

ಅಸ್ಸಾಮಿನ ಕಾಡಾನೆಗಳನ್ನು ಹಿಡಿಯುವ ಪ್ರಯತ್ನ

ಅಸ್ಸಾಮಿನ ಕಾಡುಗಳಲ್ಲಿರುವ ೩೮ ಕಾಡಾನೆಗಳನ್ನು ಬರುವ ತಿಂಗಳಿನಿಂದ ಮುಂದಿನ ವರ್ಷದ ಮಾರ್ಚಿಯೊಳಗೆ ಹಿಡಿಯಲು ಪ್ರಯತ್ನ ನಡೆಯಾಗುವುದು ಇವುಗಳಿಂದ ಜನರ ಆಸ್ತಿ ಮತ್ತು ಪ್ರಾಣಗಳಿಗೆ ಧಕ್ಕೆ ಉಂಟಾಗುತ್ತದೆ

ಮೂರು ಸೀಸೆ ಮದ್ಯಕ್ಕಾಗಿ ಕಳವು

ಬೊಂಬಾಯಿನ ಬ್ರಿಟಿಷ್ ಅಧಿಕಾರಿಯೊಬ್ಬರ ಮನೆಗೆ ಕನ್ನ ಹಾಕಿ ಯಾವ ಬೆಲೆ ಬಾಳುವ ವಸ್ತುಗಳನ್ನೂ ಕದಿಯದೆ ಮೂರು ಸೀಸೆಗಳಲ್ಲಿದ್ದ ಮಾದಕ ದ್ರವ್ಯವನ್ನು ಕಳ್ಳರು ಅಪಹರಿಸಿದರೆಂದು ವರದಿಯಾಗಿದೆ

ರಘುಲಾಲ್ & ಕೋ.,
ಔಷಧ ವ್ಯಾಪಾರಿಗಳು
ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧ ವ್ಯಾಪಾರಿಗಳು,
70 ಆರ್ಕಾಟ್ ಶ್ರೀನಿವಾಸಾಚಾರ್ಯರ ರಸ್ತೆ,
ಬೆಂಗಳೂರು.

Edited, printed and published by A K. Nagarajan at Sadhvi Press D Subbiah Road, Mysore

ತಿಂಗಳಿಗೆ ೩ ಕೋಟಿ ಗ್ಯಾಲನ್ ಪೆಟ್ರೋಲು ಖರ್ಚು

ಪೆಟ್ರೋಲು ಪಡಿತರವನ್ನು ತೆಗೆಯುವುದರಿಂದ ಅದರ ಹೆಚ್ಚಿನ ಖರ್ಚು ಆಗುತ್ತಿಲ್ಲವೆಂದೂ ಸರಾಸರಿ ತಿಂಗಳಿಗೆ ೩ ಕೋಟಿ ಗ್ಯಾಲನ್ ಎಣ್ಣೆಯು ಖರ್ಚಾಗುವುದೆಂದೂ ಹೇಳಲಾಗಿದೆ

Mal No 446 Engels

ಬಾಗಿಲಿನ ಮೇಲೆ ಬಿಳಿಯ ಕತ್ತರಿ ಗೆರೆಗಳು

ಆಫ್ರಿಕದಲ್ಲಿ ಸಂಚಾರವನ್ನು ಕೈಗೊಂಡಿದ್ದ ಒಬ್ಬ ಆಂಗ್ಲ ವರದಿಗಾರನು ನೈಜೀರಿಯದಲ್ಲಿ ಪ್ರತಿ ಮನೆಯ ಬಾಗಿಲ ಮೇಲೂ ಗಾಢವಾದ ಬಿಳಿಯ ಅಡ್ಡ ಗೆರೆಯೊಂದನ್ನು ಕಂಡು ಆಶ್ಚರ್ಯಪಟ್ಟನು ಅವನು ಆ ಸ್ಥಳದ ಹೆಬ್ಬ [illegible] ನನ್ನು ಸ್ನೇಹಿತನನ್ನಾಗಿ ಮಾಡಿಕೊಂಡು ಈ ಅಡ್ಡ ಗೆರೆಗಳ ಅರ್ಥವೇನೆಂದು ಕೇಳಿದನು. ಅಂಧಶ್ರದ್ಧೆ ಮತ್ತು ದುಷ್ಟಶಕ್ತಿಗಳಲ್ಲಿ ನಂಬಿಕೆ [illegible] ಬಹಳ ಕಾಲದಿಂದಲೂ [illegible] ಇದೆಂದು ಅವನು ಹೇಳಿದನು ಒಂದು ಕಥೆಯೂ [illegible] ದಕ್ಷಿಣ ಪ್ರದೇಶದಲ್ಲಿ ಒಬ್ಬ ಹೆಂಗಸು, ಚಿನ್ನ ಮೇಲೆ ಮಗುವಿನ [illegible] ಭಾವಿಯಿಂದ [illegible] ಮಗುವು ತಾನು [illegible] ವೆಂದೂ ಮತ್ತು ಆ ಭಾವಿಯು ಮಂತ್ರಗಾತಿಯದೆಂದೂ ಹೇಳಿದುದನ್ನು ಕೇಳಿ ಭಯಪಟ್ಟು ಬೇಗನೆ ಓಡಿ ಬಾವಿಯನ್ನು ಸೇರಿ ಅಲ್ಲಿ ಕಂಡ ಸುಂದರವತಿಯಾದ ಮಂತ್ರವಾದಿನಿಯಿಂದ ಅವಳು ಮಗುವನ್ನು ಬಿಡಿಸಿಕೊಂಡಳು ಮಂತ್ರವಾದಿನಿ ಆ ಹೆಂಗಸಿನೊಡನೆ ಹೀಗೆ ಮಾತನಾಡಲಾರಂಭಿಸಿದಳು—"ಒಂದು ದಿನ ನಾನು ಸಂಹಾರ ಹೊರಡುವೆನು. ನಾನು ಹತ್ಯಾಗ ಎಲ್ಲಿ ಬಾಗಿಲು ತೆರೆಯುವುದೋ ಅಲ್ಲಿ ಸಾವು ಉಂಟಾಗುವುದು ನಾನು ನಿನ್ನ ಹೀಗೆ [illegible] ಇಷ್ಟಪಡುವುದಿಲ್ಲ ಆದ್ದರಿಂದ ನೀನು ನಿನ್ನ ಬಾಗಿಲಿನ ಮೇಲೆ ಒಂದು ಬಿಳಿ ಕತ್ತರಿ ಗೆರೆಯನ್ನು ಹಾಕು ಆಗ ನಾನು ಆ ಮನೆ ಸ್ಥಳವನ್ನು ತಿಳಿದುಕೊಂಡು ನಾನು ಮುಟ್ಟುವುದಿಲ್ಲ ನಿನ್ನ ಬಂಧುಗಳಿಗೂ [illegible] ಯವರಿಗೂ ಇದನ್ನು ಹೇಳಬಹುದು

ಅವಳಿಗೆ ಅನೇಕ ಬಂಧು ಮಿತ್ರರಿದ್ದುದರಿಂದಲೇ ನೈಜೀರಿಯಾದಲ್ಲೆಲ್ಲಾ ಈ ಗೆರೆಗಳು ಕಂಡುಬರುತ್ತವೆ

ಈ ಕಲ್ಪನಾ ಸಂಚಾರಿಯು ಸಾವಿನಿಂದ ರಕ್ಷಣೆ ಹೊಂದುವ ಬದಲು ಮಲೇರಿಯಾವನ್ನು ಹರಡುವ ಸೊಳ್ಳೆಯು ಪಾಲ್ಯುಡ್ರಿನ್ ಎಂಬ ನಿಜವಾದ ಔಷಧಿಯ ಮುಂಜಾಗ್ರತೆ ತೆಗೆದುಕೊಳ್ಳುವುದು ಒಳ್ಳೆಯ ಉತ್ತರವು

ಇದು ನಿರೋಧಕವಾಗಿ ಬ್ರಿಟಿಷ್ ಕಾಲದಲ್ಲಿ ದಿನವೂ ೦೦ ಗ್ರೇನ್ ಕ್ವಿನೈನ್ ಬಹಳ ಉಪಯುಕ್ತವಾದದ್ದು ಜ್ವರ ಬಂದಾಗ ದಿನವೂ ೧೫–೨೦ ಗ್ರೇನುಗಳಂತೆ ೫–೭ ದಿನಗಳು ಕ್ವಿನೈನ್ ತೆಗೆದುಕೊಳ್ಳಬೇಕು ಇದನ್ನು ಮಾಡಿ ಜನಾಂಗ ಸಂಘದ ಮಲೇರಿಯಾ ಸಮಿತಿಯ [illegible] ನೇ ಅಧಿವೇಶನದಲ್ಲಿ ಸೂಚಿಸಲಾಗಿದೆ. ಮಂತ್ರವಾದಿನಿಯಿಂದಲ್ಲ

ಪ್ರಭುದೇವಾ ಟಾಕೀಸ್

ದಿನವಹಿ 3 ಪ್ರದರ್ಶನಗಳು

17—9—50ನೇ :: ಭಾನುವಾರದಿಂದ

ಘೋಸ್ಟ್ ಆಫ್ ಜೋರೊ

GHOST OF ZORRO

ರಿಜಿ. ನಂ. 798

ಸಾಧ್ವಿ

ಸಂಪುಟ ೯] ಮಂಗಳವಾರ ೧೯-೯-೫೦ [ಸಂಚಿಕೆ ೭೮

ಉ. ಕೊರಿಯನ್ನರಿಂದ ಶಾಂತಿ ಸಂಧಾನವೇ?

ಅಭಾವ ಪ್ರದೇಶದ ಜನರಿಗೆ ಪ್ರಭುಗಳ ಹಣ

ಮೈಸೂರು ೧೮

[illegible]

ವಿದ್ಯಾ ಇಲಾಖೆಯ ...

[illegible]

ಮಹಾರಾಜಾ ಕಾಲೇಜ್ ಸಂಘದ ...

[illegible]

ಗೋವಧೆ ಮತ್ತು ವನಸ್ಪತಿ ವಿರೋಧಕ್ಕಾಗಿ ಮನವಿ

[illegible]

ಕ ಲಾ ಕ್ಷೇ ತ್ರ

[illegible]

ಗುರುಭಕ್ತಶೇಖರ ಶ್ರೀಕಂಠಶಾಸ್ತ್ರಿಗಳವರ ನಿಧನ

ಮೈಸೂರು ೧೮

[illegible]

ಕಾಂಗ್ರೆಸ್ ಅಧ್ಯಕ್ಷರು ...

[illegible]

ಆ. ವಿ. ರಾಮಸ್ವಾಮಿ ನಾಯಕರಿಗೆ ...

[illegible]

ನವರಾತ್ರಿ ದರ್ಬಾರು ಉಂಟು

ಮೈಸೂರು ೧೮

[illegible]

ಮಹಾ ಚುನಾವಣೆ ಬಗ್ಗೆ ನೆಹರೂ ಲಿಖಿತ ಘೋಷಣೆ

[illegible]

ಉತ್ತರ ಕೊರಿಯನ್ನರ ಶಾಂತಿ ಪ್ರಯತ್ನ?

[illegible]

ಉತ್ತರ, ದಕ್ಷಿಣ ಭಾಗಗಳಲ್ಲಿ ಅಮೆರಿಕನ್ನರ ಜಯ

[illegible]

ಕಾರ್ಯಕಾರಿ ಸಮಿತಿಯಲ್ಲಿ ನೆಹರೂ ಇರುವುದಿಲ್ಲ?

[illegible]

ಅಕ್ಕಿ ... ವರ್ತಕರಿಗೆ ಅನುಮತಿ ಇಲ್ಲ

[illegible]

ಮದ್ರಾಸು ವಕೀಲರ ... ಪ್ರಸಂಗ

[illegible]

ಪ್ರೊ. ಹಿರಿಯಣ್ಣನವರ ನಿಧನ

ಮೈಸೂರು ೧೮

[illegible]

ವಿದೇಶಾಂಗ ನೀತಿಗೆ ಅನುಮೋದನೆ ಕಾಂಗ್ರೆಸ್ ಸಮಿತಿ ಒಪ್ಪಿಗೆ

ಸಭೆಯಲ್ಲಿ ನೆಹರೂರವರ ಭಾಷಣ

[ಸ್ವಂತ ವಿಶೇಷ ವರ್ತಮಾನಗಾರರ ಕಂತಿ]

ನಾಸಿಕ್ ೧೮

ಈ ಮಧ್ಯಾಹ್ನ ಕಾಂಗ್ರೆಸ್ ಅಧಿವೇಶನದ ವಿಷಯ ನಿಯಾಮಕ ಸಮಿತಿ ಸಭೆಯು ಪ್ರಾರಂಭವಾಯಿತು. ಅಧ್ಯಕ್ಷರಾಗಿದ್ದ ಡಾ|| ಪಟ್ಟಾಭಿ ಸೀತಾರಾಮಯ್ಯನವರು ಹಿಂದಿನ ಎ ಐ ಸಿ ಸಿ ಸಭೆಯ ವರದಿ ಭಾಷಣವನ್ನು ಮಾಡಿದ ನಂತರ ಹೊಸ ಅಧ್ಯಕ್ಷರಾದ ಬಾಬು ಪುರುಷೋತ್ತಮದಾಸ್ ಟಂಡನ್‌ರವರು ಭಾಷಣ ಮಾಡಿ ಕಾಂಗ್ರೆಸ್ಸಿನ ಪುನರುಜ್ಜೀವನದ ಬಗ್ಗೆ ತಮ್ಮ ಉದ್ದೇಶಗಳನ್ನು ತಿಳಿಸಿ, ಅದು ಶಿಸ್ತಿನ ಸಂಸ್ಥೆಯಿಂದ ಕಾರ್ಯಗಳಲ್ಲಿ ತೊಡಗಬೇಕಾದರೆ ಅವಶ್ಯಕವಾಗಿರುವ ಸುಧಾರಣೆಗಳನ್ನು ಕುರಿತು ವಿವರಿಸಿ ಹೇಳಿದರು. ಅಸ್ಸಾಮಿನ ಭೂಕಂಪ ಮುಂತಾದ ಅಪಘಾತಗಳಿಗಾಗಿ ಸಂತಾಪ ಸೂಚಿಸಿ ನೊಂದವರ ಪರಿಹಾರದ ಬಗ್ಗೆ ನಿರ್ಣಯವನ್ನು ಮಾಡಲಾಯಿತು. ದಿವಂಗತ ಗೋಪೀನಾಥ್ ಬಾರ್ದೊಲಾಯ್, ಸರೋಜಿನಿ ನಾಯ್ಡು, ಶರಶ್ಚಂದ್ರ ಬೋಸ್, ಮಹಮದ್ ಅಲಿ ಮುಂತಾದವರ ನಿಧನದ ಬಗ್ಗೆ ಸಂತಾಪವನ್ನು ಸೂಚಿಸಲಾಯಿತು.

ಪಂಡಿತ ಗೋವಿಂದವಲ್ಲಭಪಂತರು ಭಾರತ ಸರ್ಕಾರದ ವಿದೇಶಾಂಗ ನೀತಿಗೆ ಕಾಂಗ್ರೆಸ್ಸಿನ ಬೆಂಬಲವನ್ನು ನೀಡುವ ನಿರ್ಣಯವನ್ನು ಮುಂದಿಟ್ಟರು. ಶ್ರೀ|| ರಂಗಾರವರು ಅದನ್ನು ಸಮರ್ಥಿಸಿದರು. ಪ್ರಧಾನಿ ನೆಹರೂರವರು ೧ ಗಂಟೆ ಕಾಲ ಭಾಷಣ ಮಾಡಿ, ಸರ್ಕಾರದ ವಿದೇಶಾಂಗ ನೀತಿಯನ್ನು ಸ್ಪಷ್ಟಪಡಿಸಿದರು. ನಿರ್ಣಯವು ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕಾರವಾಯಿತು.

ಡಾ|| ಪಟ್ಟಾಭಿ ಸೀತಾರಾಮಯ್ಯನವರು ಭಾರತದಲ್ಲಿರುವ ವಿದೇಶೀ ಸ್ವತ್ತುಗಳನ್ನು ತಪ್ಪಿಸಿ, ಆ ಪ್ರದೇಶಗಳನ್ನು ಭಾರತಕ್ಕೆ ಈ ಕೂಡಲೆ ಒಪ್ಪಿಸಬೇಕೆಂಬ ನಿರ್ಣಯವನ್ನು ಮುಂದಿಟ್ಟರು. ಪಶ್ಚಿಮ ಬಂಗಾಳದ ಬಿ ಸಿ ಘೋಷರವರು ಸಮರ್ಥಿಸಿದರು. ನಿರ್ಣಯವು ಅಂಗೀಕೃತವಾಯಿತು.

ಕಾಂಗ್ರೆಸ್ಸಿನ ಅಂಗರಚನೆಯ ಬಗ್ಗೆ ತಿದ್ದುಪಡಿಯ ನಿರ್ಣಯವು ಶ್ರೀ ಎಸ್ ಕೆ ಪಾಟೀಲರಿಂದ ಸೂಚಿಸಲ್ಪಟ್ಟಿತು. ಗೋಪಾಲ ಭಾರ್ಗವರು ಸಮರ್ಥಿಸಿದರು. ಸಭೆಯು ಆ ದಿನ ಮಧ್ಯಾಹ್ನಕ್ಕೆ ಮುಂದಕ್ಕೆ ಹಾಕಲ್ಪಟ್ಟಿತು.

ನಾಸಿಕದಲ್ಲಿ ಮಳೆಯಿಂದ ತೊಂದರೆ

ನಾಸಿಕದಲ್ಲಿ ಕಳೆದ ಎರಡು ದಿನಗಳಿಂದಲೂ ಮಳೆ ಬರುತ್ತಿರುವುದರಿಂದ ಕಾಂಗ್ರೆಸ್ಸಿನ ಪ್ರಧಾನ ಚಪ್ಪರ ಮತ್ತು ಶಿಬಿರಗಳ ಬಿಡಾರಗಳನ್ನು ಕಟ್ಟಲು ಬಹಳ ಅಡಚಣೆಯಾಗಿ ಕೆಲಸಗಳು ಅರ್ಧ [illegible] ವೆಂದೂ, ಆದುದರಿಂದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯನ್ನು ಪಂಡಿತ ನೆಹರೂರವರ ಬಿಡಾರವಾದ ರಾಮಬಾಗಿನಲ್ಲಿ ಏರ್ಪಡಿಸಲಾಗಿತ್ತೆಂದೂ ವರದಿಯಾಗಿದೆ.

ಲಾಹೋರಿನಲ್ಲಿ ಮತ್ತೊಂದು ಪ್ರವಾಹದ ಭೀತಿ

ರಾವಿ ನದಿ ಬಳಿ ಇರುವ ಲಾಹೋರಿನ ಕೆಳ ಭಾಗದ ಪ್ರದೇಶಗಳಲ್ಲಿರುವ ಸಹಸ್ರಗಟ್ಟಲೆ ಜನರು ಆತ್ಮರಕ್ಷಣೆಗಾಗಿ ಸುರಕ್ಷಿತವಾದ ಪ್ರದೇಶಗಳಿಗೆ ಓಡುತ್ತಿದ್ದಾರೆ. ಆ ನಗರಕ್ಕೆ ಪುನಃ ಪ್ರವಾಹವು ನುಗ್ಗಬಹುದೆಂದು ಗಾಬರಿ ಉಂಟಾಗಿದೆ ಎಂದೂ [illegible] ನಗರದಲ್ಲಿ [illegible] ತ್ತಿದೆ.

ಬಯಲಿನಲ್ಲೀ ನ್ಯಾಯಸ್ಥಾನಗಳು

ಕಾಶ್ಮೀರ ಮತ್ತು ಜಮ್ಮುವಿನಲ್ಲಿ ಈಚೆಗೆ ಸಂಭವಿಸಿದ ಪ್ರವಾಹದ ಬಂದುದರಿಂದ ನ್ಯಾಯಾಲಯಗಳು ಮತ್ತು ಕಛೇರಿಗಳನ್ನು ನಡೆಸಲು ಸ್ಥಳಾಭಾವವಾಗಿ ಬಹಳ ತೊಂದರೆಯಾಗಿದೆಯೆಂದೂ ಜಮ್ಮುವಿನ ಹಲವು ಹಳ್ಳಿಗಳ ಬಯಲು ಪ್ರದೇಶದಲ್ಲಿ ಮರಗಳ ಕೆಳಗೆ ನ್ಯಾಯಸ್ಥಾನಗಳನ್ನು ನಡೆಸಲಾಗುತ್ತಿದೆಯೆಂದೂ ವರದಿಯಾಗಿದೆ.

ಅಸ್ಸಾಮಿನಲ್ಲಿ ತಿಂಗಳುಗಟ್ಟಲೆ ಭೂಕಂಪವಾಗುವುದು

ಅಸ್ಸಾಮಿನಲ್ಲಿ ಇನ್ನೂ ತಿಂಗಳುಗಟ್ಟಲೆ ಭೂಕಂಪವಾಗುತ್ತಿರುವುದೆಂದು [illegible] ಭಾರತದ ವೇಧಶಾಲೆಗಳ ಡೈರೆಕ್ಟರ್ ಜನರಲ್ಲಾದ ಡಾ. ವಿ. ವಿ. ಸೋಹೋನಿಯವರು ತಿಳಿಸುತ್ತಾರೆ.

ಫ್ರೆಂಚ್ ಯುದ್ಧನೌಕೆಯು ಸಿಡಿಯಿತು

ನೌಕಾ ಪ್ರದರ್ಶನದಲ್ಲಿ ಭಾಗವಹಿಸಲು ತೆರಳುತ್ತಿದ್ದ ಫ್ರೆಂಚ್ ಯುದ್ಧನೌಕೆಯೊಂದು ಬ್ರಿಟನ್ ಬಳಿ ಮ್ಯಾಗ್ನೆಟಿಕ್ ಮೈನಿಗೆ ತಗುಲಿ ಆಸ್ಫೋಟಿಸಿತು. ಇದರ ಪರಿಣಾಮವಾಗಿ ಅದರಲ್ಲಿದ್ದ ೬೪ ಜನ ನಾವಿಕರು [illegible].

ಹಿಮಾಲಯಾರೋಹಣ

ಇಂಗ್ಲೆಂಡಿನ ಕೇಂಬ್ರಿಜ್ ವಿಶ್ವ ವಿದ್ಯಾನಿಲಯದ ಮೂವರು ಮತ್ತು ಅವರೊಡನೆ ಒಬ್ಬ ಸ್ವಿಟ್ಸರ್‌ಲೆಂಡ್ ಪರ್ವತಾರೋಹಿಗಳು ಹಿಮಾಲಯದ ೨೧,೬೦೦ ಅಡಿ ಎತ್ತರದ [illegible] ಶಿಖರವನ್ನು ಹತ್ತಿ [illegible] ಎಂದೂ ಹೇಳಲಾಗಿದೆ.

ಕಾಂಗ್ರೆಸ್ಸಿನಲ್ಲಿ ಒಡಕಿಲ್ಲವೆಂದು ಬಾಬು ಟಂಡನ್

ಟಂಡನರವರು ಅಧ್ಯಕ್ಷರಾದ ಮೇಲೆ ಕಾಂಗ್ರೆಸ್ಸಿನಲ್ಲಿ ಒಡಕುಂಟಾಗಿಲ್ಲವೆಂದೂ ಮುಂದೆಯೂ ಒಡಕು ಉಂಟಾಗುವುದಿಲ್ಲವೆಂದೂ ಪ್ರಧಾನ ಕಾರ್ಯದರ್ಶಿ ಕಲಾವೆಂಕಟರಾಯರು ತಿಳಿಸಿರುತ್ತಾರೆ.

ಜಾನುವಾರುಗಳ ಕೃತಕ ರೀತಿಯ ಸಂತಾನೋತ್ಪತ್ತಿ

ಜಾನುವಾರುಗಳಿಗೆ ಕೃತಕ ರೀತಿಯಲ್ಲಿ ಸಂತಾನೋತ್ಪತ್ತಿಯನ್ನು ಮಾಡಲು ಭಾರತದಲ್ಲಿ [illegible] ಕೇಂದ್ರಗಳನ್ನು [illegible] ವಾಗುವುದೆಂದೂ, [illegible] ಒಂದು [illegible] ಯಾಗುವುದೆಂದೂ, [illegible] ೫೦ ಸಾವಿರ ರೂ. [illegible] ವುದೆಂದೂ ಹೇಳಲಾಗಿದೆ.

ಭಾರತಕ್ಕೆ ೪,೨೭,೦೦೦ ಟನ್ ಮೈದಾ ಹಿಟ್ಟು

ಕಳೆದ ಮೂರು ತಿಂಗಳಿಂದ ಭಾರತವು ಅನೇಕ ಕಠಿಣ ಪರಿಸ್ಥಿತಿಗಳನ್ನು ಎದುರಿಸಿ ಆಹಾರ ಸಮಸ್ಯೆಯನ್ನು ಯಶಸ್ವಿಯಾಗಿ ಪರಿಹರಿಸಿರುವರೆಂದೂ ಅಮೇರಿಕಾ ಸರ್ಕಾರದವರು ಭಾರತಕ್ಕೆ ೪,೨೭,೦೦೦ ಟನ್ ಮೈದಾ ಹಿಟ್ಟನ್ನು ಕಳುಹಿಸುತ್ತಿರುವುದರಲ್ಲಿ ಮಾರ್ಗದಲ್ಲಿರುವುದೆಂದೂ, ಇನ್ನು ಮುಂದೆ ಆಹಾರಾಭಾವದ ಭಯವಿಲ್ಲವೆಂದೂ ಕೇಂದ್ರ ಸರ್ಕಾರದ ಆಹಾರ ಮಂತ್ರಿ ಶ್ರೀ ಕೆ ಎಂ ಮುನ್ಷಿಯವರು ಬೊಂಬಾಯಿನ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು.

ಫೋಟೋ ಕೊಳ್ಳಲು ಹೋದ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ

ಕಾಶಿ ವಿಶ್ವವಿದ್ಯಾಲಯದ ಒಬ್ಬ ವಿದ್ಯಾರ್ಥಿನಿಯು ಕಳೆದ ಗುರುವಾರ ಅಲ್ಲಿನ ಒಂದು ಫೋಟೋ ಸ್ಟುಡಿಯೋವಿನಲ್ಲಿ ಹಲವು ಚಿತ್ರಗಳನ್ನು ತೆಗೆದುಕೊಳ್ಳಲು ಹೋದಾಗ ಸ್ಟುಡಿಯೋದವನೊಬ್ಬನು ಆಕೆಯ ಮಾನಭಂಗ ಮಾಡಲು ಪ್ರಯತ್ನಿಸಿದನೆಂದೂ, ಆಗ ಆಕೆಯು ಕಿರಿಚಿಕೊಳ್ಳಲು ಆ ಶಬ್ದವನ್ನು ಕೇಳಿ ರಸ್ತೆಯಲ್ಲಿ ಹೋಗುತ್ತಿದ್ದ ವಿದ್ಯಾರ್ಥಿಗಳು ಅಲ್ಲಿಗೆ ನುಗ್ಗಿ ಸ್ಟುಡಿಯೋವಿಗೆ ಬೆಂಕಿ ಹಚ್ಚಿದರೆಂದೂ ವರದಿಯಾಗಿದೆ. ವಿದ್ಯಾರ್ಥಿನಿಯು ಹೇಗೋ ತಪ್ಪಿಸಿಕೊಂಡಳೆಂದೂ ಅಗ್ನಿ ಶಮನ ದಳದವರು ಬೆಂಕಿಯನ್ನು ಆರಿಸಿದರೆಂದೂ ವರದಿಯಾಗಿದೆ.

ಮೃತ ಸ್ತ್ರೀಯ ಅಂಗ ಬದುಕಿದ್ದವಳಿಗೆ

ವಿಚಿತ್ರ ಜನನಾಂಗದ ಒಂದು ಕೆಟ್ಟ ವ್ಯಾಧಿಯಿಂದ ನರಳುತ್ತಿದ್ದ ೪೯ ವರ್ಷದ ರೋಸ್ ಟೇಲರ್ ಎಂಬಾಕೆಯ ಕೆಟ್ಟುಹೋದ ಅಂಗವನ್ನು ಶಸ್ತ್ರ ಚಿಕಿತ್ಸೆಯಿಂದ ತೆಗೆದು ಅಮೇರಿಕಾದಲ್ಲಿ ೧೦ ನಿಮಿಷ ಮುಂಚೆ ಮೃತಳಾದ ಸ್ತ್ರೀಯೊಬ್ಬಳ ಅಂಗವನ್ನು, ಚಿಕಾಗೋ ಆಸ್ಪತ್ರೆಯಲ್ಲಿ ಸೇರಿಸಲಾಯಿತು. ಈ ರೀತಿಯ ಶಸ್ತ್ರ ಚಿಕಿತ್ಸೆಯು ಇದೇ ಮೊದಲನೆಯದೆಂದು ಹೇಳಲಾಗಿದೆ.

ಬೆಂಗಳೂರಿನಲ್ಲಿ ಕೇಂದ್ರ ಮಂತ್ರಿಗಳು

ಕೇಂದ್ರ ಕೈಗಾರಿಕಾ ಮಂತ್ರಿ ಹರೇಕೃಷ್ಣ ಮಹತಾಬ್ ಮತ್ತು ಭಾರತ ಸರ್ಕಾರದ ಅಧಿಕಾರಿಗಳಾದ ಎ ಆರ್ [illegible], ಜೆ ಎಂ ಪಟೇಲ್, ಎಸ್ ಎ ವೆಂಕಟರಾಮನ್ ಮತ್ತು ಕೈಗಾರಿಕೋದ್ಯಮಿ [illegible] ರವರು ಇಲ್ಲಿಗೆ ಆಗಮಿಸಿ ಹಿಂದೂಸ್ತಾನ್ ವಿಮಾನ ಕಾರ್ಖಾನೆಯ ಸಮಿತಿಯ ಸಭೆಯಲ್ಲಿ ಭಾಗವಹಿಸಿದ್ದರು.

ರಾಜಕಮಲ್, ಮೈಸೂರು.

15-9-50 ರಿಂದ

ಶಾಂತಿ ಪ್ರಸನ್ನ

(ಹಿಂದಿ)

ಶಾಸ್ತ್ರಿ, ಗೀತಾ ನಿಜಾಮಿ, [illegible], [illegible], ಗೋಪ್, ಪೃಥ್ವಿರಾಜ್, [illegible]

ಅಮೇರಿಕಕ್ಕೆ ಚಿಯಾಂಗರ ಪ್ರಾರ್ಥನೆ

ರಷ್ಯದ ಕೈಗೊಂಬೆಯಾದ ಪೀಕಿಂಗ್ ಸರ್ಕಾರವನ್ನು ಸೋಲಿಸಲು ಉತ್ತರ ಮತ್ತು ದಕ್ಷಿಣ ಅಮೇರಿಕಗಳು ತಮಗೆ ಸಹಾಯ ಮಾಡಬೇಕೆಂದು ಚಿಯಾಂಗ ಕೈಷೇಕರು ಪ್ರಾರ್ಥನೆ ಮಾಡಿರುತ್ತಾರೆ. ತಮ್ಮ ದೇಶದ ಅಸಂಖ್ಯಾತ ಜನರು ರಷ್ಯನರ ಗುಲಾಮರಾಗಿರಲಿಚ್ಛಿಸದೆ ಬಂದ [illegible] ಪ್ರಭುತ್ವದ ತುಳಿತಕ್ಕೆ ಸಿಕ್ಕಿರುವರೆಂದೂ ಅವರನ್ನು ಸ್ವತಂತ್ರರನ್ನಾಗಿ ಮಾಡತಕ್ಕದ್ದು ಅವಶ್ಯಕವೆಂದೂ ಅವರು ಹೇಳಿದರು.

ವಿಶ್ವಸಂಸ್ಥೆಗೆ ಈಜಿಪ್ಟಿನ ಮೇಲೆ ಇಸ್ರೇಲಿನ ದೂರು

ಈಜಿಪ್ಟ್ ಮತ್ತು ಜೋರ್ಡನ್ ದೇಶಗಳು ಇಸ್ರೇಲ್ ರಾಜ್ಯದ ಮೇಲೆ ಆಕ್ರಮಣ ನಡೆಸಲು ಬೆದರಿಸುತ್ತಿರುವುದಾಗಿ ವಿಶ್ವಸಂಸ್ಥೆಗೆ ಇಸ್ರೇಲ್ ಸರ್ಕಾರವು ದೂರು ಕೊಟ್ಟಿದೆ.

ಬಿಲ್ಡಿಂಗ್ ಡಿವಿಜನ್ನಿನಲ್ಲಿ ಸ್ವೇಚ್ಛಾ ವರ್ತನೆಯೇ?

ರಾಜಧಾನಿಯ ಮೆಡಿಕಲ್ ಕಾಲೇಜಿನಲ್ಲಿ ಕಟ್ಟುತ್ತಿರುವ ಹೊಸ ಕಟ್ಟಡದ ಬಗ್ಗೆ ಇರುವ ನ್ಯೂನತೆಗಳನ್ನು ಎಷ್ಟೋ ವೇಳೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಆದಾಗ್ಯೂ ಅವುಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗುತ್ತಿಲ್ಲ. ಹತ್ತಾರು ವರ್ಷಗಳ ಪರಿಶ್ರಮಪಟ್ಟು ಕೆಲಸ ಮಾಡಿರುವ ಬಡ ಮೇಸ್ತ್ರಿಗಳನ್ನು ಕೆಲಸದಿಂದ ತೆಗೆಯಲಾಗಿದೆ. ಈ ಬಗ್ಗೆ ಯಾವ ವಿಧವಾದ ವಿಚಾರಣೆಯೂ ಆಗಿಲ್ಲ. ಈ ವಿಚಾರವನ್ನು ಮುಖ್ಯ ಮಂತ್ರಿ, [illegible] ಇಲಾಖೆ ಮಂತ್ರಿ, ಲಂಚ ನಿರೋಧ ಸಮಿತಿ ಮತ್ತು ಇತರ ಅಧಿಕಾರಿಗಳಿಗೆ ಅರಿಕೆ ಮಾಡಿಕೊಳ್ಳಲಾಗಿದೆ. ಆದರೂ ಏನೂ ಪ್ರಯೋಜನವಾಗಿಲ್ಲ. ಇಲ್ಲಿ ನಡೆಯುವ ನ್ಯೂನತೆಗಳನ್ನು ತೋರಿಸಿಕೊಡಲು ನಾವು ಸಿದ್ಧರಾಗಿದ್ದೇವೆ. ಈ ಬಗ್ಗೆ ಸರ್ಕಾರದವರ ಶೀಘ್ರ ವಿಚಾರಣೆ ನಡೆಸಬೇಕು—ಎಂದು ನೊಂದವರೊಬ್ಬರು ಕೋರಿರುತ್ತಾರೆ.

ರಮಣಿ ಹಲ್ಲುಪುಡಿ

ಅಮೂಲ್ಯವಾದ ಮೂಲಿಕೆಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿರುವ ಮೇಲ್ಕಂಡ ಹಲ್ಲುಪುಡಿಯಿಂದ ಅನೇಕರು ಗುಣ ಹೊಂದಿದ್ದಾರೆ. ಬೆಲೆ 0-1-6 ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್ ಕೊಡಲಾಗುವುದು

ಬೇಕಾದವರು [illegible] ನಗರ [illegible] ಯಲ್ಲಿರುವ ಶ್ರೀ ಸಿ ಎಸ್ ಸುಬ್ರಹ್ಮಣ್ಯಂರವರ ಅಂಗಡಿಯಲ್ಲಿ ಹಲ್ಲುಪುಡಿಯನ್ನು ಪಡೆಯಬಹುದು

ರಮಣಿ ಟ್ರೇಡಿಂಗ್ ಕಂಪೆನಿ,
[illegible], ಕೃಷ್ಣಮೂರ್ತಿಪುರಂ,
ಮೈಸೂರು

Edited printed and published by A R Nagarajan at Sadhvi Press D Subbiah Road, Mysore

ರೆಜಿ ನಂ 792 [illegible] ಈ ಪತ್ರಿಕೆ ೬ ಪುಟ

ಸಾಧ್ವಿ

ಸಂಪುಟ ೯] ಬುಧವಾರ ೨೦-೯-೫೦ [ಸಂಚಿಕೆ ೪೯

ಮೈ॥ ಸರ್ಕಾರದ ಮೇಲೆ ಲೆಕ್ಚರರ ದಾವಾ

ಭಾರತ ಪಾಕಿಸ್ತಾನಗಳ ಬಾಂಧವ್ಯದ ನಿರ್ಣಯ

ವಿಷಯ ನಿಯಾಮಕ ಸಮಿತಿಯ ಒಪ್ಪಿಗೆ

(ನಮ್ಮ ವಿಶೇಷ ಸುದ್ದಿಗಾರರಿಂದ ತಂತಿ)

ನಾಸಿಕ್ ೧೯

ಈ ಮಧ್ಯಾಹ್ನ ಇಲ್ಲಿನ ಗಾಂಧಿ ನಗರದಲ್ಲಿ ಕಾಂಗ್ರೆಸ್ ಅಧಿವೇಶನದ ವಿಷಯ ನಿಯಾಮಕ ಸಮಿತಿಯ ಸಭೆಯು ಪುರುಷೋತ್ತಮ ದಾಸ್ ಟಂಡನರವರ ಅಧ್ಯಕ್ಷತೆಯಲ್ಲಿ ಸೇರಿತು. ಕಾಂಗ್ರೆಸ್ಸಿನ ಸಂಘಟನೆಯ ಬಗ್ಗೆ ತಿದ್ದುಪಡಿ ಸೂಚಿಸುವ ನಿರ್ಣಯವನ್ನು ಶ್ರೀ ಎಸ್ ಕೆ ಪಾಟೀಲರು ಮಂಡಿಸಿದರು. ನಿರ್ಣಯಕ್ಕೆ ಹಲವಾರು ತಿದ್ದುಪಡಿಗಳು ಬಂದು ಅವುಗಳನ್ನು ವಾಪಸ್ಸು ತೆಗೆದುಕೊಳ್ಳಲಾಯಿತು.

ಶ್ರೀ ತಿವಾರಿಯವರು ಪ್ರಾತಿನಿಧಿಕ ಕಾರ್ಯಕಾರಿ ಸಮಿತಿಗೆ ಕಾಂಗ್ರೆಸ್ಸಿನೊಳಗಿನ ಪ್ರಾಂತಗಳ ಬಗ್ಗೆ ಅಧಿಕಾರ ಕೊಡುವುದರಿಂದ ಹಲವರಿಗೆ ಅನ್ಯಾಯವಾಗುವುದೆಂದು ತಿಳಿಸಿದರು. ಆದರೆ ನಿರ್ಣಯವು ಸಭೆಯ ಅಂಗೀಕಾರವನ್ನು ಪಡೆಯಿತು.

ನಂತರ ಪಂಡಿತ ನೆಹರೂರವರು ಭಾರತ ಮತ್ತು ಪಾಕಿಸ್ತಾನಗಳ ಬಾಂಧವ್ಯದ ಬಗ್ಗೆ ನಿರ್ಣಯವನ್ನು ಮಂಡಿಸಿದರು. ಈ ಸಮಸ್ಯೆಯನ್ನು ವಿಶಾಲ ಮನೋಭಾವದಿಂದ ಕಾಣಬೇಕೆಂದು ಅವರು ಹೇಳಿದರು. ಪ್ರಫುಲ್ಲ ಚಂದ್ರಘೋಷರು ನಿರ್ಣಯವನ್ನು ಸಮರ್ಥನೆ ಮಾಡಿದರು.

ಬೆಂಗಳೂರು ದಂಡು ಪ್ರದೇಶದ ಶ್ರೀ ಹೆಚ್. ವೀರಣ್ಣಯ್ಯನವರು ಒಂದು ತಿದ್ದುಪಡಿಯನ್ನು ಸೂಚಿಸಿದರು. ಅದರ ಪರವಾಗಿ ಅವರೊಬ್ಬರೇ ಓಟು ಮಾತ್ರ ಸೇರಿತು.

ಗಣಪತಿ ಮಂಗಳಾರತಿ ಕಾರ್ಯಕ್ರಮಗಳು

ರಾಜಧಾನಿಯ ಶ್ರೀ ವರಲಕ್ಷ್ಮೀ ವಿದ್ಯಾಮಂದಿರದವರು ತಮ್ಮ ಕೃಷ್ಣಮೂರ್ತಿಪುರದ ಶಾಲೆಯಲ್ಲಿ ಶ್ರೀ ಗಣಪತಿ ಉತ್ಸವದ ಅಂಗವಾಗಿ ಈ ದಿನ ಸಂಜೆ ವಿ॥ ಎಸ್ ಸುಬ್ಬಕೃಷ್ಣಯ್ಯನವರ ಹಾಡುಗಾರಿಕೆಯನ್ನು ಪಿ॥ ಎಚ್ ವಿ. ಕೃಷ್ಣರಾಯರ ಪಿಟೀಲು ಮತ್ತು ವಿ॥ ಬಾಬು ಶ್ರೀಧರರ ಮೃದಂಗದೊಡನೆ ಏರ್ಪಡಿಸಿದ್ದಾರೆ.

ಚಾಮರಾಜಪೇಟೆಯಲ್ಲಿರುವ ಕಾಂಚೀನಗರ ಶ್ರೀರಾಮ ಮಂದಿರದವರು ಈ ಸಂಜೆ ೬ ಘಂಟೆಗೆ ಶ್ರೀ ವಿಶ್ವೇಶ್ವರ ಸ್ವಾಮಿಗಳವರನ್ನು ಅಲಂಕೃತವಾದ ರಥದಲ್ಲಿ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸುತ್ತಾರೆ.

ವಿಶ್ವೇಶ್ವರಪುರದಲ್ಲಿರುವ ಬಾಲಕರ ಸಂಸ್ಕೃತಿ ಸಂಘದ ಆಶ್ರಯದಲ್ಲಿ ಗಣಪತಿ ಮಂಗಳಾರತಿ ಪ್ರಯುಕ್ತ ಈ ಸಂಜೆ ೬-೩೦ಕ್ಕೆ ಆರ್ ಪಿ. ಸಂಗೀತ ಪಕ್ಷಿ ಟಿ ಚೌಡಯ್ಯನವರ ಪಿಟೀಲು ಮತ್ತು ಆರ್ ಪಿ. ಸಂಗೀತ ರತ್ನ ಟಿ ಎಂ ಪುಟ್ಟಸ್ವಾಮಯ್ಯನವರ ಮೃದಂಗವು ನಡೆಯುವುದು.

ರಾಜಧಾನಿಯ ಅನಾಥಾಲಯದ ಶಾಲೆಯ ಮಂದಿರದಲ್ಲಿ ನಾಳೆ ಸಂಜೆ ೬ ಗಂಟೆಗೆ ಗಣಪತಿ ಮಂಗಳಾರತಿ ಪ್ರಯುಕ್ತ ವಿ॥ ಜೆಚ್ ಟಿ ರಾಮಸ್ವಾಮಯ್ಯನವರ ಹಾಡುಗಾರಿಕೆಯು ಆರ್॥ ವಿ॥ ಕೆ. ಎನ್ ಶ್ರೀನಿವಾಸಮೂರ್ತಿಯವರ ಪಿಟೀಲು ಮತ್ತು ವಿ॥ ಹೆಚ್ ಟಿ ಶಾಗಣ್ಣನವರ ಮೃದಂಗದೊಡನೆ ಏರ್ಪಾಡಾಗಿದೆ. ಸಾರ್ವಜನಿಕರಿಗೆ ಸ್ವಾಗತವಿದೆ.

ಅಸ್ಸಾಂ ಭೂಕಂಪ ನಿಧಿಗೆ ಸಹಾಯ ಮಾಡಿದವರು

ಮೈಸೂರು ೨೦

ಅಸ್ಸಾಮಿನ ಭೂಕಂಪ ಪರಿಹಾರ ನಿಧಿಗೆ ಕೆಳಗಿನಂತೆ ಮಹನೀಯರು ಈ ರೀತಿಯಾಗಿ ಧನ ಸಹಾಯ ಮಾಡಿರುತ್ತಾರೆಂದು ಪೌರಸಭಾಧ್ಯಕ್ಷ ಶ್ರೀ ಚೌಡಯ್ಯನವರು ತಿಳಿಸಿರುತ್ತಾರೆ.

ಶ್ರೀಗಳಾದ ದೇವರಾಜ ಅರಸ್, ಭವಾನಿ ಪ್ರಸಾದ್ ತಿಂಗಳ ಶೆಟ್ಟಿ, ವ್ಯಾಪಾರಿ, ಕೆ ಎಸ್ ಸತ್ಯನಾರಾಯಣರಾವ್, ಬ್ರಹ್ಮಪ್ಪ ಶಿವಪ್ಪನವರು, ವಿ ಡಿ ರಾಮಸ್ವಾಮಿ ವಕೀಲರು, ವಿ ಪಂಪಾಪತಿ ರಾವ್, ವೆಂಕಟೇಶ ವರ್ಮಾ ಚೌಡಯ್ಯನವರುಗಳು ತಲಾ ೧೦೦ ರೂ. ದೊಡ್ಡಪೇಟೆಯ ಎಂ ಶ್ರೀನಿವಾಸಾಚಾರ್ಯರು ೧೧ ರೂ., ಎಚ್ ನಿಜಲಿಂಗಪ್ಪನವರ ಹೋಟೆಲಿನ ಮಾಲೀಕರು ಕೆ ಟಿ. ಶ್ರೀನಿವಾಸಾಚಾರ್ಯರು, ಅಗ್ರಹಾರದ ಎಸ್ ರಂಗನಾಥಯ್ಯ, ದೊಡ್ಡಪೇಟೆಯ ಜಯಲಕ್ಷ್ಮಿ ಜವಳಿ ಅಂಗಡಿ ಮತ್ತು ತ್ರಿವೇಣಿ ಜವಳಿ ಮಾರ್ಟ್‌ಗಳ ಮಾಲೀಕರು ತಲಾ ೫೦ ರೂ. ದೊಡ್ಡಪೇಟೆಯ ಹೊಸ ಅಂಗಡಿಯ ಮಾಲೀಕರು ಮತ್ತು ಪುರಜನರು ೨೦ ರೂ.

ಪರ್ಮಿಟ್ ಅರ್ಜಿ ಮಾಡುವವರಿಗೆ ಎಚ್ಚರಿಕೆ

ಪರ್ಮಿಟ್ ಅಥವಾ ಪತ್ರವನ್ನು ಪಡೆಯುವುದಕ್ಕಾಗಿ ಕಂಟ್ರೋಲರ್, ಡಿಪ್ಯುಟಿ ಕಮಿಷನರ್ ಮುಂತಾದ ಅಧಿಕಾರಿಗಳ ಅರ್ಜಿಯನ್ನು ತೋರಿಸುವುದಾಗಿ ಹೇಳಿಕೊಂಡು ಬರುವ ಮಧ್ಯವರ್ತಿಗಳನ್ನು ನಂಬಬಾರದೆಂದು ಸರ್ಕಾರದ ಗಮನಕ್ಕೆ ಬಂದಿದೆಯೆಂದೂ ಅಂಥವರ ಮುಖಾಂತರ ಪರ್ಮಿಟ್, ಲೈಸೆನ್ಸು ಅಥವಾ ಅರ್ಜಿ ಮಾಡುವುದು, ಅವುಗಳಲ್ಲಿ ಭಾಗವಹಿಸುವುದನ್ನು ನಿಲ್ಲಿಸಬೇಕೆಂದು ಸರ್ಕಾರ ಪ್ರಕಟಣೆಯು ತಿಳಿಸಿದೆ.

ಕಾಂಗ್ರೆಸ್ ಅಧ್ಯಕ್ಷರಿಗೆ ಪೌರಸಭೆಯ ಸ್ವಾಗತ

ವಿ ಸು ತಂತಿ] ನಾಸಿಕ್ ೧೯

ಈ ದಿನ ಇಲ್ಲಿನ ಪೌರಸಭೆಯು ಕಾಂಗ್ರೆಸ್ ಅಧ್ಯಕ್ಷ ಪುರುಷೋತ್ತಮದಾಸ್ ಟಂಡನರವರಿಗೆ ಸ್ವಾಗತ ಬಯಸುವ ಸಮಾರಂಭವನ್ನು ಏರ್ಪಡಿಸಿತ್ತು.

ಕಾಂಗ್ರೆಸ್ ಅಧ್ಯಕ್ಷರಿಂದ ರಾಷ್ಟ್ರಧ್ವಜಾರೋಹಣ

ದೇಶದ ಜನತೆಗೆ ಟಂಡನರವರ ಹಿತೋಕ್ತಿ

ವಿ ಸು ತಂತಿ] ನಾಸಿಕ್ ೨೦

ಈ ಬೆಳಿಗ್ಗೆ ಕಾಂಗ್ರೆಸ್ ಅಧ್ಯಕ್ಷ ಪುರುಷೋತ್ತಮ ದಾಸ್ ಟಂಡನರವರು ರಾಷ್ಟ್ರಧ್ವಜವನ್ನು ಹಾರಿಸಿದರು. ಧ್ವಜದ ನಂತರ ಮಹಾತ್ಮ ಗಾಂಧಿಯವರ ಧ್ಯೇಯಗಳನ್ನು ಜನರು ಮನದಲ್ಲಿಡಬೇಕೆಂದು ಅವರು ತಿಳಿಸಿ, ಆಹಾರ ಮತ್ತು ಇತರ ವಿಷಯಗಳಿಗೆ ದ್ವಿತೀಯ ಸ್ಥಾನ ಕೊಡಬೇಕೆಂದು ಕೋರಿ ಜನರು ರಾಜಕೀಯ ಮತ್ತು ವೈಯಕ್ತಿಕ ಜೀವನದಲ್ಲಿ ತಮ್ಮ ನೈತಿಕ ಮಟ್ಟವನ್ನು ಹೆಚ್ಚಿಸಿಕೊಳ್ಳಬೇಕೆಂದು ಪ್ರಾರ್ಥಿಸಿದರು. ನೈತಿಕ ಜೀವನಕ್ಕೆ ಪ್ರಥಮ ಸ್ಥಾನವಿದೆಯೆಂದು ಅವರು ತಿಳಿಸಿದರು.

ವಿಷಯ ನಿಯಾಮಕ ಸಮಿತಿಯಲ್ಲಿ ನಿರಾಶ್ರಿತ ಜನರ ಸಮಸ್ಯೆಯ ಪರಿಹಾರಕ್ಕಾಗಿ ಒಂದು ನ್ಯಾಯಾಲಯವನ್ನು ಸ್ಥಾಪಿಸಬೇಕೆಂದು ಕೋರುವ ನಿರ್ಣಯವು ಠಾಕೂರ್ ಪ್ರಸಾದ್ ಸಿಂಗ್‌ರವರಿಂದ ಮಂಡಿಸಲ್ಪಟ್ಟು, ಶ್ರೀಮತಿ ಸುಚೇತಾ ಕೃಪಲಾನಿಯವರಿಂದ ಸಮರ್ಥಿಸಲ್ಪಟ್ಟಿತು.

ಕಾರ್ಯಕಾರಿ ಸಮಿತಿಗೆ ಚುನಾವಣೆ

ವಿ ಸು ತಂತಿ] ನಾಸಿಕ್ ೨೦

ಶ್ರೀ ರಾಜಗೋಪಾಲಾಚಾರಿಯವರು ಈ ಸಲದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾಗುವರು. ಸಮಿತಿಯ ಸದಸ್ಯರ ಹೆಸರುಗಳನ್ನು ಸಪ್ತಾಹದಲ್ಲೇ ತಿಳಿಸಲಾಗುವುದು.

ಪಟಾಕಿ ತಯಾರಿಕೆಗೆ ನಿರ್ಬಂಧ

ಸರ್ಕಾರದ ಅಪ್ಪಣೆಯಿಲ್ಲದೆ ಬಾಣ ಬಿರುಸುಗಳನ್ನು ತಯಾರಿಸಕೂಡದೆಂದು ಸರ್ಕಾರದವರು ಎಚ್ಚರಿಸಿರುತ್ತಾರೆ. ಈ ಬಗ್ಗೆ ಹೊರಡಿಸಲಾಗಿರುವ ಪ್ರಕಟಣೆಯಲ್ಲಿ ರಹದಾರಿಯಿಲ್ಲದೆ ತಯಾರಿಸಿರುವ ಪಟಾಕಿಗಳನ್ನು ಬಿಟ್ಟು ವಾಸಗೃಹ ಮತ್ತು ಅಂಗಡಿಗಳಲ್ಲಿ ಬಾಗಿಲು ಹಾಕಿಕೊಂಡು ರಾತ್ರಿ ವೇಳೆ ಅನಧಿಕೃತವಾಗಿ ತಯಾರಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆಂದೂ ಅಂತಹ ವಿಷಯಗಳನ್ನು ಸಾರ್ವಜನಿಕರು ಪೋಲೀಸರಿಗೆ ತಿಳಿಸಬೇಕೆಂದು ಕೋರಲಾಗಿದೆ.

ಕೆಲಸದಿಂದ ತೆಗೆದುದಕ್ಕಾಗಿ ಕಾಲೇಜು ಅಧ್ಯಾಪಕರ ದಾವೆ

ಬೆಂಗಳೂರು ೨೦

ಇಲ್ಲಿನ ಸೈಕೋರ್ಟಿನಲ್ಲಿ ಹಿಂದೆ ಇಂಟರ್‌ಮೀಡಿಯೆಟ್ ಕಾಲೇಜು ಅಧ್ಯಾಪಕರಾದ ಶ್ರೀ ಟಿ. ಭಾಸ್ಕರರಾಯರು ಅರ್ಜಿ ಸಲ್ಲಿಸಿ, ತಮ್ಮನ್ನು ಕೆಲಸದಿಂದ ತೆಗೆದು, ಆ ಸ್ಥಾನಕ್ಕೆ ಕಡಿಮೆ ಅರ್ಹತೆ ಇರುವವರನ್ನು ನೇಮಿಸಿಕೊಂಡು, ಭಾರತ ರಾಜ್ಯಾಂಗದ ಮೂಲಭೂತ ಹಕ್ಕುಗಳನ್ನು ಮೈಸೂರು ಸರ್ಕಾರ ಮತ್ತು ವಿಶ್ವ ವಿದ್ಯಾಲಯಗಳು ಉಲ್ಲಂಘಿಸಿರುವುದಾಗಿಯೂ, ನೌಕರಿಗೆ ತಾವು ಇತ್ತ ಅರ್ಜಿಯನ್ನು ಪುರಸ್ಕರಿಸಲು ಅಪ್ಪಣೆ ಕೋರಿಯೂ, ದಾವೆಯನ್ನು ಹೂಡಿರುತ್ತಾರೆ. ೧೯೪೮ನೇ ಇಸವಿಯಲ್ಲಿ ತಮ್ಮನ್ನು ಬೆಂಗಳೂರು ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಹಂಗಾಮಿಯಾಗಿ ಲೆಕ್ಚರರಾಗಿ ತೆಗೆದುಕೊಳ್ಳಲಾಯಿತೆಂದೂ, ಅಲ್ಲಿಂದ ಮುಂದೆ ಕೂರಿಕ ಫಸ್ಟ್ ಗ್ರೇಡ್, ದಾವಣಗೆರೆಯ ಇಂಟರ್, ಬೆಂಗಳೂರು ಇಂಟರ್ ಕಾಲೇಜುಗಳಿಗೆ ವರ್ಗಾಯಿಸಲಾಯಿತೆಂದೂ, ಬೆಂಗಳೂರು ಇಂಟರ್ ಕಾಲೇಜಿಗೆ ಬಂದ ಬಳಿಕ ಕಳೆದ ಜೂನ್ ೧ರಲ್ಲಿ ತಮ್ಮ ವರ್ಗದ ಆಜ್ಞೆಯನ್ನು ಅನುಮಾನಿಸಬೇಕೆಂದು ತಿಳಿಸಲಾಯಿತೆಂದೂ, ಆಗಸ್ಟ್ ಕಳೆದ ತಿಂಗಳು ೧ರಲ್ಲಿ ತಮ್ಮನ್ನು ಕೆಲಸದಿಂದ ನಿವೃತ್ತಿ ಮಾಡಲಾಯಿತೆಂದೂ ಅರ್ಜಿದಾರರು ತಿಳಿಸಿರುತ್ತಾರೆ.

ಅಲ್ಲದೆ ಕಳೆದ ಜೂನಿನಲ್ಲಿ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟವಾದ ೧೦೦ ರೂ ಸಂಬಳದ ಇಂಗ್ಲಿಷ್ ಲೆಕ್ಚರರ ಕೆಲಸಗಳ ಪೈಕಿ ಒಂದಕ್ಕೆ ತಾವು ಅರ್ಜಿ ಹಾಕಿಕೊಂಡುದಾಗಿಯೂ, ತಮಗೆ ಸಾಕಷ್ಟು ಅರ್ಹತೆ ಇದ್ದರೂ, ತೃತೀಯ ದರ್ಜೆಯಲ್ಲಿ ಬಿ ಎ ಆನರ್ಸ್‌ನಲ್ಲಿ ತೇರ್ಗಡೆಯಾದ ಬ್ರಾಹ್ಮಣೇತರರಿಗೆ ಹುದ್ದೆಯನ್ನು ಕೊಡಲಾಗಿದೆಯೆಂದೂ, ತಮ್ಮ ಅರ್ಜಿಯನ್ನು ಅರ್ಹತೆ ನೋಡಿ ಪರಿಶೀಲಿಸಲಿಲ್ಲವೆಂದೂ ಅವರು ತಿಳಿಸಿರುತ್ತಾರೆ.

ಹಿಂದಿನ ಮೈಸೂರು ಮಂತ್ರಿಗಳ ಪತ್ನಿಯ ನಿಧನ

ಮೈಸೂರು ಸರ್ಕಾರದ ಆರೋಗ್ಯ ಮಂತ್ರಿಗಳಾಗಿದ್ದ ಆ॥ ಮಹಮದ್ ಶರೀಫ್ ಅವರ ಪತ್ನಿ ಅಮೀನಾ ಬೇಗಮ್‌ರವರು ನೆನ್ನೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಹಲವು ಕಾಲ ಅವರು ಪ್ರಜಾಪ್ರತಿನಿಧಿ ಸಭೆಯ ಸದಸ್ಯೆಯಾಗಿದ್ದರು.

ವಿಶ್ವಸಂಸ್ಥೆಯಲ್ಲಿ ಭಾರತದ ನಿರ್ಣಯ ಬಿದ್ದುಹೋಯಿತು

ಕೆಂಪು ಚೀನಕ್ಕೆ ವಿಶ್ವ ಸಂಸ್ಥೆಯಲ್ಲಿ ಸದಸ್ಯ ಸ್ಥಾನವನ್ನು ಕೊಡಬೇಕೆಂದು ಭಾರತವು ಮಂಡಿಸಿದ ನಿರ್ಣಯವು ಸಂಸ್ಥೆಯ ಸಾಧಾರಣ ಸಭೆಯಲ್ಲಿ ನೆನ್ನೆ ೩೩-೧೬ ಓಟುಗಳಿಂದ ಬಿದ್ದುಹೋಯಿತು.

ನೆಹರೂರವರಿಗೆ ಬಂದ ಜಪಾನಿನ ಬಹುಮಾನ ವಸ್ತು ಪ್ರದರ್ಶನಕ್ಕೆ

ಮೈಸೂರು ೨೦

ಜಪಾನಿನ ಮಕ್ಕಳು ಪ್ರಧಾನಿ ನೆಹರೂರವರಿಗೆ ಬಹುಮಾನವಾಗಿ ಕೊಟ್ಟಿರುವ ಬೊಂಬೆ ವಾದ್ಯಗೋಷ್ಠಿಯನ್ನು ಈ ಸಲದ ದಸರಾ ವಸ್ತು ಪ್ರದರ್ಶನದಲ್ಲಿ ಇಡಲಾಗುವುದು.

ಅನಗರದಲ್ಲಿ ಸರಿಯಾಗಿ ರೇಷನ್ ಹಂಚಿಕೆಯಾಗುತ್ತಿಲ್ಲ

ಯಳಂದೂರ ತಾಲ್ಲೂಕು ಅಗರದ ವಿವಿಧೋದ್ದೇಶ ಸಹಕಾರ ಸಂಘದಲ್ಲಿ ಸರಿಯಾಗಿ ರೇಷನ್ ಹಂಚಿಕೆಯಾಗುತ್ತಿಲ್ಲ ಕಳೆದ ತಿಂಗಳು ೨೦ರಿಂದ ಈ ತಿಂಗಳು ಮೊದಲನೇ ತಾ॥ ವರೆಗೂ ಸಂಘದ ಅಂಗಡಿಯು ಮುಚ್ಚಲ್ಪಟ್ಟಿತ್ತು ಈಚೆಗೆ ಗಾ ದಿನಗಳಿಂದಲೂ ರೇಷನ್ನನ್ನು ಸರಿಯಾಗಿ ಕೊಡುತ್ತಿಲ್ಲ ಕಾರ್ಡುಗಳಲ್ಲಿ ನಮೂದಾಗಿರುವ ಪ್ರಮಾಣದಲ್ಲಿ ಮೂರನೇ ಎರಡು ಭಾಗದಷ್ಟು ಧಾನ್ಯ ದೊರೆಯದೆ, ಅನೇಕ ಬಡ ಕೃಷಿಕರು, ಕೂಲಿ, ಕಂಗಾಲಾಗಿ ಹೊಟ್ಟೆ ಬಟ್ಟೆಗೆ ಬೇರೆ ಮಾರ್ಗಗಳನ್ನು ಹುಡುಕುತ್ತಿರುವರು ಇಂಥ ಅನ್ಯಾಯಗಳಿಗೆ ಕಾರಣಗಳು ತಿಳಿದು ಬರುತ್ತಿಲ್ಲ ಇವೆಲ್ಲ ತೊಂದರೆಗಳನ್ನೂ ತಪ್ಪಿಸಿ ಜನರಿಗೆ ಸರಿಯಾದ ರೇಷನ್ ದೊರೆಯುವಂತೆ ಏರ್ಪಾಡು ಮಾಡಬೇಕೆಂದು ಅಲ್ಲಿನ ನಿವಾಸಿಯೊಬ್ಬರು ಕೋರಿರುತ್ತಾರೆ

ಜಯಪ್ರಕಾಶರ ಕಡೆಗೆ ಕಲ್ಲೆಸೆತ

ಬೊಂಬಾಯಿಯ ಗಿರಣಿ ಪ್ರದೇಶಗಳಲ್ಲಿ ಪರಿಶೀಲನೆಗಾಗಿ ಸಮಾಜವಾದಿ ಪಕ್ಷದ ಮುಖಂಡರಾದ ಜಯಪ್ರಕಾಶ ನಾರಾಯಣರು ಮೊನ್ನೆ ಸಂಚಾರದಲ್ಲಿದ್ದಾಗ, ಅವರ ಕಾರಿನ ಕಡೆಗೆ ಕಲ್ಲುಗಳನ್ನು ಎಸೆಯಲಾಯಿತು ಕಾರಿನ ಹತ್ತಿರ ಇದ್ದ ಏಳು ಮಂದಿ ಸಮಾಜವಾದಿ ಪಕ್ಷ ಕಾರ್ಯಕರ್ತರಿಗೆ ಏಟು ಬಿದ್ದಿವೆ

ಪಾಕಿಸ್ತಾನ ಸೈನ್ಯಗಳು ಭಾರತದ ಗಡಿಯೊಳಗೆ

ಕಾಶ್ಮೀರದ "ಸೀಸ್ ಫೈರ್" ಗೆರೆಯನ್ನು ದಾಟಿ ಪಾಕಿಸ್ತಾನದ ಸೈನ್ಯಗಳು ಭಾರತದೊಳಗೆ ನುಗ್ಗಿರುವುದಾಗಿ ತಿಳಿದುಬಂದಿದೆ ೨೦ ಮೈಲಿ ಒಳಗೆ ಒಂದು ಹಲವು ಗಡಿಠಾಣೆಗಳನ್ನು ಕಟ್ಟಿ ಅವರು ವಾಸಿಸುತ್ತಿರುವುದಾಗಿಯೂ, ಈ ವಿಷಯವನ್ನು ವಿಶ್ವಸಂಸ್ಥೆಯ ವೀಕ್ಷಕರಿಗೆ ತಿಳಿಸಿದುದಾಗಿಯೂ ವರದಿಯಾಗಿದೆ

ಹರಿಕಥೆ

ಈ ಸಂಜೆ ೭ ಘಂಟೆಗೆ ಅಗ್ರಹಾರದ ೩ನೇ ಬೀದಿಯಲ್ಲಿರುವ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಶ್ರೀ ಸೀತಾ ಮಾಧವ ದಾಸರಿಂದ 'ಭಕ್ತ ಪುರಂದರ ದಾಸರ ಚರಿತ್ರೆ'ಯನ್ನು ಹರಿಕಥಾ ರೂಪದಲ್ಲಿ ನಡೆಸಲಾಗುತ್ತೆ

ಅಸ್ಸಾಂ ಭೂಕಂಪ ನಿಧಿಗೆ

ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ

ಮುನಿಸಿಪಲ್ ಆಫೀಸ್ ಮೈಸೂರು

ದೊರೆಸ್ವಾಮಿ-ಲಲಿತಾ ವಿವಾಹ

ಬೆಂಗಳೂರಿನ ಪೌರವಾಣಿ ಪತ್ರಿಕೆಯ ಸಂಪಾದಕರಾದ ಶ್ರೀ ಪಿ. ಎಸ್. ದೊರೆಸ್ವಾಮಿಯವರ ವಿವಾಹವು, ಹಿಂದೂಸ್ತಾನ್ ವಿಮಾ ಕಂಪೆನಿಯ ಬೆಂಗಳೂರು ಶಾಖೆಯ ಮ್ಯಾನೇಜರರಾದ ಶ್ರೀ ಕೆ. ಎಸ್. ರಾಮಯ್ಯನವರ ಸೋದರ ಸೊಸೆ ಶ್ರೀಮತಿ ಲಲಿತಾರೊಡನೆ ಮೊನ್ನೆ ದಿನ ಬಸವನಗುಡಿಯ ವಾಸವೀ ಧರ್ಮಶಾಲೆಯಲ್ಲಿ ವಿಜೃಂಭಣೆಯಿಂದ ನಡೆಯಿತು ಸಂಜೆ ಸ್ವಾಗತ ಸಮಾರಂಭವು ಏರ್ಪಾಡಾಗಿತ್ತು ಮಂತ್ರಿಗಳೇ ಆದಿಯಾಗಿ ಅನೇಕ ಪ್ರಮುಖರು ಆಗಮಿಸಿ ನೂತನ ದಂಪತಿಗಳಿಗೆ ಶುಭವನ್ನು ಕೋರಿದರು

ಟ್ರೈನಿಂಗ್ ಕಾಲೇಜಿನ ರಜತೋತ್ಸವ

ಮೈಸೂರು ಟ್ರೈನಿಂಗ್ ಕಾಲೇಜ್ ಆಫ್ ಕಾಮರ್ಸ್ ಸಂಸ್ಥೆಯ ರಜತ ಮಹೋತ್ಸವವನ್ನು ಬರುವ ಡಿಸೆಂಬರ್ ಮಾಹೆಯಲ್ಲಿ ಆಚರಿಸಬೇಕೆಂದು ತೀರ್ಮಾನಿಸಲಾಗಿದೆ. ಕಾಲೇಜಿನ ಹಳೆಯ ವಿದ್ಯಾರ್ಥಿಗಳು ತಮ್ಮ ವಿಳಾಸವನ್ನು ತಿಳಿಸಬೇಕಾಗಿ ಪ್ರಿನ್ಸಿಪಾಲರು ಕೋರುತ್ತಾರೆ

ಜೋಳದ ಗುಳಿಯಲ್ಲಿ ಉಸಿರು ಕಟ್ಟಿ ದಂಪತಿಗಳ ಮರಣ

ಮೇಟ್ಟುಪಾಳ್ಯದ ಲಕ್ಷ್ಮಣ ನಾಯಕ ಎಂಬ ವಿರಾಸ್ವಾಮಿಯ ಪತ್ನಿಯು ಜೋಳವನ್ನು ತೆಗೆಯುವ ಸಲುವಾಗಿ ಗುಳಿಗೆ ಇಳಿದು ಬಹಳ ಹೊತ್ತಾದರೂ ಹೊರಕ್ಕೆ ಬಾರದಿರಲು ಆಕೆಯ ಗಂಡನು ತನ್ನ ಹೆಂಡತಿ ಗುಳಿಗೆ ಇಳಿದನೆಂದೂ ಅವನೂ ಸಹ ಗುಳಿಯಿಂದ ಹೊರಗೆ ಬರದಿರಲು ... ಹೋದಾಗ ವಿಷಪೂರಿತ ವಾಯುವು ... ದು ಉಸಿರು ಕಟ್ಟಿದಂತಾಯಿತೆಂದೂ, ನಂತರ ಪೋಲೀಸರು ಬಂದು ವಿದ್ಯುತ್ ಉಪಕರಣಗಳ ಸಹಾಯದಿಂದ ದಂಪತಿಗಳಿಬ್ಬರನ್ನೂ ಗುಳಿಯಿಂದ ಹೊರಕ್ಕೆ ತೆಗೆದ ನೋಡುವಲ್ಲಿ ಆವರಿಬ್ಬರೂ ಮೃತಪಟ್ಟಿದ್ದರೆಂದೂ ವರದಿಯಾಗಿದೆ

೫ ಟನ್ ತೂಕದ ತಿಮಿಂಗಿಲದ ಶಿಕಾರಿ

ಕಳೆದ ಶುಕ್ರವಾರ ರಂಗೂನ್ ತೀರದ ೪೦ ಮೈಲಿ ದೂರದಲ್ಲಿ ಬೆಸ್ತರು ಐನು ಹಿಡಿಯಲು ಹೋದಾಗ ೫ ಟನ್ ತೂಕದ ಭಾರಿ ತಿಮಿಂಗಿಲವು ಬಲೆಗೆ ಸಿಕ್ಕಿ ಆ ಭಾರಿ ಬೋಟನ್ನು ಸುಮಾರು ೫೦ ಮೈಲಿ ದೂರ ಸಮುದ್ರದೊಳಗೆ ಎಳೆದುಕೊಂಡು ಹೋಯಿತೆಂದೂ, ಕಡೆಗೆ ಅದನ್ನು ಭರ್ಜಿಯಿಂದ ತಿವಿದು ಕೊಲ್ಲಲಾಯಿತೆಂದೂ ವರದಿಯಾಗಿದೆ

ರಾಜಕಮಲ್ ಮತ್ತು ಗಣೇಶಾ

ಟಾಕೀಸುಗಳಲ್ಲಿ

23-9-50ರಿಂದ :: ಅಮೋಘ ಪ್ರಾರಂಭ

ಪ್ರತಿ ದಿನ ೩ ಆಟಗಳು

ಚಂದ್ರಿಕ

(ತಮಿಳು)

ಭೂಮಿಕೆ –

ಶ್ರೀ ಹಾಸಿ.

ಶ್ರೀ ಲಲಿತಾ-ಪದ್ಮಿನಿ,

ಶ್ರೀ ಸಾರಂಗಪಾಣಿ,

ಶ್ರೀ ಟಾ ಲಯ್ಯ.

ತಮಿಳು ಚಿತ್ರಗಳಲ್ಲಿಲ್ಲ ಆಕರ್ಷಕ್ಷಕ್ಕೆ ಕಥಾಪಕ

[R V Pictures Release

ರಾಜಕಮಲ್‌ನಲ್ಲಿ :: ಕಡೆಯ 3 ದಿನಗಳು

ರಾಜಕಮಲ್‌ನಲ್ಲಿ ಶಕುಂತಲ (ಹಿಂದಿ)

ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY

ಗೂರಲು, ಉಬ್ಬಸ, ಸಂಧಿವಾತ,ಕೀಲು ನೋವು, ಗಲಗ್ರಂಥಿ (TONSIL) ಮುಂತಾದ ರೋಗಗಳಿಗೆ ಖಚಿತವಾದ ಔಷಧಿ ದೊರೆಯುತ್ತದೆ ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಕೊಟ್ಟಿರುತ್ತಾರೆ ಬೆಲೆ ರೂ 2-0-0

ಆರ್. ಎಸ್. ಪಂಡಿತರ

ರಾಮಗೋಪಾಲ ವೈದ್ಯಶಾಲಾ

ದಿವಾನರ ರಸ್ತೆ, ಮೈಸೂರು

ಶುಭಾ

ಶುಭ ಸುದ್ದಿಗಳ ಸುಂದರ ಪತ್ರಿಕೆ

ಇದೀಗ ಸಿದ್ಧವಾಗಿದೆ

† ಕಾಲ್ಪನಿಕ – ಕುತೂಹಲ ಪೂರ್ಣ

† ಪ್ರತ್ಯಕ್ಷ – ಒಲವು ಚೆಲುವು

† ವಿಶೇಷ – ವರದಿ

† ಇತ್ಯಾದಿ – ಅಂಶಗಳಿಂದ

ತುಂಬಿ ತುಳುಕುವ

ನೂತನ ಕನ್ನಡ ವಾರ ಪತ್ರಿಕೆ

ವಾರ್ಷಿಕ ಚಂದಾ ರೂ. 4

ಎಲ್ಲೆಲ್ಲೂ ಏಜೆಂಟರು ಬೇಕು

ಅಲ್ಲದೆ ಕೊಡಗಾದ ಕೆಲಸಕ್ಕೆ ಸರಿಯಾದ

ಸಂಭಾವನೆಯೂ ಕೊಡು

"ಶುಭ"

ನಂ 5, ವೆಂಕಟಸ್ವಾಮಿ ರೋಡ್ ಸಿಟಿ

ಮಾರ್ಕೆಟ್ ಸಮೀಪ, ಬೆಂಗಳೂರು 2

ಬೋರ್ಡುಗಳನ್ನು

ಅಗ್ಗವಾಗಿ ಬರೆದು ಕೊಡುತ್ತೇವೆ

ಓರಿಯಂಟಲ್ ಇಂಡಸ್ಟ್ರೀಸ್,

ಅಗ್ರಹಾರ ಬಸ್ ಸ್ಟ್ಯಾಂಡ್ ಹತ್ತಿರ, ಮೈಸೂರು

ರಘುಲಾಲ್ & ಕೋ,

ಔಷಧ ವ್ಯಾಪಾರಿಗಳು,

ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ

(ಬೆಂಗಳೂರು)

ಔಷಧ ವ್ಯಾಪಾರಿಗಳು,

70 ಅವೆನ್ಯೂ ರಸ್ತೆ, ಬೆಂಗಳೂರು.

ಭದ್ರತೆ ಮತ್ತು ಸೇವೆ

ಪೂರ್ಣ ಭದ್ರತೆ - ತೀರ ಕಡಿಮೆ ವೆಚ್ಚ

ಅತ್ಯನುಕೂಲವಾದ ಪ್ರೀಮಿಯಂ ದರ

ತಡವಿಲ್ಲದ ವಿಮಾ ಮೊಬಲಗಿನ ಪಾವತಿ

ಸುಲಭವಾದ ಸಾಲದ ಸೌಕರ್ಯ

ಇವೇ ಭಾರತದಲ್ಲಿ ಅತ್ಯಧಿಕ ಬೋನಸ್ ಹಂಚಿರುವುದು

ಇವೆಲ್ಲಾ ದೊರೆಯುವ

ಮೈಸೂರು ಸರ್ಕಾರದ

ವಿಮಾ ಇಲಾಖೆ

ಪ್ರತಿಗಳ ಶಾಖೆಯಲ್ಲಿ

ವಿವರ ಹಾಗೂ ಅರ್ಜಿ ಫಾರಂಗಳಿಗಾಗಿ

ಬರೆಯಿರಿ

SRI GAYATHRI

TALKIES

From 21-9-50

Daily 3 Shows

SEE!

AFRICA ABLAZE

Raging Rhinos ! Killer Lions !! Lasso Hunting and Water Fights to Death and More and More

Savage Splendour

(In Technicolor)

ಸ್ಯಾವೇಜ್ ಸ್ಪ್ಲೆಂಡರ್

ಆಫ್ರಿಕಾ ... ಚಿತ್ರ

- Morning Shows:—

On Sat the 23rd & Sun 24th

CASBAH

Edited, printed and published by A R Nagarajan, at Sadhvi Press D Subbiah Road, Mysore

ನೋಂ. ನಂ. 792 | ಗವ ಹೀ ವಾ.ಹೆಂ | ಇಂದಿನ ಪತ್ರಿಕೆ ೬ ಕಾಸು

ಸಂಪುಟ ೯] | ಗುರುವಾರ ೨೧-೯-೫೦ | [ಸಂಚಿಕೆ ೫೦

ಕಮ್ಯೂನಿಸ್ಟರಿಂದ ಸಿಯೋಲಿನ ತ್ಯಾಗ?

ಕಾಂಗ್ರೆಸ್ ಮಹಾಸಭೆಯ ಬಹಿರಂಗ ಅಧಿವೇಶನ

ಅಸ್ಸಾಂ ಪ್ರಜೆಗಳ ಪರಿಹಾರಕ್ಕಾಗಿ ಮನವಿ

[ಸ್ವಂತ ವಿಶೇಷ ವರದಿಗಾರರಿಂದ ತಂತಿ]

ನಾಸಿಕ್ ೨೦

ಕಾಂಗ್ರೆಸ್ ಮಹಾಸಭೆಯ ಬಹಿರಂಗ ಅಧಿವೇಶನವು ಗಾಂಧಿ ನಗರದಲ್ಲಿ ನಿರ್ಮಾಣವಾಗಿರುವ ಭವ್ಯವಾದ ಮಂಟಪದಲ್ಲಿ ಈ ಮಧ್ಯಾಹ್ನ ಆರಂಭವಾಯಿತು. ಸಭಾ ಭವನವು ತ್ರಿವರ್ಣ ಧ್ವಜಗಳಿಂದಲೂ ತಳಿರು ತೋರಣಗಳಿಂದಲೂ ಅತ್ಯಂತ ಮನೋಹರವಾಗಿ ಶೃಂಗರಿಸಲ್ಪಟ್ಟಿದ್ದಿತು. ವೇದಿಕೆಯ ಮಧ್ಯದಲ್ಲಿ ಮಹಾತ್ಮಾ ಗಾಂಧಿಯವರ ಭಾವಚಿತ್ರವು ಕಂಗೊಳಿಸುತ್ತಿತ್ತು. ಸಭಾ ಮಂಟಪದಲ್ಲಿ ೨೦ ಸಾವಿರ ಜನರು ಸೇರಿದ್ದರು. ೬ ಸಾವಿರ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸದಸ್ಯರೂ ೨೫೦೦ ಪ್ರತಿನಿಧಿಗಳೂ ಸಾವಿರಾರು ಜನ ಕಾಂಗ್ರೆಸ್ ಕಾರ್ಯಕರ್ತರೂ ಬಂದಿದ್ದರು.

ಸಭೆಯ ಕಾರ್ಯಕಲಾಪಗಳನ್ನು ವರದಿ ಮಾಡಲು ೩೦೦ ಜನ ಪತ್ರಿಕಾ ಪ್ರತಿನಿಧಿಗಳು ದೇಶದ ನಾನಾ ಭಾಗಗಳಿಂದ ಬಂದಿದ್ದರು.

ಮಾಜಿ ಅಧ್ಯಕ್ಷರಾದ ಡಾ॥ ಪಟ್ಟಾಭಿ ಸೀತಾರಾಮಯ್ಯನವರೂ, ಸ್ವಾಗತ ಸಮಿತಿಯ ಸದಸ್ಯರೂ ಪಂಡಿತ ನೆಹರೂ ಮುಂತಾದ ನಾಯಕರೂ ಸಭಾ ಮಂಟಪದ ಬಳಿ ನೂತನ ಅಧ್ಯಕ್ಷರಾದ ಬಾಬು ಪುರುಷೋತ್ತಮದಾಸ ಟಂಡನರಿಗೆ ವೈಭವಯುತವಾದ ಸ್ವಾಗತವನ್ನು ನೀಡಿದರು. ಮೆರವಣಿಗೆಯಲ್ಲಿ ಬಂದ ನೂತನ ಅಧ್ಯಕ್ಷರಿಗೆ ಗೌರವವನ್ನು ಸಲ್ಲಿಸಿದರು.

ವಂದೇಮಾತರಂ ಗೀತೆಯೊಡನೆ ಮಹಾಧಿವೇಶನದ ಕಾರ್ಯಕ್ರಮಗಳು ಪ್ರಾರಂಭವಾದವು. ಸ್ವಾಗತಾಧ್ಯಕ್ಷರಾದ ಶ್ರೀ ಬಿ. ಎಸ್. ಹಿರೇಯವರು ಎಲ್ಲರಿಗೂ ಸುಸ್ವಾಗತವನ್ನು ಬಯಸಿ ಭಾಷಣ ಮಾಡಿದರು. ಅಧ್ಯಕ್ಷರು ಎರಡೂವರೆ ಗಂಟೆ ಕಾಲ ಸ್ಫೂರ್ತಿದಾಯಕವಾದ ಭಾಷಣ ಮಾಡಿ ಕಾಂಗ್ರೆಸ್ಸಿನ ಮುಂದೆ ಇರುವ ಕರ್ತವ್ಯಗಳನ್ನು ವಿವರಿಸಿದರು.

ರಾಷ್ಟ್ರಪತಿಗಳಾದ ಶ್ರೀ ಬಾಬು ರಾಜೇಂದ್ರಪ್ರಸಾದರು ಅಧಿವೇಶನಕ್ಕೆ ಕಳುಹಿಸಿದ್ದ ಶುಭ ಸಂದೇಶಗಳನ್ನು ಓದಿದರು.

ದೇಶಕ್ಕಾಗಿ ಸೇವೆ ಸಲ್ಲಿಸಿ ದಿವಂಗತರಾದ ಶ್ರೀಮತಿ ಸರೋಜಿನಿ ದೇವಿ, ಶ್ರೀ ಗೋಪಿನಾಥ ಬರ್ದೊಲೋಯಿ, ಗೋವಿಂದ ಮಾಳವೀಯ, ಯೂಸುಫ್ ಮೆಹರಲಿ ಮುಂತಾದವರ ನಿಧನಕ್ಕಾಗಿ ಶೋಕವನ್ನು ವ್ಯಕ್ತಪಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಅಸ್ಸಾಮಿನಲ್ಲಿ ಭೂಕಂಪ ಮತ್ತು ಪ್ರವಾಹದಿಂದ ನೊಂದವರಿಗಾಗಿ ಸಹಾಯ ಮಾಡುವ ನಿರ್ಣಯವೂ ಸಹ ಮಂಡಿಸಲ್ಪಟ್ಟಿತು.

ಭಾರತ ವಿದೇಶಾಂಗ ನೀತಿಯನ್ನು ಕುರಿತ ಪಂಡಿತ ಗೋವಿಂದವಲ್ಲಭ ಪಂತರು ನಿರ್ಣಯವನ್ನು ಮಂಡಿಸಿದರು. ಸಭೆಯು ಈ ವಿಷಯಕ್ಕೆ ಮುಂದುವರಿಯಿತು.

ಅಖಿಲ ಭಾರತ ಕಾಂಗ್ರೆಸ್ಸಿನ ವಿಷಯ ನಿಯಾಮಕ ಸಮಿತಿಯು ನೆನ್ನೆ ಮಧ್ಯರಾತ್ರಿವರೆಗೆ ಸೇರಿತ್ತು. ಭಾರತದ ಆರ್ಥಿಕ ಯೋಜನೆಗೆ ಸಂಬಂಧಪಟ್ಟಂತೆ ಹಾಗೂ ದೇಶದ ಅಭಿವೃದ್ಧಿ ಸಮಿತಿಯನ್ನು ರಚಿಸಬೇಕೆಂದು ಶ್ರೀ ಜಗಜೀವನ ರಾಮರವರು

ಕಮ್ಯೂನಿಸ್ಟರು ಸಿಯೋಲನ್ನು ಬಿಡಲು ಸಿದ್ಧತೆ

ದಕ್ಷಿಣ ಕೊರಿಯದ ರಾಜಧಾನಿ ಸಿಯೋಲಿನ ಆಕ್ರಮಣಕ್ಕಾಗಿ ನೆನ್ನೆ ದಿನ ಬೆಳಗ್ಗೆ ಅಮೆರಿಕದ ಪಡೆಗಳು ನೌಕೆಗಳ ಹೆಚ್ಚಿನ ಸಂಖ್ಯೆಯಲ್ಲಿ ಹ್ಯಾನ್ ನದಿಯ ಮೂಲಕ ನುಗ್ಗಿ ಕಮ್ಯೂನಿಸ್ಟರ ಅಧೀನದಲ್ಲಿದ್ದ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡವು. ಕಮ್ಯೂನಿಸ್ಟ್ ಪ್ರತಿಭಟನೆಯು ಕಡಿಮೆಯಾಗುತ್ತಿದ್ದು ಪೋಹಂಗ್ ಪ್ರದೇಶದಲ್ಲಿ ಕಮ್ಯೂನಿಸ್ಟರ ಪ್ರತಿಭಟನಾ ವ್ಯವಸ್ಥೆ ಕುಸಿದು ಬಿದ್ದಿತೆಂದೂ, ಉತ್ತರ ಕೊರಿಯನ್ನರು ಸಿಯೋಲನ್ನು ಖಾಲಿ ಮಾಡುತ್ತಿರುವುದಾಗಿ ಸೂಚನೆಗಳಿವೆಯೆಂದೂ ಟೋಕಿಯೋ ವರದಿಯಾಗಿದೆ.

ಚರ್ಚಿಲ್ಲರ ಯತ್ನ ವಿಫಲ

ಬ್ರಿಟನ್ನಿನ ಲೇಬರ್ ಸರ್ಕಾರವು ಕೈಗೊಂಡಿರುವ ಉಕ್ಕಿನ ಕೈಗಾರಿಕೆಯ ರಾಷ್ಟ್ರೀಕರಣ ಯೋಜನೆಯ ವಿರುದ್ಧವಾಗಿ ಸರ್ಕಾರವನ್ನು ಸೋಲಿಸ ಬೇಕೆಂದು ಪಾರ್ಲಿಮೆಂಟಿನಲ್ಲಿ ಚರ್ಚಿಲ್ಲರು ತಂದ ನಿರ್ಣಯವು ೬ ಓಟುಗಳಿಂದ ಸೋಲಾಗಿ ಸರ್ಕಾರಕ್ಕೆ ಜಯವಾಯಿತು.

ಅಹಮದಾಬಾದಿನಲ್ಲಿ ಒಂದೇ ದಿನ ೨೪ ಅಂಗುಲ ಮಳೆ

ನೆನ್ನೆ ಅಹಮದಾಬಾದಿನಲ್ಲಿ ೬ ಗಂಟೆಗೆ ೩೦ ಮೈಲಿ ವೇಗದಲ್ಲಿ ಬಿರುಗಾಳಿಯು ಬೀಸಿ ಮರಗಳನ್ನು ಉರುಳಿಸಿ ಟೆಲಿಫೋನ್ ಸಂಬಂಧವನ್ನು ಭಂಗಗೊಳಿಸಿತು. ಗಾಳಿಯೊಡನೆ ಮಳೆಯು ಪ್ರಾರಂಭವಾಗಿ ಒಂದೇ ದಿನದಲ್ಲಿ ೨೪ ಅಂಗುಲ ಮಳೆ ಬಿದ್ದಿತು. ಇದರಿಂದ ನೂರಾರು ಮನೆಗಳು, ಮತ್ತು ಗುಡಿಸಲುಗಳು ಕುಸಿದುವು ಮತ್ತು ಹೆಂಡು ಬಿದ್ದು ೩ ಜನ ಮೃತರಾದರು. ರಸ್ತೆಗಳಲ್ಲಿ ನೀರು ಹೆಚ್ಚಿಯಾಗಿ ಹರಿಯುತ್ತಿತ್ತು.

ಮಂಡಿಸಿದ ನಿರ್ಣಯವೂ ಮತ್ತು ನಾಡಿ ಅಭಿವೃದ್ಧಿ ಬಗ್ಗೆ ಬಂದ ನಿರ್ಣಯವೂ ಅಂಗೀಕೃತವಾದುವು. ಈ ದಿನ ಬೆಳಗ್ಗೆ ಬಹಿರಂಗ ಅಧಿವೇಶನವು ಸಮಾವೇಶಗೊಂಡು ಭಾರತದ ವಿದೇಶಾಂಗ ನೀತಿ ಬಗ್ಗೆ ನಿರ್ಣಯದ ಮೇಲೆ ಚರ್ಚೆ ನಡೆಸಿ ಬಹುಮತದಿಂದ ಅಂಗೀಕರಿಸಿತು.

ಸ್ವಾತಂತ್ರ್ಯ ಪ್ರಾಮಾಣಿಕರಿಗೆ ಮಾತ್ರ ಕಾಂಗ್ರೆಸ್ಸಿನಲ್ಲಿ ಸ್ಥಾನವಿರಬೇಕು

ಕಾಂಗ್ರೆಸ್ ಮಹಾಧಿವೇಶನದಲ್ಲಿ ಪುರುಷೋತ್ತಮದಾಸರ ಅಧ್ಯಕ್ಷ ಭಾಷಣ

ಅಖಿಲ ಭಾರತ ಕಾಂಗ್ರೆಸ್ಸಿನ ಮಹಾಧಿವೇಶನದ ಅಧ್ಯಕ್ಷತೆ ವಹಿಸಿ ನೂತನ ಅಧ್ಯಕ್ಷ ಬಾಬು ಪುರುಷೋತ್ತಮದಾಸ ಟಂಡನರವರು ನೆನ್ನೆ ದಿನ ಕೆಳಗೆ ಕಂಡಂತೆ ಭಾಷಣ ಮಾಡಿದರು.

ಭಾರತ ರಾಷ್ಟ್ರವು ಯಾವ ಧ್ಯೇಯಕ್ಕಾಗಿ ಹೋರಾಡಿತೋ ಅದಕ್ಕೆ ಎಲ್ಲ ಜನಾಂಗದವರೂ ಸಮಾನ ಹಕ್ಕು ಬಾಧ್ಯತೆಗಳನ್ನು ಕಲ್ಪಿಸುವ ಜಾತಿ ವಿವೇಚನೆಯಿಲ್ಲದ ಪ್ರಜಾತಂತ್ರ ರಾಜ್ಯ ರಚಿಸಲ್ಪಟ್ಟಿದೆ. ನಮ್ಮ ದೇಶದಲ್ಲಿ ಹಿಂದೂ ಸರ್ಕಾರವೇ ಇರಬೇಕೆಂಬ ಕೂಗು ನ್ಯಾಯಸಮ್ಮತವಾದುದಲ್ಲ. ಸಂಸ್ಕೃತಿ ಹಿನ್ನೆಲೆಯ ವಿದೇಶಾಂಗ ನೀತಿಯು ಬಹಳ ಸಂಘಟಿತವಾದದ್ದು.

ವಿಶ್ವ ಸಂಸ್ಥೆಯ ನಿರ್ಧಾರಗಳನ್ನು ಪ್ರತಿಭಟಿಸಿ ಇದು ಕೊರಿಯಾಕ್ಕೇ ಒಂದು ನೀತಿಯನ್ನೂ, ಕಾಶ್ಮೀರಕ್ಕೇ ಒಂದು ನೀತಿಯನ್ನೂ ಅನುಸರಿಸುತ್ತಿದೆ ಎಂದು ಟೀಕಿಸಿದರು. ಭಾರತದಲ್ಲಿ ಹಿಂದೀ ಭಾಷೆಯನ್ನು ಆದಷ್ಟು ಬೇಗನೆ ಜಾರಿಗೆ ತರಬೇಕೆಂದು ಹೇಳಿದರು. ಸ್ಥಳಾಂತರ ಹೊಂದಿದವರ ಪುನರ್ವಸತಿ, ಆರ್ಥಿಕ ಸಮಸ್ಯೆ ನಿವಾರಣೆ, ಆಹಾರ ಮೊದಲಾದ ವಸ್ತುಗಳ ಮೇಲಿನ ಹತೋಟಿ, ದೇಶದ ಆರ್ಥಿಕ ಸಾಮಾಜಿಕ ಪರಿಸ್ಥಿತಿಗಳನ್ನು ಕುರಿತು ತಮ್ಮ ಭಾಷಣದಲ್ಲಿ ಪರಿಶೀಲಿಸಿ ಸೂಕ್ತ ಸಲಹೆಗಳನ್ನಿತ್ತರು. ರಾಜ್ಯ ಪದವಿ ಕೇವಲ ಅಧಿಕಾರ ಲಾಲಸೆಯ ದಲ್ಲ. ಕಾಂಗ್ರೆಸ್ಸಿನ ಸೇವಾ ಕ್ಷೇತ್ರದ ಪರಿಧಿಯಲ್ಲಿ ಈ ಭಾವನೆಯು ಹೋಗಿ ಸೇವಾ ದೃಷ್ಟಿಯು ಬೆಳೆಯಬೇಕೆಂದೂ ಹೇಳಿ, ಕಾಂಗ್ರೆಸ್ ಸದಸ್ಯರ ಸಂಖ್ಯೆ ಕಡಿಮೆಯಾದರೂ ಚಿಂತೆಯಿಲ್ಲ, ಪ್ರಾಮಾಣಿಕತೆಯುಳ್ಳ ವ್ಯಕ್ತಿಗಳವರಿಗೆ ಮಾತ್ರ ಕಾಂಗ್ರೆಸ್ಸಿನಲ್ಲಿ ಪ್ರವೇಶವಿರಬೇಕೆಂದೂ ಶ್ರೀ ಟಂಡನರವರು ಅಭಿಪ್ರಾಯಪಟ್ಟರು.

ಶನಿವಾರದ ಪೋಸ್ಟಾಫೀಸಿಗೆ ರಜಾ

ಸೆಪ್ಟೆಂಬರ್ ೨೩ನೇ ಶನಿವಾರ ಒಕ್ಕಲಿಗ ಹಬ್ಬದ ಪ್ರಯುಕ್ತ ಎಲ್ಲಾ ಪೋಸ್ಟಾಫೀಸುಗಳಿಗೂ ರಜಾ ಕೊಡಲಾಗಿದೆ.

ಮಿತ ಸಂತಾನಕ್ಕಾಗಿ ಸರ್ ಎಂ. ವಿ.ಯವರ ಒತ್ತಾಯ

ಸಂಸ್ಥಾನದ ಮಾಜಿ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯನವರು ನೆನ್ನೆ ದಿನ ದೊಡ್ಡಬಳ್ಳಾಪುರದಲ್ಲಿ ಗ್ರಾಮ ಕೈಗಾರಿಕಾ ಯೋಜನೆಯ ಶಾಸ್ತ್ರಜ್ಞರುಗಳ ಶಿಬಿರದ ಮುಕ್ತಾಯ ಸಮಾರಂಭವನ್ನು ನೆರವೇರಿಸಿದರು. ಹಿಂದಿಗಿಂತಲೂ ಇನ್ನು ಉತ್ಪಾದನೆಗಾಗಿ ಶ್ರಮಿಸಬೇಕೆಂದೂ, ಅತ್ಯಾವಶ್ಯಕ ವಸ್ತುಗಳಾದ ಆಹಾರ, ಬಟ್ಟೆ ಮತ್ತು ವಸತಿ ಸೌಕರ್ಯಗಳ ಕಡೆ ಹೆಚ್ಚು ಗಮನ ಕೊಡಬೇಕೆಂದೂ ಅವರು ತಿಳಿಸಿದರು. ದೇಶದ ಜನಸಂಖ್ಯೆಯು ಹೆಚ್ಚುತ್ತಿರುವಂತೆಯೇ ಆಹಾರ ಮತ್ತು ಇತರ ಜೀವನ ಸೌಕರ್ಯಗಳು ಹೆಚ್ಚುತ್ತಿಲ್ಲವಾದುದರಿಂದ ಜನರು ಮಿತ ಸಂತಾನದ ಕಡೆ ಗಮನ ಕೊಡುವುದು ಅವಶ್ಯಕವೆಂದೂ ಹೇಳಿ ಪ್ರತಿಯೊಂದು ಕುಟುಂಬದವರೂ ೨ ಅಥವಾ ೩ ಮಕ್ಕಳನ್ನು ಹೊಂದುವುದರಲ್ಲಿ ತೃಪ್ತರಾಗಬೇಕೆಂದು ಅವರು ಹೇಳಿದರು.

ಗಣಪತಿಯನ್ನು ಬಿಡಲು ಹೋದಾಗ ಮರಣ

ಬೆಂಗಳೂರಿನಲ್ಲಿ ಗಣಪತಿಯನ್ನು ಸಮುದ್ರದಲ್ಲಿ ಬಿಡಲು ಒಂದು ದೋಣಿಯಲ್ಲಿ ಜನರು ಹೋದಾಗ ದೋಣಿಯು ಮಗುಚಿ ೭ ಜನರು ನೀರಿನ ಪಾಲಾದರೆಂದು ತಿಳಿದುಬಂದಿದೆ.

ಭಾರತ ಪಾಕ್‌ಗಳೇ ಕಾಶ್ಮೀರ ಪ್ರಶ್ನೆಯನ್ನು ಬಗೆಹರಿಸಬೇಕು

ಕಾಶ್ಮೀರ ವಿವಾದವನ್ನು ಬಗೆಹರಿಸಲು ಎಲ್ಲಾ ಮಾರ್ಗಗಳೂ ವ್ಯರ್ಥವಾದುದರಿಂದ ಈಗ ಭಾರತ ಪಾಕಿಸ್ತಾನಗಳೇ ಪರಸ್ಪರ ತೀರ್ಮಾನಿಸಿಕೊಳ್ಳಬೇಕೆಂಬುದಾಗಿ ಮಧ್ಯಸ್ಥಿಕೆಗಾರರಾದ ಓವೆನ್ ಡಿಕ್ಸನ್ ರು ಭದ್ರತಾ ಸಮಿತಿಗೆ ತಮ್ಮ ವರದಿಯಲ್ಲಿ ತಿಳಿಸಿದ್ದಾರೆ.

ಅಸ್ಸಾಂ ನಿಧಿಗೆ ಸಹಾಯ

ಅಸ್ಸಾಂ ಪರಿಹಾರ ನಿಧಿಗೆ ರಾಜಧಾನಿಯ ದೇವರಾಜ ಮಾರ್ಕೆಟ್ಟಿನಲ್ಲಿರುವ ಅಂಗಡಿ, ಹಣ್ಣಿನ ಅಂಗಡಿ ಮತ್ತು ಇತರ ಅಂಗಡಿಗಳವರು ಒಟ್ಟು ೭೫೦ ರೂ. ಮತ್ತು ... ಲಕ್ಷ್ಮೀಪ್ರಸಾದ ಕಾಫಿ ... ಮತ್ತು ಶ್ರೀ ಟಿ. ಸಿ. ಗೌಡ ಮೊದಲಾದವರು ... ರೂ. ಜಮಾ ಆಗಿದೆ.

ಸಂಗೀತ ಕಛೇರಿ

ರಾಜಧಾನಿಯ ಶ್ರೀ ವರಲಕ್ಷ್ಮೀ ... ವಿದ್ಯಾ ... ದಿಂದ ಕೃಷ್ಣಮೂರ್ತಿಪುರಂ ... ಶ್ರೀ ವಿದ್ಯಾ ಗಣಪತಿ ಮಹೋತ್ಸವದ ಅಂಗವಾಗಿ ಈ ಸಂಜೆ ೬॥ ಘಂಟೆಗೆ ೯॥ ವರೆಗೆ ಸ್ವಾಮೀ ವೆಂಕಟೇಶ ... ಹಾಡುಗಾರಿಕೆ ... ಸೂಕ್ತ ಪಕ್ಕ ವಾದ್ಯಗಳೊಡನೆ ನಡೆಯಲಿರುವುದು.

ವೈಯಾಲಿ ಕಾವಲ್ ಸುಬ್ರಹ್ಮಣ್ಯ ರಸ್ತೆಯಲ್ಲಿನ ಮಹಾತ್ಮಾ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಈ ರಾತ್ರಿ ೮॥ ಗಂಟೆಗೆ ೯॥ ವರೆಗೆ ಶ್ರೀ ಬಿ. ಎಸ್. ರಾಮಸ್ವಾಮಿಯವರ ಸಂಗೀತವನ್ನು ೮। ವಿ॥ ಬಿ. ಶಿವಪುತ್ರಪ್ಪನವರ ಪಿಟೀಲು ಮತ್ತು ವಿದ್ವಾನ್ ಗೋಪಾಲರಾಯರ ಮೃದಂಗದೊಡನೆ ಏರ್ಪಡಿಸಿದೆ. ಸರ್ವರಿಗೂ ಸ್ವಾಗತವಿದೆ.

ಅಸ್ಸಾಂ ಪರಿಹಾರ ನಿಧಿಗೆ ಸಹಾಯ ಮಾಡಿರಿ

ಮೈಸೂರು ನಾಗರಿಕರಲ್ಲಿ ವಿಜ್ಞಾಪನೆ

ಈಚೆಗೆ ಅಸ್ಸಾಂ ದೇಶದಲ್ಲಿ ಸಂಭವಿಸಿದ ಭೂಕಂಪದ ಪರಿಣಾಮವಾಗಿ ಅಲ್ಲಿನ ನಿವಾಸಿಗಳಿಗೆ ಉಂಟಾಗಿರುವ ಅಪಾರವಾದ ಕಷ್ಟನಷ್ಟಗಳು ಮಹಾಜನಗಳೆಲ್ಲರಿಗೂ ತಿಳಿದ ವಿಷಯವಾಗಿರುತ್ತೆ. ಭಾರತದ ಪ್ರಧಾನ ಸಚಿವರಾದ ಪಂಡಿತ ನೆಹರೂರವರೂ, ಮೈಸೂರು ಸಂಸ್ಥಾನದ ಮುಖ್ಯ ಮಂತ್ರಿಗಳೂ ಅಸ್ಸಾಂನಲ್ಲಿ ನಷ್ಟ ಹೊಂದಿದ ಪ್ರಜೆಗಳಿಗೆ ನೆರವನ್ನು ನೀಡುವ ವಿಚಾರದಲ್ಲಿ ಮನವಿ ಮಾಡಿರುವುದೂ ಸಕಲ ಮಹಾಜನರಿಗೆ ವೇದ್ಯವಾಗಿದೆ. ಮೈಸೂರು ನಗರದಿಂದಲೂ ಸಹ ಅಸ್ಸಾಂ ಸಹಾಯ ನಿಧಿಗೆ ಆದಷ್ಟು ದ್ರವ್ಯ ವಗೈರೆಗಳನ್ನು ಶೇಖರಿಸಲು ಕಾರ್ಯಕ್ರಮವನ್ನು ಕೈಕೊಳ್ಳುವ ಬಗ್ಗೆ ೧೭-೯-೫೦ರಲ್ಲಿ ಪುರಸಭಾ ಭವನದಲ್ಲಿ ನಡೆದ ಪುರಪ್ರಮುಖರ ಸಭೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ. ಸಮಿತಿಯವರು ಪರಿಹಾರ ನಿಧಿಗೆ ಶೇಖರಣೆಗೆ ಬೇಕಾದ ಕಾರ್ಯಕ್ರಮಗಳನ್ನು ಶೀಘ್ರದಲ್ಲೇ ಕೈಗೊಳ್ಳುವವರಾಗಿದ್ದಾರೆ.

ಮೈಸೂರು ನಗರದ ಮಹಾಜನಗಳು ಸಮಿತಿಯವರಿಗೆ ಬೆಂಬಲ ಕೊಟ್ಟು ಮೈಸೂರು ನಗರದಿಂದ ಆದಷ್ಟು ದ್ರವ್ಯ ಶೇಖರಣೆಗೆ ಸಹಾಯ ಮಾಡಿ ಅಸ್ಸಾಂ ಪ್ರಾಂತ್ಯದ ಜನರ ಕಷ್ಟ ದುಃಖಗಳನ್ನು ಪರಿಹರಿಸುವ ಪವಿತ್ರ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಪ್ರಾರ್ಥಿಸುತ್ತೇನೆ.

ಎಸ್. ಲಿಂಗಣ್ಣ,
ಪೌರಸಭಾಧ್ಯಕ್ಷ

ಗಾಂಧೀಜಿಯವರ ಸ್ವರಾಜ್ಯದ ಧ್ಯೇಯಕ್ಕಾಗಿ ದುಡಿಯಿರಿ

ಕಾಂಗ್ರೆಸ್ಸಿನವರಿಗೆ ಬೊಂಬಾಯಿ ಮುಖ್ಯ ಮಂತ್ರಿಯವರ ಮನವಿ

ಗಾಂಧೀಜಿಯವರ ಸ್ವರಾಜ್ಯ ಕಲ್ಪನೆಯು, ಕೋಮು ಸೌಹಾರ್ದ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿರೋಧ, ಗ್ರಾಮ ಕೈಗಾರಿಕೆಗಳು, ಮೂಲ ಶಿಕ್ಷಣ, ರಾಷ್ಟ್ರಭಾಷೆಯ ಪ್ರಚಾರ, ಆರ್ಥಿಕ ಸಮಾನತೆ ಮತ್ತು ಆದಿವಾಸಿಗಳ ಸೇವೆಯೇ ಮುಂತಾದ ಯೋಜನೆಗಳಿಂದ ನಿರೂಪಿಸಲ್ಪಟ್ಟಿದೆ. ಇದು ಸ್ವಯಂ ಪರಿಪೂರ್ಣವಾದ ಕಾರ್ಯಕ್ರಮ. ಇದನ್ನು ಪರಸ್ಪರ ಸೌಹಾರ್ದ, ನಂಬಿಕೆಗಳಿಂದಲೂ ಮತ್ತು ಎಲ್ಲಾ ಕೋಮಿನವರ ಸಹಕಾರದಿಂದಲೂ ಪರಿಣಾಮಕಾರಿಯನ್ನಾಗಿ ಮಾಡಿದರೆ ನಿಜವಾದ ಸ್ವರಾಜ್ಯವು ಸ್ಥಾಪಿಸಲ್ಪಡುತ್ತದೆ ಮತ್ತು ಭಾರತವು ಮಾನವ ಜನಾಂಗದ ಅಭಿವೃದ್ಧಿಗಾಗಿ ಸೇವೆಯನ್ನು ಮಾಡಲು ಶಕ್ತಿಯುಳ್ಳದ್ದಾಗುವುದು. ಸರ್ವೋದಯ ತತ್ವವನ್ನು ಕಾಂಗ್ರೆಸ್ ನಾಯಕರು ದೇಶದ ಮುಂದಿಟ್ಟು ಆದರ್ಶಕ್ಕಾಗಿ ದುಡಿಯುವರೆಂದು ನಾನು ಆಶಿಸುತ್ತೇನೆ—ಎಂಬುದಾಗಿ ಬೊಂಬಾಯಿನ ಮುಖ್ಯ ಮಂತ್ರಿ ಶ್ರೀ ಬಿ. ಜಿ. ಖೇರರು ನಾಸಿಕ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿ ಕೊಟ್ಟಿರುವ ಸಂದೇಶದಲ್ಲಿ ತಿಳಿಸಿರುತ್ತಾರೆ.

SRI GAYATHRI

TALKIES

From 21—9—50

Daily 3 Shows

SAVAGE SPLENDOUR

(In Technicolor)

– Morning Shows –

On 22nd Sept 50

Magnificent Doll

On Sat the 23rd & Sun 24th

CASBAH

ಪಶ್ಚಿಮ ಜರ್ಮನಿಗೆ ತ್ರಿ ರಾಷ್ಟ್ರಗಳ ಭರವಸೆ

ಪಶ್ಚಿಮ ಜರ್ಮನಿ ಅಥವಾ ಬರ್ಲಿನ್ ನಗರದ ಮೇಲೆ ಯಾವ ಭಾಗದಿಂದಲಾದರೂ ಆಕ್ರಮಣ ಕಾರ್ಯವು ನಡೆದರೆ, ಅದು ತನ್ನ ರಾಷ್ಟ್ರಗಳ ಮೇಲೆ ನಡೆದ ಆಕ್ರಮಣವೆಂದು ಭಾವಿಸುವುದಾಗಿ ಬ್ರಿಟನ್, ಅಮೆರಿಕ ಮತ್ತು ಫ್ರಾನ್ಸಿನ ವಿದೇಶಾಂಗ ಮಂತ್ರಿಗಳು ಪಶ್ಚಿಮ ಜರ್ಮನಿ ಸರ್ಕಾರಕ್ಕೆ ಭರವಸೆಯಿತ್ತಿರುವರು.

ಯಂತ್ರ ಸಾಮಗ್ರಿ ಕಾರ್ಖಾನೆ

ಬೆಂಗಳೂರಿನ ಬಳಿ ೩೫೦ ಎಕರೆ ಪ್ರದೇಶದಲ್ಲಿ ಯಂತ್ರ ಸಾಮಗ್ರಿಗಳನ್ನು ತಯಾರಿಸುವ ಕಾರ್ಖಾನೆಯನ್ನು ಇನ್ನು ಆರು ತಿಂಗಳಲ್ಲಿ ಸ್ಥಾಪಿಸಲಾಗುವುದೆಂದು ತಿಳಿದುಬಂದಿದೆ.

ಮೈಸೂರು
ವಿಶ್ವವಿದ್ಯಾಲಯ,
ಮೈಸೂರ

ನಂ. [illegible]

[illegible]

ನೋಟಿಫಿಕೇಷನ್

೧೯೫೦ರ ಪದವೀದಾನ ಸಮಾರಂಭ

ಪದವೀದಾನ ಸಮಾರಂಭಕ್ಕೆ ಖುದ್ದಾಗಿ ಯಾಗಲಿ ಅಥವಾ ಗೈರುಹಾಜರಿಯಲ್ಲಾಗಲೀ ಪ್ರವೇಶ ಮಾಡಬಿಚ್ಛಿಸುವ ವಿದ್ಯಾರ್ಥಿಗಳ ಅರ್ಜಿಗಳನ್ನು ಕಳೆದ ಪರೀಕ್ಷೆಯಲ್ಲಿ ಯಾವ ಕಾಲೇಜ್ ಮುಖಾಂತರ ಕುಳಿತಿದ್ದರೋ ಅಲ್ಲಿಂದಲೇ ಪಡೆಯಬಹುದು.

ಈ ಕಾರ್ಯಕ್ಕಾಗಿ [illegible] ಬೆಲೆಯ ಅಂಚೆಯ [illegible] ವಿಳಾಸ ಬರೆದ ಲಕೋಟೆಯು ಕವರ್ ಆಗಲಿ ಕಳುಹಿಸುವುದು.

ಪದವೀದಾನ ಸಮಾರಂಭದ ತಾರೀಖನ್ನು ಮುಂದೆ ತಿಳಿಸಲಾಗುವುದು. ಇದು ೧೯೫೦ನೇ ಅಕ್ಟೋಬರ್ [illegible] ನಂತರ [illegible]ವುದು.

ಪದವೀದಾನ ಸಮಾರಂಭದ ಪ್ರವೇಶದ ಸಲುವಾಗಿ ಹಾಕುವ ಅರ್ಜಿಗಳು ೧೯೫೦ನೇ ಸೆಪ್ಟೆಂಬರ್ [illegible]ರ ಶನಿವಾರದೊಳಗಾಗಿ, ಮೈಸೂರಿನಲ್ಲಿರುವ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್‌ರವರಿಗೆ ತಲುಪುವಂತೆ ಕಳುಹಿಸುವುದು.

ಕೆ. ರಂಗಾಚಾರ್,
ಆಫೀಸಿಂಗ್ ರಿಜಿಸ್ಟ್ರಾರ್

ಬಿಹಾರಿನಲ್ಲಿ ಹಸಿದ ಜನರ ಯಾತ್ರೆ

ಬಿಹಾರಿನ ಸಂತಾಲ ಪರಗಣ ಜಿಲ್ಲೆಯಲ್ಲಿ ಆಹಾರ ಪರಿಸ್ಥಿತಿಯು ಕಠಿಣವಾಗಿ, ಹಸಿದ ಜನರ ತಂಡಗಳು ಅಲ್ಲಿ ಕಾಂಗ್ರೆಸ್ ಸಮಿತಿ ಕಛೇರಿಗೆ ಯಾತ್ರೆ ಮಾಡಿ ಆಹಾರ ಮತ್ತು ಪರಿಹಾರವನ್ನು ಕೋರುವ ದೃಶ್ಯಗಳು ಕಾಣಬರುತ್ತಿವೆ. ಕೂಡಲೇ ಪರಿಹಾರವನ್ನು ಜನರಿಗೆ ಕಲ್ಪಿಸಬೇಕೆಂದು ಅಲ್ಲಿಯ ಕಾಂಗ್ರೆಸ್ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ರಾಜಕಮಲ್,
ಮೈಸೂರು

ಬಕ್ರೀದ್ ಹಬ್ಬಕ್ಕಾಗಿ ಸ್ಪೆಷಲ್ ಪ್ರೋಗ್ರಾಂ

-:ಬೆಳಗಿನ ಪ್ರದರ್ಶನಗಳು:-

22-9-50ರಿಂದ 4 ದಿನಗಳು ಮಾತ್ರ

ಮಿನರ್ವ ಮೂವಿಟೋನ್‌ರವರ ಹಿಂದಿ ಚಿತ್ರ

- ಸಿಕಂದರ್ -

ಭೂಮಿಕೆ: ಸೊಹರಾಬ್ ಮೋದಿ, ಪೃಥ್ವಿರಾಜ್, ಮೀನಾ

ಒಲಿಂಪಿಯಾ

ಬಕ್ರೀದ್ ಹಬ್ಬದ ಸ್ಪೆಷಲ್ ಪ್ರೋಗ್ರಾಂ

22-9-50ರಿಂದ ಪ್ರತಿ ದಿನ 3 ಆಟಗಳು

ವಾರ್ನರ್ ಬ್ರದರ್ಸ್‌ರವರ

ಅಂಜುಮನ್

ಚಿತ್ರ ನರ್ಗೀಸ್ [illegible], ದ [illegible]

— ಬೆಳಗಿನ ಪ್ರದರ್ಶನ —

22 9 50ರಿಂದ 4 ದಿನಗಳು ಮಾತ್ರ

ಮಿಂಚೋಲಿ[illegible]ವರ

ಖಾನ್‌ದಾನಿ

ಪಾತ್ರ: ನೂರ್‌ಜಹಾನ್ ಮುಹೋದಿ[illegible]

Edited printed and published by A R Nagarajan, at Sadhvi Press D Subbiah Road, Mysore

---

ವುಡ್‌ಲ್ಯಾಂಡ್ಸ್

22-9-50ರಿಂದ ಅಮೋಘ 3ನೇ ವಾರ

* ನಮೂನ *

ಪಾತ್ರ — ಕಾಮಿನಿ ಕೌಶಲ್, ದಿಲೀಪ್ ಕುಮಾರ್, ಕುಕ್ಕೂ, ಲೀಲಾ ಚಿಟ್ನೀಸ್, ವೇದಾನಂದ

ಸಂಗೀತ – ಸಿ. ರಾಮಚಂದ್ರ

ಎಸ್. ಎಸ್ [illegible]

ರಾಜಕಮಲ್ ಮತ್ತು ಗಣೇಶಾ
ಟಾಕೀಸುಗಳಲ್ಲಿ

ಸಧ್ಯದಲ್ಲೇ ಪ್ರದರ್ಶನಕ್ಕೆ ಬರಲಿದೆ

ಪ್ರತಿ ದಿನ ೪ ಆಟಗಳು

ಚಂದ್ರಿಕ

(ತಮಿಳು)

ಭೂಮಿಕೆ.–
‡ ಜಾನಕಿ,
‡ ಲಲಿತಾ–ಪದ್ಮಿನಿ
‡ ಸಾರಂಗಪಾಣಿ,
‡ ಬಾಲಯ್ಯ
ಮುಂತಾದ ಚಿತ್ರಗಳಲ್ಲೆಲ್ಲಾ ಅತ್ಯುತ್ಕೃಷ್ಟ
ಚಿತ್ರ

[R V Pictures Release

ರಾಜಕಮಲ್ ಟಾಕೀಸಿನಲ್ಲಿ :: ಈ ರಾತ್ರಿ ಶಕುಂತಲಮ್ಮ (ಹಿಂದಿ)

ಪ್ರಭಾ

ಬಕ್ರೀದ್ ಹಬ್ಬದ ಪ್ರಯುಕ್ತ ಸ್ಪೆಷಲ್ ಪ್ರೋಗ್ರಾಂ

22-9-50ರಿಂದ ಅಮೋಘ ಪ್ರಾರಂಭ ಪ್ರತಿದಿನ 3 ಆಟಗಳು



ಎ. ಆರ್. ಕಾರ್ದಾರ್ ಹಿಂದಿ ಚಿತ್ರ

- ಆರ್ ಪಾರ್ -

ಪಾತ್ರ ದಿಲೀಪ್ ಕುಮಾರ್, ಶಾಮ, ನೌಶಾದ್, [illegible]

ಸಂಗೀತ ಅನಿಲ್ ಬಿಸ್ವಾಸ್

ದಿಗ್ದರ್ಶನ–ಕರೀಂ [illegible] (ಜದಿ [illegible])

ರಣಜಿತ್ -

22-9 50 ರಿಂದ ದಿನವೂ 3 ಪ್ರದರ್ಶನ

ಬಕ್ರೀದ್ ಹಬ್ಬದ ಪ್ರಯುಕ್ತ ಸ್ಪೆಷಲ್ ಪ್ರೋಗ್ರಾಂ

ನಾದಿಯಾ, ಚಲೋರ್ ಕುಮಾರ್ ಮೊದಲನೆಯವರು ಬೀರಿ ಒಟ್ಟಿಗೆ ಪಾತ್ರವಹಿಸಿರುವ

ಸುಂದರ ಮನೋರಂಜನ ಹಿಂದಿ ಚಿತ್ರ

ಕಿಲಾಡಿ KHILARI

ಬೆಳಗಿನ ಪ್ರದರ್ಶನ 22-9-50ರಿಂದ 3 ದಿನ ಮಾತ್ರ

ಮೈಸೂರು ಸಾಬು ನಟಿಸಿರುವ ಮನೋರಂಜಕ ಹಿಂದಿ ಚಿತ್ರ - ಬಾಗ್‌ದಾದ್-ಕ-ಚೋರ್

ಫೋನ್ ನಂ 792 ||ವಂದೇ ಮಾತರಂ|| ಬಿಡಿ ಪ್ರತಿ ೩ ಕಾಸು

ಸಾಧ್ವಿ

ಸಂಪುಟ ೯] ಶುಕ್ರವಾರ ೨೨-೯-೫೦ [ಸಂಚಿಕೆ ೫೧

ನೆಹರೂರವರಿಗೆ ಅಮೆರಿಕದ ಎಚ್ಚರಿಕೆ?

ಗೂಡ್ಸ್ ರೈಲಿಗೆ ತಡಸ್ಪರ್ಶ

ಮೈಸೂರು ೨೨

ನೆನ್ನೆ ಬೆಳಿಗ್ಗೆ ಮೈಸೂರಿನಿಂದ ಬೆಂಗಳೂರಿಗೆ ಹೊರಟ ಗೂಡ್ಸ್ ರೈಲು ಮಧ್ಯಾಹ್ನ ರಾಮನಗರ ಸ್ಟೇಷನ್ನಿನಲ್ಲಿ ಇಂಜಿನ್ನು ತಪ್ಪಿತ ಪ್ರಯುಕ್ತ ೩ ವ್ಯಾಗನ್ನುಗಳು ಕಳಚಿ ಉರುಳಿದವು. ಇಂಜಿನ್ನಿಗಾಗಲೀ ಅಥವಾ ಬೇರೆ ಯಾರಿಗಾಗಲೀ ಯಾವ ಅಪಾಯವೂ ಉಂಟಾಗಲಿಲ್ಲ.

ನೆನ್ನೆ ಮಧ್ಯಾಹ್ನ ಮೈಸೂರಿನಿಂದ ಬೆಂಗಳೂರಿಗೆ ಹೊರಟ ಮೇಲ್ ಗಾಡಿಯು ಪ್ರಯಾಣಿಕರನ್ನು ಸಂಪಾದನೆಗನುಸಾರ ಟ್ರಾನ್ಸ್‌ಮೆಂಟ್ ಮೂಲಕ ಬೆಂಗಳೂರಿಗೆ ರಾತ್ರಿ ೧೧ ಗಂಟೆಗೆ ತಲುಪಿಸಲಾಯಿತು.

ನಿನ್ನೆ ರಾತ್ರಿ ಬೆಂಗಳೂರಿನಿಂದ ಮೈಸೂರಿಗೆ ಹೊರಟ ಪ್ಯಾಸೆಂಜರ್ ರೈಲು ಗಾಡಿಯು ರಾತ್ರಿಯೆಲ್ಲಾ ರಾಮನಗರದಲ್ಲೇ ತಂಗಿದ್ದು ಈ ಬೆಳಿಗ್ಗೆ ಹೊರಟು ೧೧ ಗಂಟೆಗೆ ಮೈಸೂರನ್ನು ತಲುಪಿತು.

ಭಾಗಶಃ ಹೊತ್ತಿಗೆ ಸಂಚಾರ ಮಾರ್ಗಗಳನ್ನೆಲ್ಲಾ ಸರಿಪಡಿಸಲಾಯಿತು.

ಅಷ್ಟಾಂಗ ಚಿಕಿತ್ಸೆ ಪ್ರದರ್ಶನ

ರಾಜಧಾನಿಯ ಜೀವನಾಶ ಮಾಡೇಷ್ಟನ ಅವರ ಮತ್ತು ಇತರ ಅಂಗಡಿಗಳ ವ್ಯಾಪಾರಿಗಳು, ಆಸ್ಪತ್ರೆಯ ಧನಿಕರು ... ವಿಧಿಗೆ ಒಟ್ಟು ೨೦೦ ರೂ ಗಳನ್ನೂ, ... ಗಡಿಯಾರ ಮತ್ತು ... ಎಲ್ಲಾ ಗಿರಣಿ ... ಒಟ್ಟು ೭೫ ರೂ ಗಳನ್ನೂ ಮತ್ತು ಶಿವರಾಂ ಶೇಠ್ ಕಡಲೆ ಅಂಗಡಿ ಮಾಲೀಕರಾದ ಶ್ರೀ ಎ ಎಸ್. ರಂಗ ಶೆಟ್ಟಿಯಾರ್ ರವರು ೫೧ ರೂ ಗಳನ್ನೂ ಸಹಾಯ ಮಾಡಿರುತ್ತಾರೆ.

ಗಣಪತಿ ಮಂಗಳಾರತಿ

ಮೈಸೂರು ಹಾಮರಾಜ ಪ್ರೈಮರಿ ಬಾಯ್ಸ್ ಸ್ಕೂಲಿನವರು ತಮ್ಮ ಶಾಲೆಯನ್ನು ತಳಿರು ತೋರಣಗಳಿಂದ ಅಲಂಕರಿಸಿ ಅನೇಕ ಶಾಲೆಗಳ ಉಪಾಧ್ಯಾಯರುಗಳನ್ನು ಬರಮಾಡಿಕೊಂಡು ನೆನ್ನೆ ದಿನ ಗಣಪತಿ ಮಂಗಳಾರತಿಯನ್ನು ಮುನಿಸಿಪಲ್ ಕೌನ್ಸಿಲರ್ ಶ್ರೀ ಬಿ ಕೆ. ... ರವರ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಸಿ ... ಮಕ್ಕಳಿಗೆ ಸಿಹಿ ತಿಂಡಿ ಹಂಚಿದರು. ರಾಷ್ಟ್ರಗೀತೆಯೊಡನೆ ಸಭೆ ಮುಗಿಯಿತು.

ಆಹಾರ ಪರಿಶೀಲನಾ ಸಮಿತಿಗಳ ರಚನೆ

ಜನರಿಗೆ ಒಳ್ಳೆಯ ಆಹಾರವನ್ನು ಸರಬರಾಜು ಮಾಡುವ ಸಲುವಾಗಿ ನಗರದಲ್ಲಿರುವ ಎಲ್ಲ ಹೋಟೆಲು ಮತ್ತು ಭೋಜನ ಗೃಹಗಳಲ್ಲಿನ ಆಹಾರದ ಗುಣವನ್ನು ಪರೀಕ್ಷಿಸುವ ಬಗ್ಗೆ ಸಮಿತಿಗಳನ್ನು ರಚಿಸಲು ನಗರಸಭೆಯವರು ಏರ್ಪಾಡು ಮಾಡಿರುತ್ತಾರೆ. ಆಹಾರ ಪದಾರ್ಥಗಳಲ್ಲಿ ... ಲೋಪ ದೋಷಗಳ ಬಗ್ಗೆ ಸಭೆಯ ಸಮಿತಿಯವರು ... ಅವರು ಪರಿಶೀಲಿಸಿ ... ಕ್ರಮ ಕೈಗೊಳ್ಳುವರೆಂದು ತಿಳಿದುಬಂದಿದೆ ... ಮತ್ತು ... ಮುಂತಾದವುಗಳಿಗೆ ... ಚಿಕಿತ್ಸೆ ಮಾಡುವರು.

ಕಾಂಗ್ರೆಸ್ಸಿನ ಎಲ್ಲ ಅಧಿಕೃತ ನಿರ್ಣಯಗಳಿಗೂ ಒಪ್ಪಿಗೆ

ಅಧ್ಯಕ್ಷರ ಮುಕ್ತಾಯ ಭಾಷಣ

[ನಮ್ಮ ವಿಶೇಷ ವರದಿಗಾರರಿಂದ ತಂತಿ]

ನಾಸಿಕ್ ೨೧

ಕಾಂಗ್ರೆಸ್ಸಿನ ಅಧಿವೇಶನದಲ್ಲಿ ವಿಷಯ ನಿರ್ಧಾರಕ ಸಮಿತಿಯಿಂದ ಬಂದಿದ್ದ ಎಲ್ಲ ನಿರ್ಣಯಗಳೂ ಅಂಗೀಕೃತವಾದುವು. ಕಾಂಗ್ರೆಸ್ಸಿನ ಅಂಗ ರಚನೆಯಲ್ಲಿ ತಿದ್ದುಪಡಿ ಮಾಡಿ ... ಸದಸ್ಯತ್ವವನ್ನು ... ಅವಕಾಶ ಕಲ್ಪಿಸುವ ನಿರ್ಣಯಕ್ಕೆ ತಿದ್ದುಪಡಿಯನ್ನು ಮೈಸೂರಿನ ಶ್ರೀ ... ಸ್ವಾಮಿ ... ಸೂಚಿಸಿ, ... ಸದಸ್ಯತ್ವವನ್ನು ... ಕೊಡಬೇಕೆಂದು ಪ್ರಾರ್ಥಿಸಿ, ... ಹಿಂತೆಗೆದುಕೊಂಡರು.

ಭಾರಿ ಮಳೆಯು ಬಂದುದರಿಂದ ಬಟ್ಟರಂಗ ಅಧಿವೇಶನದ ಕಾರ್ಯಕ್ರಮಕ್ಕೆ ಪದೇ ಪದೇ ಅಡಚಣೆಯಾಗುತ್ತಿತ್ತು. ... ತೆಗೆದುಹಾಕಬೇಕೆಂದು ಪ್ರತಿನಿಧಿಗಳಲ್ಲೊಬ್ಬರಾದ ... ರವರು ... ಮೇಲೆ ... ಕೊಂಡಾಗ ... ಮುಂತಾದವು ... ಅಧಿವೇಶನಕ್ಕೆ ... ವಿರೋಧಿಗಳ ... ಪ್ರವೇಶಿಸಿ, ... ವೆಂಕಟರಾವ್, ಗಾಡ್ಗಿಲ್ ಮತ್ತು ಅಧ್ಯಕ್ಷರ ಸಹಾಯದಿಂದ ಪ್ರತಿನಿಧಿಗಳ ... ಪ್ರಯತ್ನದಲ್ಲಿ ... ಎ ... ಪ್ರತಿನಿಧಿಗಳೂ ... ತಿದ್ದುಪಡಿಗೆ ೧೧೭, ವಿರೋಧವಾಗಿ ೧೯೦ ಮತಗಳೂ ಕೊಡಲ್ಪಟ್ಟವು.

ಅಧ್ಯಕ್ಷರು ಮುಕ್ತಾಯ ಭಾಷಣ ಮಾಡಿ ಕಾಂಗ್ರೆಸ್ಸಿನಲ್ಲಿ ಒಡಕುಂಟಾಗುವುದೆಂದು ಭಾವಿಸಿದ್ದವರು ಈಗ ಎಚ್ಚರಗೊಳ್ಳಬೇಕೆಂದು ತಿಳಿಸಿ, ದೇಶವು ಕಾಂಗ್ರೆಸ್ಸಿಗೆ ಪೂರ್ಣ ಬೆಂಬಲವನ್ನು ಕೊಡಬೇಕೆಂದು ಕೋರಿದರು. ಕಾಂಗ್ರೆಸ್ಸಿನ ಕಾರ್ಯಕರ್ತರು ಸಂಸ್ಥೆಯ ಪುನಶ್ಚೇತನದಲ್ಲಿ ತೊಡಗಬೇಕೆಂದು ಪ್ರಾರ್ಥಿಸಿದರು. ರಾತ್ರಿ ೧೧ ಗಂಟೆಗೆ ಅಧಿವೇಶನವು ಮುಕ್ತಾಯವಾಯಿತು.

ತರುಣಿಯರ ವ್ಯಾಪಾರದ ಪ್ರಯತ್ನಕ್ಕಾಗಿ ದಸ್ತಗಿರಿ

ಮೈಸೂರು ೨೨

ರಾಜಧಾನಿಯ ... ಗುಡಿ ಬೀದಿಯಲ್ಲಿರುವ ಕೃಷ್ಣಯ್ಯಂಗಾರ್ ಉರುಫ್ ಕೃಷ್ಣಮಾಚಾರ್ ಎಂಬುವರು ಹೆಚ್.ಡಿ.ಕೋಟೆ ತಾ|| ... ಹಳ್ಳಿಯ ... ನಂಜನಗೂಡು ತಾ|| ದೇವರಸನ ಹಳ್ಳಿಯ ... ಮತ್ತು ... ಎಂಬ ತರುಣಿಯರನ್ನು ಹೈದರಾಬಾದಿಗೆ ಕರೆದುಕೊಂಡು ಹೋಗಿ ವ್ಯಾಪಾರ ಮಾಡುವ ಸಲುವಾಗಿ ... ಕಾರಿನಲ್ಲಿ ... ತರುಣಿಯರನ್ನು ತನ್ನ ಹೆಂಡತಿಯೆಂದು ಹೇಳಲಾದ ಲಕ್ಷ್ಮೀದೇವಮ್ಮ ಉರುಫ್ ... ಎಂಬಾಕೆಯೊಡನೆ ಕರೆದುಕೊಂಡು ಹೋಗುವುದರಲ್ಲಿದ್ದಾಗ ... ಪೋಲೀಸರು ಅವರನ್ನು ದಸ್ತಗಿರಿ ಮಾಡಿರುವರು. ಅವರೊಡನೆ ಒಂದು ಮಗುವೂ ಇತ್ತು. ... ಕೃಷ್ಣಯ್ಯಂಗಾರ್ಯರು ಹಿಂದೆ ಇದೇ ರೀತಿಯ ಕೆಲಸಗಳನ್ನು ನಡೆಸಿದ್ದರೆಂದು ತಿಳಿದು ಬಂದಿದೆ. ಅವರ ಮೇಲೆ ಮೊಕದ್ದಮೆ ಹೂಡಲಾಗಿದೆ.

ಸಂಗೀತ ಕಛೇರಿ

ರಾಜಧಾನಿಯ ಶ್ರೀ ... ರಾಜರ ಸಂಸ್ಕೃತ ವೇದ ಪಾಠಶಾಲೆಯಲ್ಲಿ ನಡೆಯುತ್ತಿರುವ ಶ್ರೀ ಗಣಪತಿ ಉತ್ಸವದ ಸಂಬಂಧವಾಗಿ ನಾಳೆ ಸಂಜೆ ೬ ಘಂಟೆಗೆ ವಿ ... ಪುಟ್ಟಸ್ವಾಮಯ್ಯನವರ ಗಾಯನವು ವಿ॥ ... ಪಿಟೀಲು ಮತ್ತು ವಿ॥ ... ಮೃದಂಗದೊಡನೆ ನಡೆಯುವುದು.

ಕೊಲೆ ಅಪಾದನೆಯಿಂದ ಬಿಡುಗಡೆ

ನಂಜನಗೂಡು ತಾಲ್ಲೂಕು ... ಗ್ರಾಮದ ... ಎಂಬುವನು ತನ್ನ ಹೆಂಡತಿ ೧೬ ವರ್ಷದ ... ಎಂಬಾಕೆಯನ್ನು ಕೊಲೆ ಮಾಡಿದನೆಂಬ ಆಪಾದನೆ ಮೇಲೆ ನಂಜನಗೂಡಿನ ಸ್ಪೆಷಲ್ ಮ್ಯಾ॥ರು ಅವನನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಿದ್ದರ ಮೇಲೆ ವಿಚಾರಣೆ ನಡೆದು ಆಪಾದಿತನು ತಪ್ಪಿತಸ್ಥನಲ್ಲವೆಂದು ... ಮತ್ತು ... ನ್ಯಾಯಾಧೀಶರಾದ ಶ್ರೀ ... ಲಿಂಗಯ್ಯ ಗೌಡರವರು ಆತನನ್ನು ನೆನ್ನೆ ಬಿಡುಗಡೆ ಮಾಡಿರುತ್ತಾರೆ.

ವಿಮಾನ ಕಾರ್ಖಾನೆಯಲ್ಲಿ ಮುಷ್ಕರ

ಸ್ವಂ ವ ಫೋ॥] ಬೆಂಗಳೂರು ೨೨

ಹಿಂದೂಸ್ಥಾನ್ ವಿಮಾನ ಕಾರ್ಖಾನೆ ಕೆಲಸಗಾರರು ಮೊದಲೇ ನಿರ್ಧರಿಸಿದ್ದಂತೆ ನೆನ್ನೆ ಸಂಜೆ ೪ ಗಂಟೆಯಿಂದ ಕೆಲಸಕ್ಕೆ ಹೋಗದೆ ಮುಷ್ಕರ ಕೈಗೊಂಡಿರುವರು. ಕಾರ್ಖಾನೆಯು ಅದರಿಂದ ವರ್ಗದವರೂ ಒಂದು ಪ್ರಕಟಣೆಯನ್ನು ಹೊರಡಿಸಿ, ನೆನ್ನೆಯಿಂದ ಮುಂದೆ ಕೆಲಸ ... ಮುಷ್ಕರವಾಗಿದೆಯೆಂದು ತಿಳಿಸಿದ್ದಾರೆ. ಮುಷ್ಕರದ ಪರಿಸ್ಥಿತಿಯಿಂದ ಶಾಂತಿ ಭಂಗವಾಗುವ ಸಂಭವವಿರುವುದರಿಂದ ವಿಮಾನ ಕಾರ್ಖಾನೆ ಮತ್ತು ಅದರ ಸುತ್ತ ೩ ಮೈಲಿ ಪ್ರದೇಶದಲ್ಲಿ ೨ ತಿಂಗಳ ಕಾಲ ೫ ಅಥವಾ ಅದಕ್ಕೆ ಹೆಚ್ಚು ಜನ ಗುಂಪಿ ಸೇರಕೂಡದೆಂದೂ, ಸಭೆ ಮೆರವಣಿಗೆಗಳನ್ನು ನಡೆಸಬಾರದೆಂದೂ ನಿಷೇಧಾಜ್ಞೆ ಹೊರಡಿಸಲಾಗಿದೆ.

ಪಂಜಾಬಿನಲ್ಲಿ ೬೦ ಗಂಟೆಗಳ ಸತತ ಮಳೆ

ಪಂಜಾಬಿನಲ್ಲಿ ಕಳೆದ ಮೂರು ದಿನಗಳಿಂದ ಒಂದೇ ಸಮನಾಗಿ ಮಳೆ ಬಂದು ಅಲ್ಲಿನ ಪಂಚ ಮಹಾನದಿಗಳಲ್ಲೂ ಎಂದೂ ಕಂಡು ಕೇಳದಷ್ಟು ಎತ್ತರದ ಪ್ರವಾಹವು ಬರುತ್ತಿರುವುದಾಗಿ ವರದಿಯಾಗಿದೆ. ಇದರ ಪರಿಣಾಮವಾಗಿ ಲಾಹೋರಿನ ಉತ್ತರ ಭಾಗವು ಕೊಚ್ಚಿಕೊಂಡು ಹೋಗಿ ಸಾವಿರಾರು ಮನೆಗಳೂ ಬಿದ್ದುಹೋಗಿವೆಯೆಂದೂ, ... ಅಪಾರ ನಷ್ಟ ಉಂಟಾಗಿದೆಯೆಂದೂ ಗೊತ್ತಾಗಿದೆ. ಅಲ್ಲಿನ ವಿದ್ಯುಚ್ಛಕ್ತಿ ಸರಬರಾಜು ಕೇಂದ್ರಕ್ಕೂ ಅಪಾಯ ಸಂಭವಿಸಿದೆ. ಎಲ್ಲ ಸಂಚಾರ ಮಾರ್ಗಗಳೂ ಕತ್ತರಿಸಲ್ಪಟ್ಟು, ನಿರಾಶ್ರಿತ ಜನರಿಗೆ ವಿಮಾನಗಳ ಮೂಲಕ ಆಹಾರವನ್ನು ಸರಬರಾಜು ಮಾಡಲಾಗುತ್ತಿದೆ.

ಕೊರಿಯಾ ಬಗ್ಗೆ ನೆಹರೂರವರಿಗೆ ಅಮೆರಿಕದ ಎಚ್ಚರಿಕೆ?

ಕೊರಿಯದ ಬಗ್ಗೆ ಇನ್ನು ಮುಂದೆ ಯಾವ ಮಧ್ಯಸ್ಥಿಕೆಯನ್ನೂ ಭಾರತವು ಮಾಡಬಾರದೆಂದು ಅಮೆರಿಕಾ ಸರ್ಕಾರವು ತಮ್ಮ ಅವರ ... ನೆಹರೂರವರಿಗೆ ಎಚ್ಚರಿಕೆಯ ... ಕೊಟ್ಟಿರುವುದೆಂದು ಲಂಡನ್ನಿನ ಡೈಲಿ ಗ್ರಾಫಿಕ್ ಪತ್ರಿಕೆಯು ನೆನ್ನೆ ದಿನ ವರದಿ ಮಾಡಿರುವುದೆಂದು ಗೊತ್ತಾಗಿದೆ.

ಪ್ರದೋಷ ಸಂಗೀತ

ತಾ॥ ಬಿಡಾರು ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ನಾಳೆ ಶನಿವಾರ ಸಂಜೆ ಪ್ರದೋಷದ ಪ್ರಯುಕ್ತ ವಿದ್ವಾನ್ ಸೀತಾರಾಮ ... ರವರ ಸಂಗೀತವು, ... ವಾದ್ಯಗಳೊಡನೆ ನಡೆಯುವುದು. ಸರ್ವರಿಗೂ ಪ್ರವೇಶವುಂಟು.

ರಾಮಚಂದ್ರರಾವ್ ಸಿಂಧ್ಯೆಯವರ ನಿಧನ

ಬೆಂಗಳೂರಿನಗರ ... ಪ್ರಸಿದ್ಧ ವ್ಯಾಪಾರಿಗಳಾಗಿದ್ದ ಶ್ರೀ ... ರಾಮಚಂದ್ರರಾವ್ ಸಿಂಧ್ಯೆಯವರು ನೆನ್ನೆ ರಾತ್ರಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರು ಕೆಲವು ದಿನಗಳಿಂದಲೂ ಕಾಯಿಲೆಯಿಂದ ನರಳುತ್ತಿದ್ದರು. ಮೈಸೂರಿನಲ್ಲಿ ... ಶ್ರೀ ... ರಾವ್ ಸಿಂಧ್ಯೆಯವರು ಇವರ ಮಕ್ಕಳು.

ವೈಜಯಂತಿಮಾಲಳಿಗೆ ತಂದೆ ಯೇ ರಕ್ಷಕರಾಗಿರಬೇಕು

ಸಿನಿಮಾ ನಟಿ ವೈಜಯಂತಿಮಾಲಳು ಇನ್ನೂ ಮೈನರ್ ಆಗಿರುವುದರಿಂದ ಆಕೆಗೆ ತಂದೆಯು ರಕ್ಷಕರಾಗಿರುವುದನ್ನು (ಗಾರ್ಡಿಯನ್) ವಿರೋಧಿಸಿ, ಆಕೆಯ ತಾಯಿ ವಸುಂಧರಾದೇವಿಯವರು ಹಾಕಿದ್ದ ಅಪೀಲನ್ನು ಮದರಾಸಿನ ಹೈಕೋರ್ಟಿನವರು ತಿರಸ್ಕರಿಸಿದ್ದಾರೆ ಅಲ್ಲದೆ ಬೇರೊಬ್ಬರನ್ನು ರಕ್ಷಕರನ್ನಾಗಿ ನೇಮಿಸಬೇಕೆಂಬ ಜಸ್ಟಿಸ್ ಕೃಷ್ಣಸ್ವಾಮಿ ನಾಯ್ಡುರವರ ತೀರ್ಪಿನ ಮೇಲೆ ಆಕೆಯ ತಂದೆ ಎಂ. ಡಿ. ರಾಮನ್‌ರವರು ಹಾಕಿದ್ದ ಅಪೀಲನ್ನು ಅಂಗೀಕರಿಸಿದ್ದಾರೆ.

ಪಾಕಿಸ್ತಾನದಿಂದ ಭಾರತಕ್ಕೆ ೩೦ ಸಾವಿರ ಮಣ ಅಕ್ಕಿ

ಭಾರತದ ಬಂಗಾಳ ಜವಳಿ ಮಿಲ್ಲುಗಳಿಂದ ಪೂರ್ವ ಪಾಕಿಸ್ತಾನಕ್ಕೆ ೧೦ ಸಾವಿರ ಟನ್ನು ಕಲ್ಲಿದ್ದಲನ್ನು ಕಳುಹಿಸಿದಕ್ಕೆ ಪ್ರತಿಯಾಗಿ, ೩೦ ಸಾವಿರ ಮಣ ಅಕ್ಕಿಯನ್ನು ಅಲ್ಲಿಂದ ತರಿಸುವ ವ್ಯವಸ್ಥೆಯಾಗುತ್ತಿದೆ.

ಉಪನ್ಯಾಸ ಮಾಲೆ

ಸಾರ್ವಜನಿಕ ವಿಚಾರ ಸಂಸ್ಥೆಯ ಆಶ್ರಯದಲ್ಲಿ ನಾಳೆ ಶನಿವಾರ ಸಂಜೆ ೬ ಘಂಟೆಗೆ ರಂಗಧಾಮಯ್ಯ ಛತ್ರದ ಹಾಲಿನಲ್ಲಿ ಶ್ರೀ ಕೆ. ಪುಟ್ಟಸ್ವಾಮಯ್ಯನವರ ಅಧ್ಯಕ್ಷತೆಯಲ್ಲಿ ಭಾಷಾ ಸಮಸ್ಯೆಯ ಮೇಲೆ ಉಪನ್ಯಾಸಮಾಲೆಯನ್ನೇರ್ಪಡಿಸಿದೆ. ಶ್ರೀಗಳಾದ ಎ. ಸಿ. ದೇವೇಗೌಡ, ಟಿ. ಎನ್. ಕೃಷ್ಣರಾವ್, ಎಂ. ಎ. ದೊರೆಸ್ವಾಮಿ ಅಯ್ಯಂಗಾರ್ ಮತ್ತು ಎಸ್. ವಿ. ಶ್ರೀನಿವಾಸರಾವ್‌ರವರು ಭಾಷಣ ಮಾಡುತ್ತಾರೆ.

ಫಿಲ್ಮ್ ಫ್ಯಾನ್ಸ್ ಅಸೋಸಿಯೇಷನ್

ಮೇಲ್ಕಂಡ ಸಂಘದ ಸಭೆಯು ಮೊನ್ನೆ ನಡೆದು ಶ್ರೀಗಳಾದ ಎಸ್. ಎನ್. ಸ್ವಾಮಿ, ಎ. ಸಿ. ಸುಬ್ಬಯ್ಯ ಮತ್ತು ಕೆ. ಎಸ್. ಗಣೇಶರಾಯರನ್ನು ಅಧ್ಯಕ್ಷ, ಗೌರವ ಕಾರ್ಯದರ್ಶಿ, ಮತ್ತು ಗೌರವ ಖಜಾಂಚಿಗಳನ್ನಾಗಿ ಚುನಾಯಿಸಲಾಯಿತು.

ರಾಜಕಮಲ್,
ಮೈಸೂರು

ಬಕ್ರೀದ್ ಹಬ್ಬಕ್ಕಾಗಿ ಸ್ಪೆಷಲ್ ಪ್ರೋಗ್ರಾಂ

2-9-50ರಿಂದ ಅನೋಖ ಪ್ರಾರಂಭ

ಪ್ರತಿ ದಿನ 3 ಆಟಗಳು

ಶಾದೀಸೆ - ಪಹಲೆ
(ಮದುವೆಗೆ ಮೊದಲು)

ಎಂಬ ಮನೋಜ್ಞ ಸಾಮಾಜಿಕ ಮತ್ತು ವಿನೋದಭರಿತ ಹಿಂದೀ ಚಿತ್ರ

ಭೂಮಿಕೆ ಪ್ರಮಿಳಾ ನೇಸ್, ರಂಜನ್, ಕುಕುಂ, ದೇಶಪಾಂಡೆ, ಮಹಂತ ತೇಂಗಡೆ, ದೀಕ್ಷಿತ್

-:ಬೆಳಗಿನ ಪ್ರದರ್ಶನ:-

22-9-50ರಿಂದ 4 ದಿನಗಳು ಮಾತ್ರ

ಮಿನರ್ವಾ ಮೂವಿಟೋನ್‌ರವರ ಹಿಂದೀ ಚಿತ್ರ

- ಸಿಕಂದರ್ -

ಭೂಮಿಕೆ - ಸೊಹರಾಬ್ ಮೋದಿ, ಪೃಥ್ವಿರಾಜ್, ವನಮಾಲಾ

ದಹಲಿಗೆ ದಲೈ ಲಾಮನ ಸಹೋದರಿಯ ಆಗಮನ

ಕಾಲಿಂಪಾಂಗಿನಲ್ಲಿರುವ ಚೀನಾ ರಾಯಭಾರಿಯೊಡನೆ ಟಿಬೆಟ್ಟಿನ ಭವಿಷ್ಯದ ಬಗ್ಗೆ ಮಾತುಕತೆ ನಡೆಸುವ ಸಲುವಾಗಿ ಟಿಬೆಟ್ಟಿನ ದಲೈ ಲಾಮನ ಸಹೋದರಿ ಶ್ರೀಮತಿ ಯಾಂಗ್ಜೀ ಎಂಬುವರು ದೆಹಲಿಗೆ ಆಗಮಿಸಿರುವರೆಂದು ವರದಿಯಾಗಿದೆ.

"ಶುಭಾ" ವಾರ ಪತ್ರಿಕೆ

ಬೆಂಗಳೂರಿನ ಶ್ರೀ ಎಂ. ಸುಬ್ಬಾ ಶಾಸ್ತ್ರಿಯವರು ಮೊದಲಿಂದ ಹೊರಡಿಸುತ್ತಿದ್ದ ವಾರ ಪತ್ರಿಕೆಯನ್ನು ಕಳೆದ ಶುಕ್ರವಾರದಿಂದ ಹೊರಡಿಸುತ್ತಿದ್ದಾರೆ. ಪತ್ರಿಕೆಯು ಕುತೂಹಲಕರ ಸುದ್ದಿಗಳನ್ನು ಒಳಗೊಂಡು ಆಕರ್ಷಕವಾಗಿ ಮುದ್ರಿತವಾಗಿದೆ. ಅದರ ಚಿರಕಾಲ ಬಾಳಿಕೆಯನ್ನು ನಾವು ಹಾರೈಸುತ್ತೇವೆ. ಚಂದಾ ಬಿಡಿ ಪ್ರತಿ 0-1-0

ವಿದ್ಯಾ ಗಣಪತಿ ಮಹಾ ಸಂಗೀತಾರತಿ

ಮೈಸೂರು ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮಾ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಈ ಸಂಜೆ ೭ ಘಂಟೆಗೆ ಶ್ರೀ ರಾಜ್ಯಾಧ್ಯಕ್ಷರಾದ ಶ್ರೀ ಎಸ್. ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಶ್ರೀ ವಿದ್ಯಾ ಗಣಪತಿ ಮಹಾ ಸಂಗೀತಾರತಿಯನ್ನು ನೆರವೇರಿಸಲಾಗುವುದು. ಆಕರ್ಷಕ ಕಲಾವಿಧಿ ಮೇಳ ಪ್ರೋಗ್ರಾಮುಗಳು ಇರುತ್ತವೆ. ಹಾಸ್ಯಗಳು ಮತ್ತು ಜಂಬರ ಕ-ಕನ್ನಡ ವಾರ್ತಾ ಮಿತ್ರರಿಂದ ಉಪನ್ಯಾಸಗಳಿವೆ. ಮತ್ತು ಆಯಿಲ್ಸ್ ಬಿ. ವೀರೇಂದ್ರಪ್ಪನವರ ಸಂಗೀತವನ್ನು ಏರ್ಪಡಿಸಲಾಗಿದೆ.

ಅಸ್ಸಾಂ ನಿಧಿಗೆ ದ್ರವ್ಯ ಸಹಾಯ

ಮೈಸೂರು ಕರ್ನಾಟಕ ರೀಜನ್ ಸೋಷಿಯಲಿಸ್ಟ್ ಕಾರ್ಮಿಕ ಕಲಾವಿದರ ಸಂಘದವರು ಅಸ್ಸಾಮಿನಲ್ಲಿ ನೊಂದವರ ಸಹಾಯಾರ್ಥವಾಗಿ ೨೩೯-೯-೦ ಯನ್ನು ಕಳುಹಿಸಿದ್ದಾರೆ.

ರಣಜಿತ್ -
22-9-50 ರಿಂದ ದಿನಕ್ಕೆ 3 ಪ್ರದರ್ಶನ

ಬಕ್ರೀದ್ ಹಬ್ಬದ ಪ್ರಯುಕ್ತ ಸ್ಪೆಷಲ್ ಪ್ರೋಗ್ರಾಂ ಎಂದು ... ಕುಮಾರ್ ಮೊದಲನೆಯ ಬಾರಿ ಒಟ್ಟಿಗೆ ಪಾತ್ರವಹಿಸಿರುವ ಸುಂದರ ಮನರಂಜನ ಹಿಂದಿ ಚಿತ್ರ

ಕಿಲಾಡಿ KHILARI

ಬೆಳಗಿನ ಪ್ರದರ್ಶನ 22-9-50ರಿಂದ 3 ದಿನ ಮಾತ್ರ

ಮೈಸೂರು ಸಾಬು ನಟಿಸಿರುವ ಮನೋರಂಜಕ ಹಿಂದಿ ಚಿತ್ರ - ಬಾಗ್‌ದಾದ್-ಕ-ಚೋರ್

ಪ್ರಭಾ
ಬಕ್ರೀದ್ ಹಬ್ಬದ ಪ್ರಯುಕ್ತ ಸ್ಪೆಷಲ್ ಪ್ರೋಗ್ರಾಂ

22-9-50ರಿಂದ ಅನೋಖ ಪ್ರಾರಂಭ ಪ್ರತಿ ದಿನ 3 ಆಟಗಳು

ಪಿ. ಎನ್. ಟಿ. ರವರ ಹಿಂದಿ ಚಿತ್ರ

- ಆರ್ ಜೂ -

ಪಾತ್ರ: ದಿಲೀಪ್ ಕುಮಾರ್, ಕಾಮಿನಿ ಕೌಶಲ್, ಗೋಪ್, ಶಶಿಕಲಾ ಇತ್ಯಾದಿ.

ಸಂಗೀತ - ಅನಿಲ್ ಬಿಸ್ವಾಸ್

ದಿಗ್ದರ್ಶನ.-ಷಹೀದ್ ಲತೀಫ್ (ಚಿತ್ರ ನಿರ್ಮಾಪಕ)

ಪ್ರಭುದೇವಾ ಟಾಕೀಸ್
ದಿನವೂ 3 ಪ್ರದರ್ಶನಗಳು

24-9-50ನೇ :: ಭಾನುವಾರದಿಂದ

-:ಸ್ಟಾರ್ ಮಿನರ್ವಾ ರವರ:-

ದಾಸಿ ಅಪರಂಜಿ *

ಪಾತ್ರ:-ಎಂ. ಕೆ. ರಾಧಾ, ಪುಷ್ಪವಲ್ಲಿ, ಟಿ. ಆರ್. ರಾಮಚಂದ್ರನ್, ಕೊತ್ತಮಂಗಲಂ ಸುಬ್ಬು, ಸುಂದರಿಬಾಯಿ ಮುಂತಾದವರು

ಪತ್ರಿಕೆ ಗಾರರ, ವರದಿಗಾರರ ಸಂಘ

... ಸಂಘಟಕರು ೧೯ ... ಸಂಸ್ಥಾನದಲ್ಲಿರುವ ಪತ್ರಿಕೆ ಮತ್ತು ವರದಿಗಾರರ ಸಭೆಯು ಕಳೆದ ಭಾನುವಾರ ... ಶ್ರೀ ... ಮಂಜುನಾಥರವರ ಅಧ್ಯಕ್ಷತೆಯಲ್ಲಿ ನಡೆದು ... ಒಂದು ಸಂಘವನ್ನು ರಚಿಸಿಕೊಳ್ಳಲಾಯಿತು. ಸರ್ವಾನುಮತವಾಗಿ, ಶ್ರೀ ಟಿ. ಎನ್. ಅಂಕಪ್ಪ ... ರವರು ಅಧ್ಯಕ್ಷರಾಗಿಯೂ ಮತ್ತು ಶ್ರೀ ಟಿ. ಎನ್. ಸಂಜಪ್ಪ ಶೆಟ್ಟಿಯವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು. ಸಂಸ್ಥಾನದಲ್ಲಿ ಗ್ರಾಮ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವ ಸಲುವಾಗಿ ಸರಕಾರದ ಕೈಗಾರಿಕೆಯ ಮೋಟಾರು ವಾಹನಗಳ ... ತೆರಿಗೆಯನ್ನು ರದ್ದು ಮಾಡಬೇಕೆಂದು ಕೋರುವ ನಿರ್ಣಯವು ಅಂಗೀಕರಿಸಲ್ಪಟ್ಟಿತು.

ಅಸ್ಸಾಂ ಭೂಕಂಪ ನಿಧಿಗೆ

ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ, ಮುನಿಸಿಪಲ್ ಆಫೀಸ್, ಮೈಸೂರು

ವುಡ್‌ಲ್ಯಾಂಡ್ಸ್
22-9-50ರಿಂದ ಅನೋಖ 3ನೇ ವಾರ

* ನಮೂನ *

ಪಾತ್ರ — ಕಾಮಿನಿ ಕೌಶಲ್, ಕಿಶೋರ್ ಸಾಹು, ಕುಕ್ಕು, ಲೀಲಾ ಚಿಟ್ನೀಸ್, ದೇವಾನಂದ್

ಸಂಗೀತ — ಸಿ. ರಾಮಚಂದ್ರ

ರಘುಲಾಲ್ & ಕೋ
ಔಷಧ ವ್ಯಾಪಾರಿಗಳು,

ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆ
(ಬೆಂಗಳೂರು)

ಔಷಧ ವ್ಯಾಪಾರಿಗಳು,

70 ... ಶ್ರೀನಿವಾಸಾಚಾರ್ಯರ ರಸ್ತೆ ಬೆಂಗಳೂರು.

ಒಲಂಪಿಯಾ
ಬಕ್ರೀದ್ ಹಬ್ಬದ ಸ್ಪೆಷಲ್ ಪ್ರೋಗ್ರಾಂ

22-9-50ರಿಂದ ಪ್ರತಿ ದಿನ 3 ಆಟಗಳು

ಫಿಲ್ಮಿಸ್ತಾನ್ ರವರ ...

ಅಂಜುಮನ್

ಪಾತ್ರ - ನರ್ಗೀಸ್, ಜಯರಾಜ್, ದುರ್ಗಾ ಖೋಟೆ

— ಬೆಳಗಿನ ಪ್ರದರ್ಶನ —

22 9 50ರಿಂದ 4 ದಿನಗಳು ಮಾತ್ರ

ಬಾಂಬೆ ಟಾಕೀಸ್‌ನವರ

ಮಶಾಲ್ ದಾನಿ

ಪಾತ್ರ ನೂರ್‌ಜಹಾನ್ ಮುನೋಹರ

Edited, printed and published by A. K. Nagarajan, at Sadhvi Press, Subbiah Road, Mysore

ಸಂಪುಟ ೯] ಶನಿವಾರ ೨೩-೯-೫೦ [೩ ಪುಟ ೫೬
ಸಂಖ್ಯೆ 792 ... ಈ ದಿನ ಪತ್ರಿಕೆ ೩ ಪುಟ

ಸಾಧ್ವಿ

ಕಮ್ಯೂನಿಸ್ಟ್ ಸರಕಾರ ಸಿಯೋಲಿನಿಂದ ಪರಾರಿ

ಸಿನಿಮಾಗಳಲ್ಲಿ ಧೂಮಪಾನಕ್ಕೆ ನಿಷೇಧ

ಬೆಂಗಳೂರು ೨೨

ಬೆಂಗಳೂರಿನಲ್ಲಿ ಹಲವು ಸಿನಿಮಾ ಮಂದಿರಗಳಲ್ಲಿ ಪ್ರೇಕ್ಷಕರು ಧೂಮಪಾನವನ್ನು ಮಾಡುತ್ತಾರೆಂದು ಮೈಸೂರು ಸರ್ಕಾರದವರು ಹೊಸ್ತು ಒಂದು ಪ್ರತಿಬಂಧಕಾಜ್ಞೆಯನ್ನು ಹೊರಡಿಸಿದ್ದಾರೆ. ... [illegible] ... ಧೂಮಪಾನದ ... ಸಾರ್ವಜನಿಕರ ಆರೋಗ್ಯ ದೃಷ್ಟಿಯಿಂದಲೇ ಇದನ್ನು ಪ್ರತಿಬಂಧಿಸಲಾಗಿದೆಯೆಂದೂ ತಿಳಿಸಲಾಗಿದೆ. ಸಿನಿಮಾ ... ಮತ್ತು ಮೈಸೂರು ... [illegible] ... ಪೊಲೀಸರಿಗೂ, ಸಿನಿಮಾ ಮಂದಿರಗಳ ... [illegible] ... ಎಂದು ... [illegible]

ಜಾತಿವಾರು ಪ್ರಾತಿನಿಧ್ಯಕ್ಕೆ ವಿರೋಧ ...

ಬೆಂಗಳೂರಿನ ... [illegible] ... ಆಧಾರದ ಮೇಲೆ ಪ್ರವೇಶ ... [illegible] ... ರಾಜ್ಯಾಂಗದಲ್ಲಿ ... ಅವಶ್ಯವಾದ ... [illegible]

ವಿದ್ಯಾರ್ಥಿನಿಯರಿಗೆ ಕೋತಿಯಿಂದ ಹಿಂಸೆ

ಉತ್ತರ ಪ್ರದೇಶ ಪ್ರಾಂತದ ... [illegible] ... ಶಾಲೆಯಲ್ಲಿ ಕೋತಿಯೊಂದು ಸೇರಿಕೊಂಡು ... [illegible] ... ಕೊಲ್ಲಲು ... [illegible]

ರಷ್ಯದ ಮಂತ್ರಿಗೆ ಅಮೆರಿಕಾ ಪೊಲೀಸರ ಎಚ್ಚರಿಕೆ

ವಿಶ್ವಸಂಸ್ಥೆಯ ಸಭೆಗಳಲ್ಲಿ ಭಾಗವಹಿಸಲು ಅಮೆರಿಕಕ್ಕೆ ತೆರಳಿರುವ ರಷ್ಯದ ವಿದೇಶಾಂಗ ಮಂತ್ರಿ ... ನ್ಯೂಯಾರ್ಕ್ ನಗರದಲ್ಲಿ ... [illegible] ... ಪೊಲೀಸ್ ... [illegible] ... ಮಂತ್ರಿಗೆ ... ಹೇಳಿದರು

ಗ್ರೀಸಿನಲ್ಲಿ ಮೂರನೇ ಮಹಾ ಯುದ್ಧ

... [illegible] ... ನಡೆಯುವುದೆಂದೂ ಮತ್ತು ರಷ್ಯವು ... [illegible]

ಸುವಾನ್ ನಗರಕ್ಕೆ ಅಮೆರಿಕಾ ಸೈನ್ಯಗಳ ಪ್ರವೇಶ

ಸಿಯೋಲ್ ನಗರಕ್ಕೆ ... ಮೈಲಿ ದಕ್ಷಿಣದಲ್ಲಿರುವ ಸುವಾನ್ ಪಟ್ಟಣಕ್ಕೆ ಮೊನ್ನೆ ರಾತ್ರಿ ಅಮೆರಿಕದ ಸೈನ್ಯಗಳು ಪ್ರವೇಶಿಸಿರುವುದಾಗಿ ತಿಳಿಸಲಾಗಿದೆ. ಸಿಯೋಲ್ ನಗರದ ... ಭಾಗದಲ್ಲಿ ... ಕಮ್ಯೂನಿಸ್ಟರು ... [illegible] ... ದಕ್ಷಿಣ ... [illegible] ... ಅಮೆರಿಕದ ಸೈನ್ಯಗಳು ... ಮೈಲಿ ದೂರ ... [illegible]

ಗದ್ದೆಯಲ್ಲಿ ಒಡವೆಗಳ ಪತ್ತೆ

... [illegible] ... ಒಂದು ಗದ್ದೆಯಲ್ಲಿ ... ಬಂಗಾರದ ... ಒಡವೆಗಳು ... ದೊರೆತಿವೆಯೆಂದೂ, ... [illegible] ... ಪೊಲೀಸ್ ... [illegible] ... ವಶಪಡಿಸಿಕೊಂಡು ... [illegible]

ಹೊಸಹಳ್ಳಿ ದಿನಾಚರಣೆ

ರಾಜಧಾನಿಯ ... [illegible] ... ಸಂಗೀತ ... [illegible] ... ಶ್ರೀ ... [illegible] ... ಆರೋಗ್ಯ ... [illegible]

ಭಾರತದ ಅಭಿವೃದ್ಧಿ ಯೋಜನೆಯಲ್ಲಿ ಮೈಸೂರಿನ ಭಾಗ

೬ ವರ್ಷಕ್ಕೆ ೨೦ ಕೋಟಿ ರೂಗಳ ಮಂಜೂರಾತಿ

ಬೆಂಗಳೂರು ೨೨

ಆಸ್ಟ್ರೇಲಿಯದ ಸಿಡ್ನಿಯಲ್ಲಿ ಪೂರ್ವ ಏಷ್ಯಾ ರಾಷ್ಟ್ರಗಳ ಆರ್ಥಿಕಾಭಿವೃದ್ಧಿ ಬಗ್ಗೆ ನಡೆದ ಸಮ್ಮೇಳನದಲ್ಲಿ ಆದ ತೀರ್ಮಾನಗಳ ... ಭಾರತವು ... [illegible] ... ಕೋಟಿ ರೂಗಳ ೬ ವರ್ಷದ ಯೋಜನೆಯಲ್ಲಿ ಮೈಸೂರಿಗೆ ೨೦ ಕೋಟಿ ರೂಗಳನ್ನು ಒದಗಿಸಲು ... ಮಂಜೂರಾಗಿದೆ. ... [illegible] ... ವಿದೇಶಾಂಗ ಮಂತ್ರಿಗಳ ಸಮ್ಮೇಳನದಲ್ಲಿ ... [illegible] ... ವಿದ್ಯುತ್ ಯೋಜನೆ ... [illegible] ... ಹೇಳಲಾಗಿದೆ. ... [illegible]

ಸಂಗೀತ

ಮೈಸೂರು ೨೨

ರಾಜಧಾನಿಯ ... [illegible] ... ಸಂಗೀತ ... [illegible] ... ಮೈಸೂರು ... [illegible] ... ಸಂಗೀತವು ನಡೆಯುವುದು

ಸಿಯೋಲಿನಲ್ಲಿ ಮಾರ್ಷಲ್ ಲಾ ಜಾರಿ

ದಕ್ಷಿಣ ಕೊರಿಯದ ರಾಜಧಾನಿ ಸಿಯೋಲಿನಲ್ಲಿ ಅನೇಕ ಮಂದಿ ಕಮ್ಯೂನಿಸ್ಟ್ ವಿರೋಧಿಗಳು ದಂಗೆಯೇಳುತ್ತಿರುವರೆಂದೂ, ಅದರ ಪರಿಣಾಮವಾಗಿ ನಗರದಲ್ಲೆಲ್ಲಾ ಮಾರ್ಷಿಯಲ್ ಲಾವನ್ನು ಜಾರಿ ಮಾಡಲಾಗಿದೆಯೆಂದೂ ಹೇಳಲಾಗಿದೆ. ಸಿಯೋಲಿನೊಳಗೆ ... ಟ್ಯಾಂಕುಗಳು ನುಗ್ಗಿವೆ. ಇಲ್ಲೆಲ್ಲ ... ವಿಶ್ವ ಸಂಸ್ಥೆಯ ಸೈನ್ಯಗಳು ಮುಂದುವರಿಯುತ್ತಿವೆ. ಮೊನ್ನೆ ಮಧ್ಯಾಹ್ನದ ಹೊತ್ತಿಗೆ ಆ ನಗರದಲ್ಲಿ ಕಮ್ಯೂನಿಸ್ಟರೇ ಇಲ್ಲವೆಂದೂ, ಅಮೆರಿಕದ ಸೈನ್ಯಗಳಿಂದ ಸೆರೆಯಾಗುವುದನ್ನು ತಪ್ಪಿಸಿಕೊಳ್ಳಲು ಎಲ್ಲ ಕಮ್ಯೂನಿಸ್ಟ್ ಮುಖಂಡರೂ ಪರಾರಿಯಾಗಿರುವರೆಂದೂ ಹೇಳಲಾಗಿದೆ.

ಖಾದಿ ಟೋಪಿ ಧಾರಣೆ ವಾದ ಮಾಡಬಹುದು

ಮದರಾಸಿನ ನ್ಯಾಯಾಲಯಗಳಲ್ಲಿ ... ವಾದ ಮಾಡುವಾಗ ವಕೀಲರು ... ಖಾದಿ ಟೋಪಿಯನ್ನು ಧರಿಸಿಕೊಳ್ಳುವುದರಲ್ಲಿ ಯಾವ ಆಕ್ಷೇಪಣೆಯೂ ಇಲ್ಲವೆಂದು ... ಹೈಕೋರ್ಟಿನವರು ... [illegible]

ಮದುವೆಯ ಮೇಲೆ ತೆರಿಗೆ!

... [illegible] ... ಇನ್ನು ಮುಂದೆ ಅಲ್ಲಿ ... [illegible] ... ಮದುವೆಗೂ ... ತೆರಿಗೆ ... [illegible] ... ಮಾಡಿದೆಯೆಂದು ತಿಳಿದುಬಂದಿದೆ

ಆಜಾದ್ ವಿದ್ಯಾಲಯ

ಮೈಸೂರು ೨೨

ಮೌಲ್ಯಂತ ವಿದ್ಯಾಲಯದವರು ... [illegible] ... ೨೦ ... [illegible] ... ಹಿಂದೀ ... [illegible] ... ಪಾರಾಯಣವನ್ನು ನಡೆಸುತ್ತಾರೆ ... [illegible] ... ಶ್ರೀ ಎ. ಎ. ... [illegible] ... ಗೌರಿ ... [illegible] ... ವಿದ್ಯಾರ್ಥಿನಿಯರಿಗೆ ... [illegible] ... ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ

ಎ. ವಿ. ನರಸಿಂಗರಾಯರ ನಿಧನ

... [illegible] ... ಶ್ರೀ ಎ. ವೆಂಕಟರಾಯರ ಪುತ್ರರಾದ ಶ್ರೀ ಎ. ವಿ. ನರಸಿಂಗರಾಯರು ನೆನ್ನೆ ದಿನ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ನಿಧನರಾದರೆಂದು ... [illegible] ... ಬುಧವಾರ ... [illegible] ... ಆಸ್ಪತ್ರೆಗೆ ದಾಖಲಾಗಿದ್ದರು

ಕೀಲಂ ನದಿ ಪ್ರವಾಹದಲ್ಲಿ ಸರ್ಪಗಳ ಮೆರವಣಿಗೆ

ಜೀಲಂ ನದಿಯಲ್ಲಿ ಪ್ರವಾಹವು ಹೆಚ್ಚಿ ... ಹಾವಿನ ... ದಿನ ... ನಗರದ ... ಬಂದ ... ವರದಿಯಾಗಿದೆ.

ಮಹಾ ರಾಷ್ಟ್ರಗಳ ಶಾಂತಿ ಒಪ್ಪಂದಕ್ಕೆ ರಷ್ಯದ ಪ್ರಯತ್ನ

... ಮಹಾ ರಾಷ್ಟ್ರಗಳು ಶಾಂತಿಯ ಒಪ್ಪಂದವನ್ನು ... ರಷ್ಯವು ... ರಾಷ್ಟ್ರಗಳಿಗೆ ಪ್ರಾರ್ಥನೆ ಮಾಡಿದ ...

ಕೃತಜ್ಞತೆ

... ವಿದ್ಯಾ ... ಕಾರ್ಯಕ್ರಮಗಳಲ್ಲಿ ... ಕೃತಜ್ಞತೆಯನ್ನು ... ಸೂಚಿಸಿದ್ದಾರೆ.

ಅಕ್ಟೋಬರ್ ೩ ಕ್ಕೆ ಅಕ್ಟೋಬರ್ ವಿನಲ್ಲಿ ಪೆಸಿಫಿಕ್ ಸಮ್ಮೇಳನ

... ವಿಶ್ವ ವಿದ್ಯಾಲಯ ... ಪೆಸಿಫಿಕ್ ಸಮ್ಮೇಳನವು ನಡೆ ... ಭಾಗವಹಿಸುವುದು.

ಹೈಕೋರ್ಟಿಗೆ ಶಾಸಿಂ ರಜ್ವಿಯ ಅಪೀಲು

ಹೈದರಾಬಾದಿನ ... ನಗರದ ... ಶಾಸಿಂ ರಜ್ವಿಯು ... ಹೈಕೋರ್ಟಿನಲ್ಲಿ ಅಪೀಲು ಹೂಡಿದ್ದಾನೆ.

ಉತ್ತರ ಕೊರಿಯಾ ಸೇನಾನಿ ಶರಣಾಗತಿ

... ಉತ್ತರ ಕೊರಿಯಾ ... ಸೇನಾನಿ ... ವರದಿಯಾಗಿದೆ.

ಬೋರ್ಡುಗಳನ್ನು

ಅಗ್ಗವಾಗಿ ಬರೆದು ಕೊಡುತ್ತೇವೆ

ಓರಿಯಂಟಲ್ ಇಂಡಸ್ಟ್ರೀಸ್,

... ಮೈಸೂರು

... 23-9-50

ಪ್ರಕಟಣೆ

... ಮೈಸೂರು ...

ವಿ. ಕೆ. ... ಫಾರ್ ...

ರಾಜಕಮಲ್

ಮೈಸೂರು

ಬಕ್ರೀದ್ ಹಬ್ಬಕ್ಕಾಗಿ ಸ್ಪೆಷಲ್ ಪ್ರೋಗ್ರಾಂ

22-9-50ರಿಂದ ಅನೋಘ ಪ್ರಾರಂಭ ಪ್ರತಿದಿನ 3 ಆಟಗಳು

ಷಾದೀಸೆ - - ಪಹಲೆ

(ಮದುವೆಗೆ ಮೊದಲು)

... ಹಿಂದೀ ಚಿತ್ರ

ಭೂಮಿಕೆ :- ... ಶೇಖ್ ...

-: ಬೆಳಗಿನ ಪ್ರದರ್ಶನ :-

22-9-50ರಿಂದ 3 ದಿನಗಳು ಮಾತ್ರ

... ಹಿಂದೀ ಚಿತ್ರ

- ಸಿಕಂದರ್ -

ಭೂಮಿಕೆ - ... ಮೋದಿ, ಪೃಥ್ವಿರಾಜ್, ...

Edited, printed and published by A. R. Nagarajan, at Sadhvi Press D. Subbiah Road, Mysore

ಗಣೇಶಾ ಟಾಕೀಸ್

23-9-50ರಿಂದ ಪ್ರತಿದಿನ 3 ಆಟಗಳು.

VIGILANTE

(ವಿಜಿಲೆಂಟ್)

ಚಾಮುಂಡೇಶ್ವರಿ ಟಾಕೀಸ್

24-9-50ರಿಂದ ಪ್ರತಿದಿನ 3 ಆಟಗಳು.

Laurel and Hardy's Hilarious Comedy

ANTICS

(ಆಂಟಿಕ್ಸ್)

ಒಲಿಂಪಿಯಾ

ಬಕ್ರೀದ್ ಹಬ್ಬದ ಸ್ಪೆಷಲ್ ಪ್ರೋಗ್ರಾಂ

22-9-50ರಿಂದ ಪ್ರತಿ ದಿನ 3 ಆಟಗಳು.

ಅಂಜುಮನ್

ಪಾತ್ರ ...

— ಬೆಳಗಿನ ಪ್ರದರ್ಶನ —

22-9-50ರಿಂದ 4 ದಿನಗಳು ಮಾತ್ರ

ಖಾಂದಾನಿ

ವುಡ್‌ಲ್ಯಾಂಡ್ಸ್

22-9-50ರಿಂದ ಅನೋಘ 3ನೇ ವಾರ

* ನಮೂನ *

ಪಾತ್ರ — ...

ಸಂಗೀತ — ಸಿ. ರಾಮಚಂದ್ರ

ನಿಮ್ಮ ಬಟ್ಟೆಗಳು ಶುಭ್ರವಾಗಿರಬೇಕಾದರೆ! ಬಾಳಿಕೆ ಬರಬೇಕಾದರೆ!!

ಇಂದಿನಿಂದಲೇ ನಮ್ಮ ಅತ್ಯುತ್ತಮವಾದ

"ಲಲಿತಾ ಬಾರ್"

ಸ್ಪೆಷಲ್ ಮತ್ತು ನೀಲಂ ಸೋಪನ್ನು

... ಎಲ್ಲಾ ವ್ಯಾಪಾರಿಗಳಲ್ಲೂ ದೊರೆಯುತ್ತದೆ

ಸೋಲ್ ಏಜೆಂಟ್ಸ್:-

ಮೂರ್ತಿ ಅಂಡ್ ಕೊ.,

1412, ... ಮೈಸೂರು

ಬಕ್ರೀದ್ ಹಬ್ಬಕ್ಕಾಗಿ ಹೊಸಾಹೊಸ ಚಿತ್ರ !

24-9-50 ನೇ ... ಶುಕ್ರವಾರದಿಂದ ... ಪ್ರತಿದಿನ 3 ಆಟಗಳು

ಮೈಸೂರು ರಣಜಿತ್ — ಬೆಂಗಳೂರು ಮೆಜೆಸ್ಟಿಕ್

ಚಿತ್ರ ಮಂದಿರಗಳಲ್ಲಿ

... ಹಿಂದಿ ಚಿತ್ರ

• ಖಿಲಾರಿ

G. F. D. Release

ಪ್ರಭಾ

ಬಕ್ರೀದ್ ಹಬ್ಬದ ಪ್ರಯುಕ್ತ ಸ್ಪೆಷಲ್ ಪ್ರೋಗ್ರಾಂ

22-9-50ರಿಂದ ಅನೋಘ ಪ್ರಾರಂಭ ಪ್ರತಿ ದಿನ 3 ಆಟಗಳು

... ಹಿಂದಿ ಚಿತ್ರ

- ಆರ್ ಜೂ -

ಪಾತ್ರ, ದಿಲೀಪ್ ಕುಮಾರ್, ಕಾಮಿನಿ ಕೌಶಲ್, ...

ಸಂಗೀತ. ಅನಿಲ್ ಬಿಸ್ವಾಸ್

ದಿಗ್ದರ್ಶಕ:— ಶಹೀದ್ ಲತೀಫ್ (...)

ಪ್ರಭುದೇವಾ ಟಾಕೀಸ್

ದಿನವಹಿ 3 ಪ್ರದರ್ಶನಗಳು

24-9-50ನೇ ಭಾನುವಾರದಿಂದ

-: ಜೆಮಿನಿಯ ವರ :-

ದಾಸಿ * ಅಪರಂಜಿ

ಪಾತ್ರ:- ಎಂ. ಕೆ. ರಾಧಾ, ಪುಷ್ಪವಲ್ಲಿ, ... ಸುಬ್ಬು, ... ಮುಂತಾದವರು

ಕ್ರ. ಸಂ. 792 WEEKLY EDITION ಇಂದಿನ ಪತ್ರಿಕೆ ೬ ಪುಟ

ಸಾಧ್ವಿ

ಸಂಪುಟ ೧೫] ಭಾನುವಾರ ೨೪-೯-೫೦ [ಸಂಚಿಕೆ ೯

ತೃತೀಯ ಯುದ್ಧದಲ್ಲಿ -ಬ್ರಿಟನ್ನಿನ ನಾಶ ಸಿದ್ಧ-

೩ ಕ್ಷೇತ್ರದಲ್ಲಿ ಕೋಮುವಾರು ಗಲಭೆ

ಲಕ್ನೋ ನಗರ ಮತ್ತು ಪ್ರದೇಶದಲ್ಲಿ ಇತ್ತೀಚೆಗೆ ಕೋಮುವಾರು ಗಲಭೆಯುಂಟಾಗಿ ಅನೇಕ [illegible]

೩ ಭಾರಿ ಕಳ್ಳತನ ಹಣಗಳಲ್ಲಿ ೩೦೦ ರೂ.

[illegible]

ಬೆಂಕಿಯಿಂದ ೭೦೦ ಮನೆಗಳ ನಾಶ

[illegible] ೭೦೦ ಕಿರಿ ಮನೆಗಳು ನಾಶವಾದವು [illegible]

ಹೆಂಡತಿಯ ಮೂಗನ್ನು ಕತ್ತರಿಸಿ ನಾಯಿಗೆ

[illegible]

ವಿಶ್ವ ಸಂಸ್ಥೆ ಪೋಲೀಸ್ ಪಡೆ ರಚನೆಗೆ ಸೂಚನೆ

ವಿಶ್ವ ಸಂಸ್ಥೆಯು "ಪೋಲೀಸ್ ಬಲ"ವನ್ನು ಸ್ಥಾಪಿಸಿ [illegible]

ಸಭ್ಯತೆಗಳ ಸ್ಪರ್ಧೆ

[illegible]

ಬಿಹಾರಿನಲ್ಲಿ ೨ ಲಕ್ಷ ಎಕರೆ ಜಮೀನು ನೀರಿನಲ್ಲಿ

ಬಿಹಾರದ ಗಂಡಕ್, ಬಾಗಮತಿ, [illegible] ನದಿ ಮತ್ತು ಅವುಗಳ ಉಪನದಿಗಳಲ್ಲಿ ಪ್ರವಾಹವುಂಟಾಗಿ ೨ ಲಕ್ಷಕ್ಕಿಂತಲೂ ಹೆಚ್ಚು ಎಕರೆ ಜಮೀನುಗಳು ನೀರಿನಲ್ಲಿ ಮುಳುಗಿ, ಇದರಿಂದ [illegible]

ಮರ ಮಾತನಾಡಿದ ಪ್ರಸಂಗ

ಮಧ್ಯ ಪ್ರದೇಶ [illegible]

ಸದ್ಗುರು ಅನಂತಸ್ವಾಮಿಯವರ ಜನ್ಮೋತ್ಸವ

[illegible]

ಕೆಂಪು ಚೀಣಕ್ಕೆ ಅಮೇರಿಕದ ಮನ್ನಣೆ

[illegible]

ಇನ್ನೊಂದು ಯುದ್ಧವಾದರೆ ಬ್ರಿಟನ್ನಿನ ನಿರ್ನಾಮ ಖಂಡಿತ

ಮೂರನೇ ಮಹಾ ಯುದ್ಧವು ನಡೆದರೆ, ಬ್ರಿಟನ್ನು [illegible] ಬ್ರಿಟಿಷ್ ದ್ವೀಪಗಳಿಂದ ಜನರು [illegible]

ಬಸ್ಸು ಕಮರಿಗೆ ಬಿದ್ದು ೧೯ ಜನರ ಮರಣ

[illegible]

ಸಿಯೋಲ್ ಬಳಿ ಅಮೇರಿಕನ್ನರ ಮುಂದೋಟಕ್ಕೆ ಅಡ್ಡಿ

[illegible]

ಹಳ್ಳಿಗರಿಂದ ಪೋಲೀಸರ ಬಂಧನ

[illegible]

ಬ್ರಿಟಿಷ್ ಸೈನಿಕರ ಮೇಲೆ ಅಮೇರಿಕನ್ನರ ಧಾಳಿ

ಕೊರಿಯಾ ಯುದ್ಧದಲ್ಲಿ ಒಂದು ಭಾಗದಲ್ಲಿ ಬ್ರಿಟಿಷ್ ಸೈನ್ಯ [illegible]

ಪ್ರಯಾಣಿಕರ ವಿಮಾನಕ್ಕೆ ರಣಹದ್ದುಗಳಿಂದ ಅಡಚಣೆ

[illegible]

ಸೂಚನೆ

[illegible] "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ —ವ್ಯವಸ್ಥಾಪಕ

ಪೂರ್ವ ಪಶ್ಚಿಮ ರಾಷ್ಟ್ರಗಳ ಮಧ್ಯೆ ನೆಹರೂ ಮಧ್ಯಸ್ಥಿಕೆ

[illegible]

ಹಳ್ಳಿಗಳಲ್ಲಿ ಹೋಟೇಲುಗಳ ಸ್ಥಾಪನೆ ಬಗ್ಗೆ ಸರ್ಕಾರದ ನಿಬಂಧನೆ

ಹೋಟೇಲುಗಳು, [illegible]

LATEST NEWS

ಸ್ಟೇಷನ್ ಮಾಸ್ಟರ ಕೊಲೆಯೆ?

[illegible]

ವಾರ ಭವಿಷ್ಯ

ತಾ|| ೨೪-೯ ೫೦ರಿಂದ ೧-೧೦-೫೦ ರ ವರೆಗೆ

ಮೇಷ—ಶತ್ರು ಕಾಟಗಳು ವಾರ ವಿದು ಜನರಿಂದ ಮಾಡನೆ ವ್ಯಾಪಾರಾದಿಗಳಲ್ಲಿ ಪ್ರೇಮ ಕಿನ್ನಾಮ ಆರೋಗ್ಯ ನೆಟ್ಟಗಿರದ ನೌಕರಿಯಲ್ಲಿ ಮೇಲ್ಪಟ್ಟವರಿಂದ ತಟು ಮಾತು ೨೫ ೨೬ ೨೭ ಅಪ್ರಿಯ ವಾರ್ತೆ ಕೇಳುವಿರಿ

ವೃಷಭ—ಮಾನಸಿಕ ಅಸ್ವಸ್ಥತೆ ಸಮಾಧಾನವಿಲ್ಲದು ಕೈಗೊಂಡ ಕಾರ್ಯದಲ್ಲಿ ಉತ್ಸಾಹವಿರದು ವ್ಯಾಪಾರಾದಿಗಳಲ್ಲಿ ವಂಚಕರ ಭೇಟಿ ಪತ್ನಿಯ ಅನಾರೋಗ್ಯ ತಾ|| ೨೭, ೨೯ ಅಪ್ರಿಯ ವಾರ್ತೆ, ಹಾನಿ.

ಮಿಥುನ ಸುಖ, ಸಮಾಧಾನ ಚಿತ್ತ ಆರೋಗ್ಯ ನೆಟ್ಟಗೆ ಧಾರ್ಮಿಕ ಕಾರ್ಯ ಕಸ್ತ್ರಗಳು ಸ್ಥಂಭೀಭೂತರಾಗುವರು, ವ್ಯಾಪಾರಾದಿಗಳಲ್ಲಿ ಲಾಭ ಸ್ತ್ರೀಯರಿಂದ ಉತ್ತೇಜನ ತಾ|| ೨೪, ೨೮, ೨೯ ವಾಹನ ಸೌಖ್ಯ, ಮಹತ್ವದ ಪತ್ರ ಮುಟ್ಟುವ

ಕರ್ಕ—ಮಿತ್ರರ ಸಾಧಿಸುವವರೂ, ಮಂದಭಾಗ್ಯರೂ ಭೇಟಿಯಾಗುವರು ಆಪ್ತರ ವಾದ ಪ್ರಿಯ ಜನರ ವಿಯೋಗ ಮಕ್ಕಳಿಗೆ ಅನಾರೋಗ್ಯ ನೌಕರಿಯಲ್ಲಿ ಅಪಮಾನ ಹಣಕಾಸಿನ ದೃಷ್ಟಿ ಕ್ಷೀಣ ದಾಯಕ ತಾ|| ೨೬, ೨೭ ಚಿಂತೆಯು ನಿವಾರಣೆ ಮಿತ್ರರ ಸಹಾಯ

ಸಿಂಹ—ಗರ್ವಿತ್ರ ಜನರಿಂದ ಅಪಮಾನ ಅನರ್ಥ ಮತ್ತು ಹಾಳಲು ಮನಸ್ಸಿನಲ್ಲಿ ಆವೇಗ ನೌಕರಿಯಲ್ಲಿ ಮೇಲ್ಪಟ್ಟವರಿಂದ ತೊಂದರೆ, ಕಾಟು-ಬಿಕ ಸ್ತ್ರೀ ವಿಚಿತ್ರವ ಮಾತ್ರತ್ರೀಯವರಿಗೆ ಅನಾರೋಗ್ಯ ಪ್ರವಾಸದಲ್ಲಿ ಹಾನಿ ಆರೋಗ್ಯದ ಕಡೆ ಗಮನವಿರಲಿ ತಾ|| ೨೫, ೨೬, ೨೭ ವಾಹನಾಪಘಾತ ದರೋಡೆಕೋರರಿಂದ ಹಾನಿ.

ಕನ್ಯಾ—ಪ್ರಕೃತಿ ನೆಟ್ಟಗೆ ಇಷ್ಟ ಮಿತ್ರರ ಭೇಟಿ. ವ್ಯಾಪಾರಾದಿಗಳಲ್ಲಿ ಅಂದಾಜು ಹಣಬರುವುದು ನೌಕರಿಯಲ್ಲಿ ಕರ್ತವ್ಯ ದಕ್ಷತೆ ತಾ|| ೨೬, ೨೭ ಕೆಲಸಕಾರ್ಯ ಮುಗಿಯುವುವು ಸ್ತ್ರೀಯರ ಪರಿಚಯ

ತುಲಾ—ಖರ್ಚು ಉತ್ಸಾಹವಾದ ಕಸ್ತ್ರಗಳು ಭಿನ್ನ ಪ್ರಭಾವಕ್ಕಾಗಿ ಕಾಯುವರು ಹಾಗಿರಲಿ ಆರೋಗ್ಯ ನೆಟ್ಟಗೆ ವ್ಯಾಪಾರಾದಿಗಳಲ್ಲಿ ಲಾಭ ತಾ|| ೨೦, ೨೯ ಶುಭವಾರ್ತೆ ಲಾಭ

ವೃಶ್ಚಿಕ ಅನಾನುಕೂಲ ವಾರ ಆರೋಗ್ಯ ನೆಟ್ಟಗಿರದು ಮನಸ್ಸಿನಲ್ಲಿ ವಿರುದ್ಧದ ಯೋಚನಾ ತರಂಗ ಉದ್ಯೋಗಾದಿಗಳಲ್ಲಿ ಹೆಚ್ಚಿನ ಅವಾಚ್ಯಾರಿ ತಾ|| ೨೪, ೨೬, ೨೯ ಪ್ರವಾಸದಲ್ಲಿ ಘಾತಕರಿಂದ ತೊಂದರೆ ಶಸ್ತ್ರಭಯ

ಧನು—ಖರ್ಚು ಅಧಿಕ ಆದಾಯ ಕಡಿಮೆ ವ್ಯಾಪಾರಾದಿಗಳಲ್ಲಿ ಎಚ್ಚರಿಕೆಯ್ಯವ ಜನರ ಭೇಟಿ ತಾ|| ೨೫, ೨೬, ಖಚಿತವಾದ ವಸ್ತ್ರವಿಧ ಅಪಹರಣ ಸಂಭವ

ಮಕರ—ಕೈಕೊಂಡ ಕಾರ್ಯದಲ್ಲಿ ಯಶ ಆರೋಗ್ಯ ನೆಟ್ಟಗೆ. ವ್ಯಾಪಾರಾದಿಗಳಲ್ಲಿ ಲಾಭ ಪರೋಪಕಾರ ಮತ್ತು ಧಾರ್ಮಿಕ ಕಾರ್ಯ ತಾ|| ೨೮, ೨೯ ಆಪ್ತ ಮಿತ್ರಾದಿಗಳಿಗಾಗಿ ವ್ಯಯ

ಕುಂಭ—ಅತಿಥಿಯ ವಾರವಲ್ಲ ಅತಿಥಿಗಳಿಗಾಗಿ ಖರ್ಚು ಪರೋಪಕಾರ ಕಾರ್ಯ, ವ್ಯಾಪಾರಾದಿಗಳ ಸ್ಥಿತಿ ನೆಟ್ಟಗೆ ತಾ|| ೨೬, ೨೮, ೨೯, ಹಣದ ಲಾಭ ಪ್ರವಾಸ ಯೋಗ ಮಹತ್ವದ ಪತ್ರ ಆಗಮನ

ಮೀನ ವಿಷ ಜನರಿಂದ ದೂರ ಉತ್ತಮ ಕಾರ್ಯ ಪ್ರವೃತ್ತಿ ಸ್ತ್ರೀಯರಿಂದ ಲಾಭ ಉದ್ಯೋಗ, ನೌಕರಿಯಲ್ಲಿ ಸ್ಥಿರ ಮನಸ್ಸಿನ ಕಾರ್ಯಸಿದ್ಧಿ ತಾ|| ೨೫, ೨೯ ಮಿತ್ರರ ಭೋಜನ ಆಪ್ತರ ಭೇಟಿ

Edited, printed and published by A R Nagarajan, at Sadhvi Press D Subbiah Road, Mysore

ಮೈಸೂರು ಪತ್ರಿಕೋದ್ಯೋಗಿಗಳ ಸಮ್ಮೇಳನ

ಮಹಾಜನರಲ್ಲಿ ಸ್ವಾಗತ ಸಮಿತಿ ಯವರ ವಿನಂತಿ

ಮೈಸೂರು ೨೫.

ಸಂಸ್ಥಾನದ ಪತ್ರಿಕೋದ್ಯೋಗಿ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಡಾ. ಕೆ ಶಿ. ಮರಿಸ್ವಾಮಿ ಮತ್ತು ಕಾರ್ಯದರ್ಶಿಗಳಾದ ಶ್ರೀ ಜಿ ಎಲ್ ಸ್ವಾಮಿ ಮತ್ತು ಶ್ರೀ ವಿ ಬಾಲಯ್ಯನವರುಗಳು ಈ ರೀತಿ ಹೇಳಿಕೆಯಿತ್ತಿದ್ದಾರೆ:—

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಒಂದೇ ಸಮ್ಮೇಳನವು ಮೈಸೂರು ನಗರದಲ್ಲಿ ಗಣಿತಂತೇ ಹೆಗ್ಗಡೆ ಬಳಿ, ಇಲ್ಲಿ ನಡೆಯುವುದು ಪತ್ರಿಕೋದ್ಯೋಗಿಗಳ ಸಮ್ಮೇಳನವು ಮೈಸೂರು ನಗರದಲ್ಲಿ ನಡೆಯುವುದು ಇದೇ ಪ್ರಥಮ ಸಮ್ಮೇಳನಕ್ಕೆ ಸಂಸ್ಥಾನದ ನಾನಾ ಭಾಗಗಳಿಂದ ಸುಮಾರು ಐವತ್ತು ಮಂದಿ ಪತ್ರಿಕೋದ್ಯೋಗಿಗಳು ಆಗಮಿಸಲಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಅತಿ ಪ್ರಮುಖವಾಗಿರುವ ಪತ್ರಿಕಾ ಕರ್ತರು ಒಂದೆಡೆ ಸೇರಿ ವೃತ್ತಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುವುದಲ್ಲದೆ ಸಾರ್ವಜನಿಕ ಸೇವೆ ಮತ್ತೂ ಹೆಚ್ಚಾಗಿ ಮಾಡಲು ಕಾರ್ಯಕ್ರಮಗಳನ್ನು ಗೊತ್ತು ಮಾಡುವುದೇ ಈ ಸಮ್ಮೇಳನದ ಮುಖ್ಯೋದ್ದೇಶ.

ಈ ಗುರುತರ ಕಾರ್ಯವನ್ನು ಪತ್ರಿಕೋದ್ಯೋಗಿಗಳು ನೆರವೇರಿಸಲು ಸಾರ್ವಜನಿಕರ ಸಹಕಾರ ಅತ್ಯಗತ್ಯ ಆದರಿಂದ ಮೈಸೂರು ನಗರದಲ್ಲಿ ಈ ಸಮ್ಮೇಳನವು ಯಶಸ್ವಿಯಾಗಿ ನಡೆಯಬೇಕಾದರೆ ಮೈಸೂರು ನಗರ ಮತ್ತು ಹಳ್ಳಿಯ ಸಾರ್ವಜನಿಕರ ಸಹಕಾರವು ಅವಶ್ಯಕ ಈ ಕೆಲಸ ಪೂರೈಸಿ ಕಳ್ಳಿಸಿ ಸಮ್ಮೇಳನವನ್ನು ಪ್ರತಿನಿಧಿ ಪ್ರತಿನಿಧಿ ಸ್ವಾಗತ ಸಮಿತಿಯ ಕಾರ್ಯದರ್ಶಿಗಳಿಗೆ ಕಳಿಸಿ ಕೊಡಬೇಕೆಂದು ಅಂದಾಜು ಪರಿಚಯಿಸಿ. ಆದ್ದರಿಂದ ರಾಜಧಾನಿಯ ಮಹಾ ಮಹಾಜನರೂ, ಸಾರ್ವಜನಿಕ ಮತ್ತು ಕೈಗಾರಿಕಾ ಸಂಸ್ಥೆಗಳೂ ಈ ಕಾರ್ಯಕ್ಕೆ ಮುಕ್ತಹಸ್ತದಿಂದ ಧನಸಹಾಯ ಮಾಡಿ ಪತ್ರಿಕಾ ಸಮ್ಮೇಳನವು ಯಶಸ್ವಿಯಾಗಿ ನಡೆದು ನಗರದ ಕೀರ್ತಿಯು ಹೆಚ್ಚಾಗಿ ಬೆಳಗುವಂತೆ ಮಾಡಬೇಕೆಂದು ಕೋರುತ್ತೇವೆ

ಜಿಲ್ಲಾ ಬೋರ್ಡಿನ ಸಭೆ

ಮೈಸೂರು ಜಿಲ್ಲಾ ಬೋರ್ಡಿನ ಸಭೆಯು ಈ ತಿಂಗಳು ೨೯ನೇ ತಾ|| ಮಧ್ಯಾಹ್ನ ೧ ಗಂಟೆಗೆ ನಡೆಯಬೇಕಾಗಿದ್ದು ಅ. ೩ನೇ ತಾರೀಖು ಮಂಗಳವಾರ ಮಧ್ಯಾಹ್ನ ೧ ಗಂಟೆಗೆ ಸೇರುವಂತೆ ನಿರ್ಧಾರವಾಗಿದೆ ಈ ಜಿಲ್ಲೆಯ ಜನಾನುರಾಗ ಕ್ಷೇತ್ರಗಳ ಸಿನೀಮಾಗಳ ಬಗ್ಗೆ ಚರ್ಚೆಯು ಅಧ್ಯಕ್ಷರು ಅಂದೇ ತಾ|| ಸೇರುವ ಜಿಲ್ಲಾ ಬೋರ್ಡಿನ ಸಭೆಗೆ ಕಾರ್ಯದರ್ಶಿಗಳು ಮುಂತೆ ಮಂಡಿಸುವ ಸಲುವಾಗಿ ಮೇಲ್ಕಂಡ ಬದಲಾವಣೆಯನ್ನು ಮಾಡಲಾಗಿದೆ

ವಿಶ್ವ ಸಂಸ್ಥೆ ಬಿತಿಜಾತ್ಯ ರಷ್ಯದ ಮಂತ್ರಿಯ ಬಹಿಷ್ಕಾರ

ರಷ್ಯದಲ್ಲಿ ಕೊರಿಯಗಳಿಗೆ ಗುಲಾಮರಾಗಿ ಕಾರ್ಮಿಕರು ಇರುವರೆಂದು ಕ್ರಿಯೋ ಪೀಠ ಸೌಜನ್ಯ ಭಾವನೆ ವ್ಯಕ್ತಿಯು ಹರು ಹೊಸ್ತೆ ವಿಶ್ವ ಸಂಸ್ಥೆಯ ಬಿತಿಜ ಚಾಟಿಯಲ್ಲಿ ಹೇಳಿರುವುದನ್ನು ಪ್ರತಿಭಟಿಸಲು ರಷ್ಯದ ವಿದೇಶಾಂಗ ಮಂತ್ರಿ ಉಪಮಂತ್ರಿ ವಿಷಿನ್ಸ್ಕಿಯವರು ರಷ್ಯದ ಪ್ರತಿನಿಧಿ ಕೇತಿಯ ಮುಖಂಡರನ್ನೊಳಗೊಂಡ ಸಭಾ ಪರಿಷತ್ತು ಪೂರಾ ಬಿತಿಜ ಕಾಟಿಯಲ್ಲಿ ಬಹಿಷ್ಕಾರ ಮಾಡಿದರು.

ಬಕ್ರೀದ್ ಹಬ್ಬಕ್ಕಾಗಿ ಹೊಸಾಹೊಸ ಚಿತ್ರ !

22-9-50 ನೇ .. ಶುಕ್ರವಾರದಿಂದ ... ದಿನವೂ 3 ಆಟಗಳು

ಮೈಸೂರು — ಬೆಂಗಳೂರು

ರಂಜಿತ್ — ಮೆಜಸ್ಟಿಕ್

ಚಿತ್ರ ಮಂದಿರಗಳಲ್ಲಿ

ಮಧುಬಾಲಾ, ಅಶೋಕ್ ಕುಮಾರ್ ನಟಿಸಿರುವ ಹಿಂದಿ ಚಿತ್ರ

ಖಿಲಾರಿ

ಮೊದಲಿನಿಂದ ಕೊನೆವರೆಗೂ ನಗಿಸುವ ಕಥೆ, ಅಂದವಾದ ಹಾಡುಗಳಿಂದ ಕೂಡಿದ ಚಿತ್ರ

[G F D. Release

ಪ್ರಭುದೇವಾ ಟಾಕೀಸ್

ದಿನವೂ 3 ಪ್ರದರ್ಶನಗಳು

24-9-50ನೇ :: ಭಾನುವಾರದಿಂದ

-: ಜೆಮಿನಿಯವರ :-

ದಾಸಿ * ಅಪರಂಜಿ

ಪಾತ್ರ:-ಎಂ. ಕೆ. ರಾಧಾ, ಪುಷ್ಪವಲ್ಲಿ, ಎಲ್ ನಾರಾಯಣರಾವ್, ಕೊತ್ತಮಂಗಲಂ ಮತ್ತು, ಸುಬ್ಬಯ್ಯ ಮುಂತಾದವರು

ಚಾಮುಂಡೇಶ್ವರಿ

ಟಾಕೀಸ್

24-9-50ರಿಂದ ಪ್ರತಿದಿನ 3 ಆಟಗಳು

Laurel and Hardy's

Hilarious Comedy

ANTICS

(ಆನ್ ಟಿಕ್ಸ್)

ರಾಜಕಮಲ್,

ಮೈಸೂರು

25-9-50ರಿಂದ ಆರಂಭ ಪ್ರಾರಂಭ

ಪ್ರತಿದಿನ 3 ಆಟಗಳು

ರಂಜಿತ್ ರವರ

ಜೈಹನುಮಾನ್

(ಹಿಂದಿ)

ಭೂಮಿಕೆ:- ತ್ರಿಲೋಕ ಕಪೂರ್, ತ್ರಿವೇದಿ, ಶೈ ಲಾ ಕ

ಶೀಘ್ರದಲ್ಲಿ:-

ಶಾದಿ-ಕೀ-ಪಹಲಿ

ಅಸ್ಸಾಂ ಭೂಕಂಪ ನಿಧಿಗೆ

ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ.

ಮುಫಿಸಿಲ್ ಆಫೀಸ್, ಮೈಸೂರು

ರಘುಲಾಲ್ ಆಂಡ್ ಕೋ,

ಔಷಧ ವ್ಯಾಪಾರಿಗಳು,

ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ

(ಬೆಂಗಳೂರು)

ಔಷಧ ವ್ಯಾಪಾರಿಗಳು,

70 ಅವೆನ್ಯು ಶ್ರೀನಿವಾಸಾಚಾರ್ಯರ ರಸ್ತೆ

ಬೆಂಗಳೂರು.

ಫೋನ್ ನಂ 758 ||ವಂದೇ ಮಾತರಂ|| ಬಿಡಿ ಪ್ರತಿ ೩ ಕಾಸು

ಸಾಧ್ವಿ

ಸಂಪುಟ ೪೯] ಮಂಗಳವಾರ ೨೬-೯-೫೦ [ಸಂಚಿಕೆ ೫೭

ಹೆಚ್ಚು ಅಕ್ಕಿ ಉತ್ಪತ್ತಿಗೆ ದಕ್ಷಿಣ ಭಾರತ ಸಮಿತಿ

ಕನ್ನಡ ಕಲೆಯನ್ನು ಬೆಳೆಸಬೇಕು

ಕಲಾ ವೃಂದದಲ್ಲಿ ಟಿ. ಟಿ. ಶರ್ಮ ರವರ ಭಾಷಣ

ಉಡುಪಿ ೨೧

ಮೈಸೂರು ಸಂಸ್ಥಾನದ ಸುಪ್ರಸಿದ್ಧ ಪತ್ರಿಕೋದ್ಯೋಗಿಗಳೂ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರೂ ಆದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರವರು [illegible] ಕಲಾ ವೃಂದದ ಆಶ್ರಯದಲ್ಲಿ ಭಾಷಣ ಮಾಡಿದರು. ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ [illegible] ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಶರ್ಮರವರು ಭಾಷಣ ಮಾಡುತ್ತಾ, ಕನ್ನಡ ನಾಡು ಪ್ರಧಾನವಾಗಿ ಕಲೆಗಳ [illegible] ಉತ್ತರ [illegible] ಕಲಾಕೃತಿಗಳು [illegible] ಶಿಲ್ಪದಲ್ಲಿ ಶಿಲ್ಪಿಯು [illegible] ಭಾವ, ರಸ, ಹೃದಯವನ್ನು [illegible] ಅಂತರಂಗ ಶಕ್ತಿಯನ್ನು ಉಪೇಕ್ಷೆ ಮಾಡದೆ [illegible] ಕನ್ನಡ ನಾಡಿನ ಕಲಾ ಕ್ಷೇತ್ರ [illegible] ಭೇಟಿ ಕೊಟ್ಟು ಕಲಾವಿದರು ಕನ್ನಡ [illegible] ಸೌಂದರ್ಯ [illegible] ನೋಡಿ [illegible] ಅಭಿವೃದ್ಧಿ ಪಡಿಸಿಕೊಳ್ಳಬೇಕೆಂದು ಹೇಳಿದರು [illegible] ಕಲಾ ವೃಂದದವರೂ ತಮ್ಮ ಕಾರ್ಯ [illegible] ಕಲ್ಪಿಸಬೇಕು"–ಎಂದು ತಿಳಿಸಿದರು.

ಕನ್ನಡ [illegible] ಸಮಿತಿಯ [illegible] ಶ್ರೀ ಎಸ್ [illegible] ವಂದನೆ ಸಮರ್ಪಿಸಿದರು.

ರಾಜಧಾನಿಯ ಆಹಾರ ಡಿಪೋಗಳ ತಪಾಸಣೆ ಸಮಿತಿ

ರಾಜಧಾನಿಯ ಆಹಾರ ಡಿಪೋಗಳು ಮತ್ತು ಗೋದಾಮುಗಳಲ್ಲಿರುವ ಧಾನ್ಯಗಳ [illegible] ತಪಾಸಣೆ [illegible] ಸಮಿತಿಯನ್ನು ರಚಿಸಲಾಗಿದೆ– ನಗರ [illegible] ಅಧಿಕಾರಿಗಳು ಅಧ್ಯಕ್ಷರಾಗಿಯೂ, ನಗರದ [illegible] ಅಧಿಕಾರಿಗಳು ಕಾರ್ಯದರ್ಶಿಯಾಗಿಯೂ ಮತ್ತು ಶ್ರೀಗಳಾದ ಎಸ್. [illegible], ಎಂ. ಎಸ್. [illegible], ಎಸ್. ಲಿಂಗಣ್ಣ, ಪಿ ಎ [illegible] ಸದಸ್ಯರಾಗಿಯೂ ಇರುವರು.

ಬೊಂಬಾಯಿ–ಮೈಸೂರು ಬಸ್ ಸಂಚಾರ ವ್ಯವಸ್ಥೆ

[illegible] ಸರ್ಕಾರದವರು ಅಲ್ಲಿನ [illegible] ಪ್ರವಾಸಾ [illegible] ಪ್ರದೇಶದಿಂದ ಮುಂಬಯಿಗೆ [illegible] ಮತ್ತು ಮೈಸೂರು [illegible] ನಗರಗಳ ನಡುವೆ [illegible] ಆಲೋಚಿಸಿದ್ದಾರೆ [illegible] ಬಗ್ಗೆ ಮೈಸೂರಿನ [illegible] ಅಧಿಕಾರಿಗಳು ಇಲ್ಲಿಗೆ ಆಗಮಿಸುವರು.

ಎಂ. ಬಿ. ಸಿಂಗರ ವಜಾ

ಬೆಂಗಳೂರು ೨೪

ಹಿಂದೂಸ್ಥಾನ್ ವಿಮಾನ ಕಾರ್ಖಾನೆಯ ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀ ಎಂ ಬಿ ಸಿಂಗ್‌ರವರನ್ನು ಕೆಲಸದಿಂದ ನಿವೃತ್ತಿ ಮಾಡಲಾಗಿದೆ. ಕಾರ್ಖಾನೆಯಲ್ಲಿ ಈಗ ಅವಶ್ಯಕವಾದ ಕಾರ್ಮಿಕರ ೪೦೦ ಮಂದಿ ಕಾರ್ಮಿಕರು ಕೆಲಸದಲ್ಲಿ [illegible] ದ್ದಾರೆ. [illegible] ನೆನ್ನೆ ಬಸವನಗುಡಿಯಲ್ಲಿ [illegible] ಸಭೆಯಲ್ಲಿ ಕಾರ್ಮಿಕರು ಸೇರಿ, ಶ್ರೀ ಸಿಂಗರನ್ನು [illegible] ತಾವು ಕೆಲಸಕ್ಕೆ ಹೋಗಬಾರದೆಂದು ನಿರ್ಧರಿಸಿದರು.

ನೆಹ್ರೂರವರ ಮಗಳ ಮನೆಗೆ ಕಳ್ಳನ ಪ್ರವೇಶ

[illegible] ನೆಹ್ರೂರವರ [illegible] ಫಿರೋಜ್ ಗಾಂಧಿಯವರ ಮನೆಗೆ ನೆನ್ನೆ ಬೆಳಗಿನ ಜಾವ ಒಂದು ಕತ್ತಿ [illegible] ಒಬ್ಬ [illegible] ಸಿಕ್ಕಿಬಿದ್ದನು. [illegible] ಎಚ್ಚರಗೊಂಡು ಫಿರೋಜ್ ಗಾಂಧಿಯವರು [illegible] ನೋಡಲು [illegible] ಓಡಿಹೋಯಿತು.

೧೦೫ ವರ್ಷದ ಮುದಾಕಾ ವೃದ್ಧರ ನಿಧನ

ಅಖಿಲ ಭಾರತ ಕಾಂಗ್ರೆಸ್ಸಿನ ೫೬ನೇ ಅಧಿವೇಶನದ ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಟಿ ಎಸ್ ಹಿರೇಮಠರ ತಂದೆಯವರಾದ ಶ್ರೀ [illegible] ಹಿರೇಮಠರು [illegible] ಸಾಯಂಕಾಲ [illegible] ನಿಧನರಾದರೆಂಬ ವಾರ್ತೆ ಬಂದಿದೆ. ಮೃತರಿಗೆ ೧೦೫ ವರ್ಷ ವಯಸ್ಸಾಗಿತ್ತು.

ಉಪನ್ಯಾಸ

ರಾಜಧಾನಿಯ [illegible] ಇಂದು ಸಂಜೆ ೬ ಗಂಟೆಗೆ [illegible] ಕಾಲೇಜಿನಲ್ಲಿ ರಾಜ್ಯಶಾಸ್ತ್ರದ ಪ್ರೊ|| ಎಂ ಎ ಕೃಷ್ಣರಾಯರು "ಮರಳಿ [illegible] ಮತ್ತು [illegible]" ಎಂಬ ವಿಷಯದ ಮೇಲೆ ಉಪನ್ಯಾಸ ಮಾಡುವರು. ಪ್ರಿನ್ಸಿಪಾಲರಾದ ಶ್ರೀ ಎಂ ಎ ಗೋಪಾಲಸ್ವಾಮಿಯವರು ಅಧ್ಯಕ್ಷತೆ ವಹಿಸುವರು. ಸರ್ವರಿಗೂ ಸ್ವಾಗತವಿದೆ.

ಸಭೆಯಲ್ಲಿ ಪೌರ ಸದಸ್ಯರು ರಿವಾಲ್ವರ್ ಎತ್ತಿದರು

ಬೆಳಗಾವಿಯ ಪೌರಸಭೆಯಲ್ಲಿ ಅಧ್ಯಕ್ಷರ ಮೇಲೆ ತರಲಾಗಿದ್ದ ಅವಿಶ್ವಾಸ ನಿರ್ಣಯವನ್ನು ಚರ್ಚಿಸುತ್ತಿದ್ದಾಗ ಬಿಸಿಬಿಸಿ ಮಾತುಗಳು ನಡೆದು ಒಬ್ಬ ಸದಸ್ಯರು ರಿವಾಲ್ವರನ್ನು ಎತ್ತಿದರು. ಇದರಿಂದ ಅವ್ಯವಸ್ಥೆಯುಂಟಾಗಿ ಸಭೆಯು [illegible] ಪೋಲೀಸರು ನಂತರ ಬಂದು [illegible] ರಿವಾಲ್ವರ್ ಹಿಡಿದಿದ್ದವರನ್ನು ದಸ್ತಗಿರಿ ಮಾಡಿದರು. ಅಧ್ಯಕ್ಷರಾಗಿದ್ದ [illegible] ತೆಗೆಯಬೇಕೆಂದು [illegible] ಬೇಡವೆಂದು [illegible] ಜನರು ಓಟು ಮಾಡಿದರು. ೨೬ ಜನರು ಈ ನಿರ್ಣಯಕ್ಕೆ ಮತ ಕೊಡಬೇಕಾಗಿದ್ದುದರಿಂದ, [illegible] ಬೆಂಬಲ ಸಿಗದೆ ಅದು ಬಿದ್ದುಹೋಯಿತೆಂದು ತಿಳಿಸಿದಾಗ ಈ ಗೊಂದಲವುಂಟಾಯಿತು.

ಬಿಕನೀರ್ ಅರಸರ ನಿಧನ

ಬಿಕನೀರ್ ಸಂಸ್ಥಾನದ ಮಹಾರಾಜರು ಇಂಗ್ಲೆಂಡಿನ [illegible] ಎಂಬ [illegible] ನೆನ್ನೆ ರಾತ್ರಿ ನಿಧನರಾದರು.

ಅಸ್ಸಾಂ ಭೂಕಂಪ ನಿಧಿಗೆ ನಿಮ್ಮ ಕಾಣಿಕೆ ಸಲ್ಲಿಸಿ

ಸಂಚಾಲಕ

ಮುನಿಸಿಪಲ್ ಆಫೀಸ್, ತ [illegible]

ಕೆಂಪು ಚೀಣಾದ ಮೇಲೆ ಪುನಃ ಅಮೆರಿಕದ ಧಾಳಿ

ನೆನ್ನೆ ಸಂಜೆ [illegible] ಅಮೆರಿಕ ವಿಮಾನಗಳು [illegible] ಚೀಣಾದ [illegible] ಪ್ರಾಂತದ [illegible] ಮೇಲೆ ಬಾಂಬು ಹಾಕಿ [illegible] ಒಂದು [illegible] ಸೆರೆ [illegible] ಪೀಕಿಂಗ್ [illegible] ತಿಳಿಸಿದೆ

ಶಾಸನ ಸಭೆ ಬರುವ ತಿಂಗಳಿನಲ್ಲಿ ಇಲ್ಲವೇ?

[illegible] ಶಾಸನ [illegible] ಪ್ರಾಂತ್ಯದ ಶಾಸನ ಸಭೆಯು ಈಗ [illegible] ಸರ್ಕಾರದವರು [illegible] ನವೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ಒಂದು ಅಧಿವೇಶನವನ್ನು ಸೇರಿಸುವ ಸಂಭವವಿದೆಯೆಂದು ಹೇಳಲಾಗಿದೆ

ದಕ್ಷಿಣ ಭಾರತದಲ್ಲಿ ಅಕ್ಕಿ ಉತ್ಪತ್ತಿ ಹೆಚ್ಚಿಸಲು ಬೋರ್ಡು

ಬೆಂಗಳೂರು ೨೫

ಅಕ್ಕಿಯು ಕೊರತೆಯ ಪ್ರದೇಶಗಳಾದ ಮದ್ರಾಸು, ಮೈಸೂರು, ಹೈದರಾಬಾದು ಮತ್ತು ತಿರುವಾಂಕೂರುಗಳಲ್ಲಿ ಭತ್ತವನ್ನು ಹೆಚ್ಚಾಗಿ ಬೆಳೆಯುವಂತೆ ಮಾಡಲು ಭಾರತ ಸರ್ಕಾರದವರು ಒಂದು ದಕ್ಷಿಣ ಅಧಿಕ [illegible] ಬೋರ್ಡನ್ನು ಶೀಘ್ರದಲ್ಲೇ ಸ್ಥಾಪಿಸಲಿದ್ದಾರೆ. ಈ ಬೋರ್ಡಿಗೆ ಕೇಂದ್ರ ಆಹಾರ ಮಂತ್ರಿಗಳಾದ ಮುನ್ಷಿಯವರು ಅಧ್ಯಕ್ಷರಾಗಿರುವರು. ಈ ಬಗ್ಗೆ ಮೈಸೂರಿನ [illegible] ಎಕರೆ ಜಮೀನುಗಳನ್ನು [illegible] ಸರ್ಕಾರದವರು ಆಲೋಚಿಸುತ್ತಿದ್ದಾರೆ

ಪೌರಸಭಾ ಸದಸ್ಯರಿಗೆ ಪೋಲೀಸಿನವರ ರಕ್ಷಣೆ

[illegible] ವಿರೋಧ ಕಾರ್ಯಕ್ರಮಗಳ ಅಂಗವಾಗಿ [illegible] ಶಕ್ತಿ ಹಚ್ಚುವ [illegible] ಹೆಚ್ಚು ಆಸಕ್ತಿ ವಹಿಸುತ್ತಿದ್ದ [illegible] ಸದಸ್ಯರಾದ [illegible] ಎಚ್ ವೆಂಕಟ [illegible] ಕೊಲ್ಲುವುದಾಗಿ ಬೆದರಿಕೆ ಪತ್ರಗಳು ಬಂದುದರಿಂದ, ಅವರು [illegible] ಪೋಲೀಸರ ಬೆಂಗಾವಲಿನೊಡನೆ ಹೋಗುವುದಾಗಿ ವರದಿಯಾಗಿದೆ

ಮಕ್ಕಳಿಗೆ ಬೀಡಿ ಸಿಗರೇಟ್ ಮಾರಕೂಡದೆಂದು ಆಜ್ಞೆ

೧೬ ವರ್ಷದೊಳಗಿರುವ ಮಕ್ಕಳಿಗೆ ಬೀಡಿ ಸಿಗರೇಟ್ ಮುಂತಾದುವನ್ನು ಮಾರಕೂಡದೆಂದು ಬೊಂಬಾಯಿ ಸರ್ಕಾರದವರು ನಿಷೇಧಿಸುವುದಾಗಿ [illegible] ಗೊತ್ತಾಗಿದೆ [illegible]

ಶಿಶುವಿನ ಮಾರಾಟದ ಮತ್ತು ವಾಪಸು ಪಡೆದ ಪ್ರಸಂಗ

ಚಿತ್ರದುರ್ಗ ಜಿಲ್ಲೆಯ [illegible] ಎಂಬ ಹಳ್ಳಿಯ [illegible] ಎಂಬಾಕೆಯು ಚಿತ್ರದುರ್ಗಕ್ಕೆ ಆಗಮಿಸಿ, ಅಲ್ಲಿನ [illegible] ಶ್ರೀ ವೆಂಕಟಸ್ವಾಮಿ ಎಂಬುವರಿಗೆ ತನ್ನ ನಾಲ್ಕು ತಿಂಗಳ ಮಗುವನ್ನು ೧೧ ರೂಪಾಯಿಗಳಿಗೆ ಮಾರಿದ್ದಳಂತೆ. ನಂತರ [illegible] ಮಗುವನ್ನು [illegible] ಮತ್ತು [illegible] ತಿಳಿಸಿದಾಗ, [illegible] ಮಗುವನ್ನು [illegible] ಹೇಳಲಾಗಿದೆ

ಪಿಯೋಲಾ ಮಧ್ಯ ಭಾಗದಲ್ಲಿ ಅಮೆರಿಕನ್ನರು

[illegible] ಪಿಯೋಲಾದ ಮಧ್ಯ ಭಾಗದೊಳಗೆ ಅಮೆರಿಕನ್ನರು ಪ್ರವೇಶಿಸಿ, ದಕ್ಷಿಣ ಕೊರಿಯದ ಅಧ್ಯಕ್ಷ ಸಿಂಗ್ಮನ್ ರೀಯವರ ಅರಮನೆಯನ್ನು ಹಿಡಿದಿರುತ್ತಾರೆ [illegible] ನಗರದಲ್ಲಿ ಇನ್ನೂ ಬಲವಾಗಿಯೇ [illegible] ದಕ್ಷಿಣದಲ್ಲಿ [illegible] ನಗರವನ್ನು ಹಿಡಿಯಲಾಗಿದೆ. ದಕ್ಷಿಣ ಮತ್ತು ಉತ್ತರ ಭಾಗಗಳಲ್ಲಿ ಆ [illegible] ಸೈನ್ಯಗಳು [illegible] ಮೈಲಿಗಳ ಅಂತರ ಮಾತ್ರವಿದೆ

ತಿರುಪತಿ ದೇವಸ್ಥಾನದ ಆವರಣದಲ್ಲಿ ಶವ

ಕಳೆದ ಶನಿವಾರ ಮಧ್ಯ ರಾತ್ರಿಯಲ್ಲಿ ತಿರುಪತಿ ಶ್ರೀ ವೆಂಕಟಾಚಲ ದೇವಸ್ಥಾನದ ಧ್ವಜಾರೋಹಣ ಸಮಾರಂಭವು ಮುಗಿದ ನಂತರ ಅಲ್ಲಿನ ನೌಕರರು ದೇವಸ್ಥಾನದ ಆವರಣದಲ್ಲಿದ್ದ ಯಾತ್ರಾರ್ಥಿಗಳನ್ನು ಹೊರಕ್ಕೆ ಕಳುಹಿಸುತ್ತಿದ್ದ ವೇಳೆಯಲ್ಲಿ ಅಲ್ಲಿನ ತಿರುಮಲ ನಾಥ ಸನ್ನಿಧಿ ಮಂಟಪದ ಮುಂಭಾಗದಲ್ಲಿ ಮಲಗಿದ್ದ ಒಬ್ಬನನ್ನು ಎಳುವಂತೆ ಎಷ್ಟು ಹೇಳಿದರೂ ಪ್ರಯೋಜನವಾಗದೆ ಅವನು ಅವನನ್ನು ಮೇಲಕ್ಕೆ ಎತ್ತಲು ಪ್ರಯತ್ನಿಸಿದಾಗ ಅವನು ಮೃತಪಟ್ಟಿದ್ದ ಸಂಗತಿಯು ಗೊತ್ತಾಗಿದೆ. ಸಂಪ್ರೋಕ್ಷಣೆ ನಡೆದ ನಂತರ ಮಾರನೇ ದಿನದ ಪೂಜಾದಿಗಳು ನಡೆದುವು

೨೪ ಮಕ್ಕಳ ತಾಯಿಗೆ ಸಂತಾನ ನಿರೋಧ ಪಾಠ

ಸಿಂಗಪುರದಲ್ಲಿರುವ ಸಾರವಾರಿನ ೫೦ ವರ್ಷದ ಒಬ್ಬ ಚೀಣಾದ ಸ್ತ್ರೀ ಮತ್ತು ಅಕೆಯ ಇಪ್ಪತ್ತು ಹೆಣ್ಣು ಮಕ್ಕಳು ಅಲ್ಲಿನ ಸಂಸಾರ ಯೋಜನಾ ಸಂಘದವರಿಂದ ಸಂತಾನ ನಿರೋಧ ಪಾಠಗಳನ್ನು ಕಲಿಯುತ್ತಿರುವರು. ತಾಯಿಗೆ ಈಗಾಗಲೇ ೨೪ ಮಂದಿ ಮಕ್ಕಳಿರುವರು. ಇವರು ಇಂತಹ ಸಂಘಗಳನ್ನು ಸಾರವಾಕ್ ದ್ವೀಪಕ್ಕೆ ಹಿಂತಿರುಗಿದಾಗ ಅಲ್ಲಿ ಸ್ಥಾಪಿಸ ಬೇಕೆಂದು ಹೇಳಲಾಗಿದೆ

ರೇಷನ್ ಕಛೇರಿಯ ಮೇಲೆ ಧಾಳಿ

ತಿರುನೆಲ್ವೇಲಿಯ ೩೦ ಜನರು ನೊಸ್ಸೆ ಡಿಪ ಕಲೆ ಜೋರಿನಲ್ಲಿ ಅಕ್ರಮವಾಗಿ ಆಹಾರ ಧಾನ್ಯ ಸಾಗಿಸುತ್ತಿದ್ದಾಗ ರೇಷನಿಂಗ್ ಅಧಿಕಾರಿಗಳು ಅವರನ್ನು ಬಂಧಿಸಿ ಕಛೇರಿಗೆ ಕರೆದು ಕೊಂಡುಹೋಗಿ ವಿಚಾರಣೆ ನಡೆಸಲು ಉಪಕ್ರಮಿಸಿದಾಗ ಜನರು ಗುಂಪು ಕೂಡಿ ಕಛೇರಿಯ ಮೇಲೆ ಕಲ್ಲುಗಳನ್ನು ಎಸೆದು ಧಾಳಿ ನಡೆಸಲು ಅಧಿಕಾರಿಗಳ್ಳೆಲ್ಲರನ್ನು ಒಳಗೆ ಕೂಡಿ ಕಛೇರಿ ಬಾಗಿಲು ಬೀಗ ಹಾಕಿಕೊಂಡು ಪೋಲೀಸರನ್ನು ಕರೆಕಳಿಸಲು ಹೊರಟು ಹೋದರು. ಜನರ ಗುಂಪಿನವರು ರೇಷನ್ ಕಛೇರಿ ಬಾಗಿಲನ್ನು ಮುರಿದು ಒಳ ನುಗ್ಗಿ ಮುಂದಿದ್ದ ಪುಸ್ತಕಗಳನ್ನು ಕಸಿದುಕೊಂಡು ಪೋಲೀಸರು ಬಂದು ಗುಂಪನ್ನು ಚದುರಿಸುವವರೆಗೆ ಕಲ್ಲು ಕೋಲುಗಳಿಂದ ಹೊಡೆದಾಟ ನಡೆದಿದೆ ಎಂದು ಹೇಳಲಾಗಿದೆ

SRI GAYATHRI
TALKIES
From 26—9—50 for 2 days
Daily 3 Shows
Paramount's most funniest picture
MY FRIEND IRMA
Starring.- Jhon Lund, Diana Lynn
Coming -
THE HEIRESS

೪೪ ವರ್ಷದ ವಧು, ೩೫ ವರ್ಷದ ವರ

ಸುಪ್ರಸಿದ್ಧ ಇಂಗ್ಲಿಷ್ ಚಲನ ಚಿತ್ರ ತಾರೆ ೪೪ ವರ್ಷದ ಮ್ಯಾಡಲೀನ್ ಕೆರಾಲ್ ಎಂಬುವಳು ಅಮೆರಿಕದ ಲೈಫ್ ಎಂಬ ಮಾಸ ಪತ್ರಿಕೆಯ ಪ್ರಕಟಣಕಾರನಾದ ೩೫ ವರ್ಷದ ಆಂಡ್ರ್ಯೂ ಹೈಸ್ಕೆಲ್ ಎಂಬುವನನ್ನು ಇತ್ತೀಚೆಗೆ ವಿವಾಹವಾದಳೆಂದು ವರದಿಯಾಗಿದೆ

ನೊಬೆಲ್ ಬಹುಮಾನ ಪಡೆದ ಪ್ರಥಮ ನೀಗ್ರೊ

ನೊಬೆಲ್ ಶಾಂತಿ ಬಹುಮಾನವನ್ನು ಈ ವರ್ಷ ಅಮೆರಿಕದ ನೀಗ್ರೊ ಜನಾಂಗಕ್ಕೆ ಸೇರಿದ ಡಾ॥ ರಾಲ್ಫ್ ಬಂಚ್‌ರವರಿಗೆ ಕೊಡಲಾಗಿದೆ. ಅವರನ್ನು ಪ್ಯಾಲಸ್ಟೈನಿನಲ್ಲಿ ಯಹೂದ್ಯ-ಅರಬ್ಬ ಅರಬ್ಬ ರಾಜ್ಯಗಳಲ್ಲಿ ಮಧ್ಯಸ್ತಿಕೆಗಾರರನ್ನಾಗಿ ನೇಮಿಸಲಾಗಿತ್ತು. ಆ ಜನಾಂಗದ ವ್ಯಕ್ತಿ ಇವರೇ ಮೊದಲು ಬಹುಮಾನ ಪಡೆದವರು

ಬ್ರಾಹ್ಮಣರ ಹೋಟೇಲುಗಳ ಮುಂದೆ ಪಿಕೆಟಿಂಗ್

ಕಡಲೂರಿನ ದ್ರಾವಿಡ ಕಷಗಂ ಪಕ್ಷಕ್ಕೆ ಸೇರಿದ ಹಲವು ಜನರು ಕಳೆದ ವಾರ ಅಲ್ಲಿನ ಬ್ರಾಹ್ಮಣರ ಹೋಟೇಲುಗಳ ಬಳಿ ನಿಂತು ಸಾರ್ವಜನಿಕರು ಬ್ರಾಹ್ಮಣ ರಹೋಟೇಲುಗಳಿಗೆ ಪ್ರೋತ್ಸಾಹಬೀಯಬಾರದೆಂದು ಹೇಳಿ ಪಿಕೆಟಿಂಗ್ ನಡೆಸಿದರೆಂದು ವರದಿಯಾಗಿದೆ. ಪಿಕೆಟಿಂಗ್ ನಡೆಸುತ್ತಿದ್ದವರು ತಮ್ಮ ಬಟ್ಟೆಯ ಮೇಲೆ "ನಾನು ಬ್ರಾಹ್ಮಣ ದ್ವೇಷಿ" ಎಂದು ಬರೆಯಲ್ಪಟ್ಟ ಬ್ಯಾಡ್ಜುಗಳನ್ನು ಧರಿಸಿದ್ದರೆಂದೂ ವರದಿಯಾಗಿದೆ

ಪೆಸಿಫಿಕ್ ದ್ವೀಪವಲ್ಲಿ ನವರತ್ನಗಳ ನಿಧಿಯ ಲಾಭ

ಪೆಸಿಫಿಕ್ ದ್ವೀಪವಾದ ಕೊಕೊಸ್ ಎಂಬಲ್ಲಿ ಎಲ್ಲೋ ಜಿಟಿಯಂ ೫ ಎ ಬುವರಿಗೆ ೩೦ ಮತ್ತು ೭ ಕೋಟಿ ಪೌಂಡುಗಳ ಎಂದು ವಜ್ರ ವೈಡೂರ್ಯಗಳ ನಿಧಿಗಳು ದೊರೆತ ದಾಗಿ ತಿಳಿದುಬಂದಿದೆ. ಪ್ಯಾಟರ್ಸನ್ನರು ಆ ದ್ವೀಪದಲ್ಲಿ ರತ್ನಗಳಿಗಾಗಿ ಭೂ ಸಂಶೋಧನೆ ಮಾಡುವ ಮುಖ್ಯಸ್ಥರ ನಾಯಕರಾಗಿದ್ದಾರೆ

ವಿಳ್ಯೇದೆಲೆ ಮಾರುವವರ ಹರತಾಳ

ಆಗ್ರಾದಲ್ಲಿ ವಿಳ್ಯೇದೆಲೆ ಮತ್ತು ಸಿಗರೇಟಿನ ವ್ಯಾಪಾರದ ಮೇಲೆ ವಿಧಿಸಿದ ಸುಂಕ ವಿಧಿಯನ್ನು ಪ್ರತಿಭಟಿಸಿ ಅವುಗಳ ವ್ಯಾಪಾರಿಗಳು ಕಳೆದ ಗುರುವಾರ ಮುಷ್ಕರ ಹೂಡಿ ಅಂಗಡಿಗಳನ್ನು ಮುಚ್ಚಿ ಹರತಾಳವನ್ನು ಆಚರಿಸಿದರೆಂದು ತಿಳಿದುಬಂದಿದೆ

ಭಾರತದಲ್ಲಿ ಮತದಾರರ ಸಂಖ್ಯೆ ೧೮ ಕೋಟಿ

ಭಾರತದ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನ ಮಾಡಲು ಅರ್ಹರಾದವರ ಸಂಖ್ಯೆ ೧೮ ಕೋಟಿ ಜನರು ಆಗಬಹುದೆಂದು ಚುನಾವಣಾ ಕಮೀಷನರ್ ಸುಕುಮಾರಸೇನರು ಹೇಳಿದ್ದಾರೆ

ರಾಜಕಮಲ್,
ಮೈಸೂರು
25-9-50ರಿಂದ ಜನೋತ್ಸ ಪ್ರಾರಂಭ
ಜೈ ಹನುಮಾನ್
(ಹಿಂದಿ)

ಬಕ್ರೀದ್ ಹಬ್ಬಕ್ಕಾಗಿ ಹೊಸಹೊಸ ಚಿತ್ರ !
22-9-50 ನೇ .. ಶುಕ್ರವಾರದಿಂದ ದಿನವಹಿ 3 ಆಟಗಳು
ಮೈಸೂರು — ಬೆಂಗಳೂರು
ರಣಜಿತ್ — ಮೆಜೆಸ್ಟಿಕ್
ಚಿತ್ರ ಮಂದಿರಗಳಲ್ಲಿ
ಸುಲ್ತಾನ, ಅಶೋಕ್ ಕುಮಾರ್ ನಟಿಸಿರುವ ಹಿಂದಿ ಚಿತ್ರ
ಖಿಲಾರಿ
ಮೊದಲಿನಿಂದ ಕೊನೆಯವರೆಗೂ ಸಸಿಹುಣಿಸುವ ಕಥೆ, ಇಂಪಾದ ಹಾಡುಗಳಿಂದ ಕೂಡಿದ ಚಿತ್ರ
G F D Release

ಪ್ರಕಟಣೆ

ಈ ಸಾಲಿನ ಮೈಸೂರು ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಪ್ರೇಕ್ಷಕರಿಗೆ ಕಾಫಿ, ಟೀ ಮತ್ತು ಹಾಲು ಸರಬರಾಜು ಮಾಡಲು ಎಗ್ಸಿಬಿಷನ್ನಿನ ಕಟ್ಟಡದಲ್ಲಿರುವ ರೂಮುಗಳು M 4 (ಹಾಲು) M 5, M 6 (ಕಾಫಿ) ಜೀವನದಾಯಕ ಕಟ್ಟಡದಲ್ಲಿರುವ J. K (a) ಕಾಫಿ, J K (d) ಹಾಲು ಮಳಿಗೆಗಳನ್ನು ವಿಹರಿಸಬೇಕಾಗಿದೆ

ಇವುಗಳನ್ನು ಉಪಯೋಗಿಸುವ ಹಕ್ಕನ್ನು ಪಡೆಯಲು ಉದ್ದೇಶವುಳ್ಳವರು ಕಮ್ಮಿ ಕೊಡುವ ಅತ್ಯಧಿಕ ಮೊಬಲಗನ್ನು ಸೂಚಿಸಿ ಈ ಕೆಳಗೆ ರುಜುಮಾಡಿರುವವರಿಗೆ 30-9-50ನೇ ತಾ॥ ಸಾಯಂಕಾಲ 5 30 ಗಂಟೆ ಒಳಗಾಗಿ ಟೆಂಡರುಗಳನ್ನು ಕಳುಹಿಸಬೇಕು. ಪ್ರತಿ ಟೆಂಡರಿನ ಜೊತೆಯಲ್ಲಿ 100 ರೂಪಾಯಿನ ಠೇವಣಿಯನ್ನು ಲಗತ್ತಿಸಬೇಕು. ಯಾವ ಕಾರಣವನ್ನೂ ಕೊಡದೆ ಟೆಂಡರುಗಳನ್ನು ವಜಾ ಮಾಡುವ ಹಕ್ಕನ್ನು ಕಾದಿಡಲಾಗಿದೆ

ಮುನಿಸಿಪಲ್ ಲೈಸೆನ್ಸಿಗೆ ಒಳಪಟ್ಟು ಟೆಂಡರುದಾರರು ಕಾಫಿ, ಹಾಲು ಜೊತೆಗೆ ಬೇರೆ ಲಘು ಉಪಹಾರದ ತಿಂಡಿ ಪದಾರ್ಥಗಳನ್ನು ಸರಬರಾಜು ಮಾಡಬಹುದಾಗಿದೆ

ಇತರ ವಿವರಗಳನ್ನು ಬುಧವಾರ ತಿಳಿಯಬಹುದಾಗಿದೆ

ಮೈಸೂರು
ತಾ॥ ೨೫-೯-೫೦

ಕೆ. ವಿ. ಜಯರಾಂ,
ಕಾರ್ಯದರ್ಶಿ,
ದಸರಾ ವಸ್ತು ಪ್ರದರ್ಶನ ಸಮಿತಿ

ಪ್ರೇತದ ಸ್ವರೂಪ ಫೋಟೋದಲ್ಲಿ

ಜಯಾಮಿನ ಪುರಾತನ ರಾಜಧಾನಿ ಯೋಧ್ಯ ಎಂಬಲ್ಲಿರುವ ಬುದ್ಧ ದೇವಾಲಯ ರಂಜನ ಪ್ರತಿಮೆಯ ಮುಂದೆ ಪ್ರಾರ್ಥನೆಗಳನ್ನು ಅರ್ಪಿಸುತ್ತಿದ್ದ ದಂಪತಿಗಳ ಚಿತ್ರವನ್ನು ತೆಗೆದಾಗ ಅವರಿಬ್ಬರ ಮಧ್ಯೆ ಅದೃಶ್ಯ ಗೋಚರವಾದ ಒಬ್ಬ ತರುಣ ಬೌದ್ಧ ಭಿಕ್ಷು ಕಾವಿ ಬಟ್ಟೆ ತೊಟ್ಟು ನಿಂತಿರುವುದು ಫೋಟೋವಿನಲ್ಲಿ ಕಾಣಬಂದಿದೆ ಎಂದು ವರದಿಯಾಗಿದೆ

ಗಣೇಶಾ ಟಾಕೀಸ್
26-9-50ರಿಂದ ಪ್ರತಿ ದಿನ 3 ಆಟಗಳು
ರಿಪಬ್ಲಿಕ್ ಪ್ರೊಡಕ್ಷನ್ ಇಂಗ್ಲಿಷ್ ಚಿತ್ರ
UNDER SEA KINGDOM
(ಪಾತಾಳ ಪುರ)
29-9-50ರಿಂದ
ಚಂದ್ರಿಕ
(ತಮಿಳು)

ರಘುಲಾಲ್ & ಕೋ,
ಔಷಧ ವ್ಯಾಪಾರಿಗಳು,
ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ
(ಬೆಂಗಳೂರು)
ಔಷಧ ವ್ಯಾಪಾರಿಗಳು
70 ಅವೆನ್ಯೂ ರಸ್ತೆ (ಮಾಮೂಲ್‌ಪೇಟೆ) ಬೆಂಗಳೂರು

ನಾಯಿ ಕೆಮ್ಮಿಗೆ ಔಷಧಿ
(WHOOPING COUGH REMEDY)
ಗುಬ್ಬರ್, ಉಬ್ಬಸ, ಪರಿಣಾಮಕಾರಿ ಮತ್ತು ಗಲಾಯಿಕಟ್ಟೆ (TONSIL) ಖಾಯಿಲೆಗೆ ಔಷಧಿ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಕೊಟ್ಟಿರುತ್ತಾರೆ. ಬೆಲೆ ರೂ 2-0-0
ಆರ್. ಎಸ್. ಪಂಡಿತ್
ರಾಮಗೋಪಾಲ ವೈದ್ಯಶಾಲೆ
ದಿವಾನರ ರಸ್ತೆ, ಮೈಸೂರು

ರಮಣಿ ಹಲ್ಲುಪುಡಿ
ಅಮೂಲ್ಯವಾದ ಮೂಲಿಕೆಗಳಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟಿರುವ ಮೇಲ್ಕಂಡ ಹಲ್ಲುಪುಡಿಯಿಂದ ಅನೇಕ ಗುಣ ಹೊಂದಿದ್ದಾರೆ. ಬೆಲೆ 0-1-6 ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್ ಕೊಡಲಾಗುವುದು.
ಬೆಂಗಳೂರು ಚಿಕ್ಕಪೇಟೆ ಅಗ್ರಹಾರದಲ್ಲಿರುವ ಶ್ರೀ ಸಿ. ಎಲ್. ಬ್ರಹ್ಮಣ್ಯಂರವರ ಅಂಗಡಿಯಲ್ಲಿ ಹಲ್ಲುಪುಡಿಯನ್ನು ಪಡೆಯಬಹುದು
ರಮಣಿ ಟ್ರೇಡಿಂಗ್ ಕಂಪೆನಿ,
ಗಾಲೇರಿ, ಕೃಷ್ಣಮೂರ್ತಿಪುರಂ,
ಮೈಸೂರು

Edited, printed and published by A. R. Nagarajan, at Sadhvi Press, Subbiah Road, Mysore

ರಿಜಿ ನಂ 792 [illegible] ಬಿಡಿಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೯] ಗುರುವಾರ ೨೮-೯-೫೦ [ಸಂಚಿಕೆ ೫೯

ಈ ಸಾರಿ ದಸರಾ ಮೆರವಣಿಗೆ ಇಲ್ಲ

ಅಸ್ವಾಸ್ಥ್ಯ ಪರಿಹಾರ ನಿಧಿಗೆ ೩ ಸಾವಿರ ರೂ.

ಜಿಲ್ಲಾ ಬೋರ್ಡಿನ ಸಭೆಯ ತೀರ್ಮಾನ

ಮೈಸೂರು ೨೮

ಮೈಸೂರು ಜಿಲ್ಲಾ ಬೋರ್ಡಿನ ತ್ರೈಮಾಸಿಕ ಸಾಧಾರಣ ಸಭೆಯು [illegible] ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ರಾಜ್ಯದಲ್ಲಿ [illegible] ನಿಧಿಗೆ ೩ ಸಾವಿರ ರೂ.ಗಳನ್ನು ಮಂಜೂರು ಮಾಡಲಾಯಿತು. [illegible] ಜಿಲ್ಲಾ ಬೋರ್ಡಿನ [illegible] ತೀರ್ಮಾನಿಸಲಾಯಿತು.

[illegible]

ಹಾವಿನ ಹಣದಿಂದ ಪರಿಹಾರ

ಅಸ್ವಾಸ್ಥ್ಯ ನಿಧಿಗೆ ೩೩೫ ರೂ.

[illegible]

ಉತ್ತರ ಕೊರಿಯಕ್ಕೆ ಕಮ್ಯೂನಿಸ್ಟರು ಪಲಾಯನವೇ?

ದಕ್ಷಿಣ ಕೊರಿಯದಲ್ಲಿ ಇನ್ನೂ ೩೦ ಸಾವಿರ ಕಮ್ಯೂನಿಸ್ಟ್ ಸೈನಿಕರಿರುವರೆಂದೂ, ಅವರು [illegible] ಉತ್ತರ ಕೊರಿಯಕ್ಕೆ [illegible] ಹೋಗಲು ಪ್ರಯತ್ನಿಸುತ್ತಿರುವರೆಂದೂ [illegible] ಕಳೆದ [illegible] ೧೭೦೦ ಕಮ್ಯೂನಿಸ್ಟರು ಸೆರೆಯಾಗಿದ್ದಾರೆ.

ಆಳನ್ನು ಹೊಡೆದುದಕ್ಕೆ ಆಂಗ್ಲ ಮಹಿಳೆಯರಿಗೆ ದಂಡ

[illegible] ಮ್ಯಾಜಿಸ್ಟ್ರೇಟರಾಗಿದ್ದ [illegible] ಮನೆಯ [illegible] ಅವನನ್ನು [illegible] ಹೊಡೆದುದಕ್ಕಾಗಿ [illegible] ದಂಡ ವಿಧಿಸಿರುವರು.

ಅಂತರಾಷ್ಟ್ರೀಯ ವಿತ್ತ ಸಂಸ್ಥೆಯಲ್ಲಿ ಸ್ಥಾನ

[illegible]

[illegible]

[illegible]

[illegible]

[illegible]

ಈಸೂರಿನ ನೊಂದವರಿಗೆ ಪರಿಹಾರ ದ್ರವ್ಯ ಹೆಚ್ಚಿತು

ಬೆಂಗಳೂರು ೨೮

[illegible]

ಕಾಶ್ಮೀರದಲ್ಲಿ ಯುದ್ಧಕಾಲದ ಪರಿಸ್ಥಿತಿ

ಕಾಶ್ಮೀರದಲ್ಲಿ ಯುದ್ಧಕಾಲದ [illegible]

ಆಹಾರ ೩ ತಿಂಗಳಿಗೆ ಮಾತ್ರ ಸಾಲುವುದು

ಮುಖ್ಯ ಮಂತ್ರಿಗಳ ಪತ್ರಿಕಾ ಗೋಷ್ಠಿ

ಸ್ವಂ ಸು ಪ್ರೋ] ಬೆಂಗಳೂರು ೨೮

ಮುಖ್ಯ ಮಂತ್ರಿ ಶ್ರೀ [illegible] ಈ ದಿನ ಬೆಳಗ್ಗೆ ಪತ್ರಿಕಾ ಗೋಷ್ಠಿಯೊಂದನ್ನು ಸೇರಿಸಿ ಆಹಾರವು ಇನ್ನು ೩ ತಿಂಗಳಿಗೆ ಮಾತ್ರ ಸಾಲುವುದೆಂದೂ [illegible] ಮೈಸೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ [illegible] ಆಹಾರ ಧಾನ್ಯದ [illegible] ಕೇಂದ್ರದ [illegible] ಎಂದರು.

[illegible]

ಸಜೀವ ಸರ್ಪಗಳನ್ನು ತಿನ್ನುವ ಸಂಸಾರ

[illegible]

ದಸರಾ ಮೆರವಣಿಗೆ ಇಲ್ಲ

ಸ್ವಂ ಸು ಪ್ರೋ] ಬೆಂಗಳೂರು ೨೮

ಈ ಸಾರಿ ನವರಾತ್ರಿ ಸಂದರ್ಭದಲ್ಲಿ [illegible] ಮೆರವಣಿಗೆ [illegible] ಪ್ರಧಾನ [illegible] ಶ್ರೀ [illegible] ಈ ದಿನ ಪತ್ರಿಕಾ [illegible] ತಿಳಿಸಿದರು.

ಯಾಲಕಪ್ಪಾಚಾರ್ಯರ ನಿಧನ

ಮೈಸೂರು ೨೮

[illegible]

ಜನತಾ ರಾಮಾಯಣದ ಆರಂಭೋತ್ಸವ

ಮೈಸೂರು ೨೮

ಕನ್ನಡ ಪ್ರಾಧ್ಯಾಪಕರಾದ ಶ್ರೀ ಕೆ ವಿ ಪುಟ್ಟಪ್ಪನವರು ಅಕ್ಷರ ಪ್ರಚಾರ ಸಮಿತಿಗಾಗಿ ರಚಿಸಿರುವ ಜನತಾ ರಾಮಾಯಣದ ಆರಂಭೋತ್ಸವವನ್ನು ಪ್ರಧಾನ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಬರುವ ತಿಂಗಳು ನೆರವೇರಿಸುವರು. ಶ್ರೀ ಎಲ್ ಎಸ್ ವೆಂಕಾಜಿರಾಯರು ರಾಮಾಯಣ ಪ್ರಕಟಣೆಗೆ ೫೦೦೦ ರೂ ಗಳನ್ನು ಉದಾರವಾಗಿ ಅಕ್ಷರ ಪ್ರಚಾರ ಸಮಿತಿಗೆ ಇತ್ತಿರುವರು

ಉಚ್ಚ ಶಿಕ್ಷಣಕ್ಕಾಗಿ ವಿದೇಶ ಪ್ರವಾಸ

ಮಹಾರಾಜಾ ಕಾಲೇಜಿನ ಚರಿತ್ರೆಯ ಲೆಕ್ಚರರಾದ ಶ್ರೀ ಎಂ ವಿ ಕೇಶವಾದ್ರಿಯವರು ಲಂಡನ್ನಿನ ಸ್ಕೂಲ್ ಆಫ್ ಓರಿಯಂಟಲ್ ಇನ್‌ಸ್ಟಿಟ್ಯೂಟಿನಲ್ಲಿ ಉಚ್ಚ ಶಿಕ್ಷಣ ಪಡೆಯಲು ೩ ವರ್ಷಗಳ ಕಾಲ ಬ್ರಿಟಿಷ್ ಕೌನ್ಸಿಲ್ಲಿನ ವಿದ್ಯಾರ್ಥಿ ವೇತನವನ್ನು ಪಡೆದು ವ್ಯಾಸಂಗಕ್ಕಾಗಿ ನಿನ್ನೆ ದಿನ ಮೈಸೂರಿನಿಂದ ಲಂಡನ್ನಿಗೆ ತೆರಳಿದರು.

ಪತ್ರಿಕೋದ್ಯೋಗಿಗಳ ಸಮ್ಮೇಳನಕ್ಕೆ ಸಹಾಯ

ಪತ್ರಿಕೋದ್ಯೋಗಿಗಳ ಸಮ್ಮೇಳನಕ್ಕೆ ೧೦೦ ಬಿ ಕೆ ರಾಮಸ್ವಾಮಿಯವರು, ಮತ್ತು ಇಂದ್ರಭವನದ ಮಾಲೀಕರಾದ ಶ್ರೀ ಬದರಿ ಪ್ರಸಾದರು ೫೦ ರೂ ಗಳನ್ನು ಕೊಟ್ಟಿರುತ್ತಾರೆ

"ಮಕ್ಕಳ ದಿನಾಚರಣೆ"

ಕೇಂದ್ರ ಸರ್ಕಾರದವರ ಸಲಹೆಯನ್ನು ಪಡೆದು ಭಾರತ ರಾಷ್ಟ್ರೀಯ ಸಮಿತಿಯವರು ಪ್ರತಿ ವರ್ಷವೂ ಭಾರತಾದ್ಯಂತ ಮಕ್ಕಳ ದಿನಾಚರಣೆಯನ್ನು ನಡೆಸಲು ನಿರ್ಧರಿಸಿರುತ್ತಾರೆ ವಿಶ್ವ ಸಂಸ್ಥೆಯ ಸಮಿತಿಯ ವಿವಿಧ ಕಾರ್ಯಕ್ರಮಗಳಲ್ಲಿ ಮಕ್ಕಳ ಆರೋಗ್ಯ ಮತ್ತು ಸೌಖ್ಯವನ್ನು ಹೆಚ್ಚಿಸುವುದೂ ಒಂದು ಅಂಗವಾಗಿದೆ. ಬರುವ ತಿಂಗಳು ೫ನೇ ತಾರೀಖು ಭಾರತದಲ್ಲೆಲ್ಲಾ ಈ ದಿನಾಚರಣೆಯನ್ನು ನಡೆಸಲಾಗುವುದು ವಿಶ್ವ ಸಂಸ್ಥೆಯ ಮಕ್ಕಳ ನಿಧಿಗೆ ಹಣ ಕೂಡಿಸಲು ರಾಗದಗಳ ಅಂಚೆಗಳ ಧ್ವಜ ಮಾರಲಾಗುವುದು ಆ ದಿನ ಶಾಲಾ ಕಾಲೇಜುಗಳಿಗೆ ರಜವನ್ನು ಕೊಡಲಾಗುವುದು

ಬಿ ಎಂ. ಶ್ರೀನಿವಾಸಯ್ಯನವರಿಗೆ ಬಿನ್ನವತ್ತಳೆ

ಬೆ ಗಳೂರಿನ ಬಿ ಎಂ ಎಸ್ ಇಂಜಿನಿಯರಿಂಗ್ ಕಾಲೇಜು ಮುಂತಾದ ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸಿ ಕೀರ್ತಿಶಾಲಿಗಳಾಗಿರುವ ಧರ್ಮ ಪ್ರಕಾಶ ಬಿ ಎಂ ಶ್ರೀನಿವಾಸಯ್ಯನವರಿಗೆ ದಸರಾ ಮಹೋತ್ಸವದ ಸಮಯದಲ್ಲಿ ಬಿನ್ನವತ್ತಳೆಯನ್ನು ಮೈಸೂರಿನ ಪುರಜನರು ಅರ್ಪಿಸಲು ಪೌರ ಸಭಾಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತ ಸಮಿತಿಯನ್ನು ರಚಿಸಲಾಗಿದೆ

ಗಂಗಾಧರ ದೇಶಪಾಂಡೆಯವರಿಗೆ ಗೌರವಸಮಾರಂಭ

"ಕರ್ನಾಟಕ ಕೇಸರಿ"ಎಂದು ಹೆಸರುಗೊಂಡಿರುವ ಗಂಗಾಧರರಾವ್ ದೇಶಪಾಂಡೆಯವರ ೭೦ನೇ ವರ್ಷದ ಸಮಯದಲ್ಲಿ ಪುಣೆಯ ಮಹಾರಾಷ್ಟ್ರದವರು ಬರುವ ತಿಂಗಳು ಒಂದು ಗೌರವ ಸಮಾರಂಭವನ್ನು ಏರ್ಪಡಿಸಲಿದ್ದಾರೆ

ಅತ್ಯಂತ ಎತ್ತರದ ಮನುಷ್ಯನ ಮತ್ತಷ್ಟು ಬೆಳವಣಿಗೆ

ಪ್ರಪಂಚದ ಅತ್ಯಂತ ಎತ್ತರವಾದ ಮನುಷ್ಯನೆಂದು ಪ್ರಖ್ಯಾತನಾಗಿರುವ ಇಂಗ್ಲೆಂಡಿನ ಟೆಡ್ ಇವಾನ್ಸ್ ಎಂಬಾತನು ಹಿಂದಿನ ಜನಗಣತಿಯಿಂದ ಇಲ್ಲಿಯವರೆಗೆ ೬ ಅಂಗುಲದಷ್ಟು ಹೆಚ್ಚಾಗಿ ಬೆಳೆದು ಈಗ ೯ ಅಡಿ ೯½ ಅಂಗುಲ ಎತ್ತರವಿದ್ದಾನೆ ಅವನ ತೂಕ ಅಗಿ ೩೬೦ ರೂ ಗಳ ಖರ್ಚಾಗುತ್ತದೆ

ರಿಕಾರ್ಡ್ ಸಮಿತಿಗೆ ಮೈಸೂರಿನವರು

ಕೇಂದ್ರ ಸರ್ಕಾರದ ಹಿಸ್ಟಾರಿಕಲ್ ರಿಕಾರ್ಡ್ಸ್ ಸಮಿತಿಗೆ ಮಹಾರಾಜಾ ಕಾಲೇಜಿನ ಚರಿತ್ರೆಯ ಪ್ರೊಫೆಸರಾದ ಶ್ರೀ ವಿ ರಾಘವೇಂದ್ರರಾಯರನ್ನು ಒಬ್ಬ ಸದಸ್ಯರನ್ನಾಗಿ ನೇಮಿಸಲಾಗಿದೆ. ಈ ಸಮಿತಿಯ ಸಭೆಯು ನಾಗಪುರದಲ್ಲಿ ಡಿಸೆಂಬರಿನಲ್ಲಿ ನಡೆಯುವುದು

ಗಣಪತಿ-ಮುಂಗಳಾರತಿ ಮತ್ತು ಸರ್ ಎಂ. ವಿ. ಯವರ ಶ್ರೀಮುಖಾಶೀರ್ವಾದ

ಮೈಸೂರು ೨೮

ಸದ್ವಿದ್ಯಾ ಪಾಠಶಾಲೆಯಲ್ಲಿ ಗಣಪತಿ ಮಂಗಳಾರತಿ ಉತ್ಸವವು ಜರುಗಿತು. ವಿದ್ಯಾನಿಲಯ ಧರ್ಮ ಪ್ರಕಾಶ ಎ. ಎಸ್. ಸ್ವಾಮಿ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರು ಬಾಲಕರಿಗೆ ಬಹುಮಾನಗಳನ್ನು ಕೊಟ್ಟರು. ಸಂಸ್ಥೆಯ ಮಹಾ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯನವರ ೯೦ನೇ ವರ್ಷದ ವರ್ಧಂತಿಯು ನಡೆದ ಸಂದರ್ಭದಲ್ಲಿ ಅವರಿಗೆ ಧೀರ್ಘಾಯು ಆರೋಗ್ಯ ಮತ್ತು ಮೈಸೂರು ರಾಜ್ಯ ಮಹತ್ತರವಾದದ್ದಾಗಿ ಶ್ರೇಯಸ್ಸನ್ನು ಕೋರುವ ನಿರ್ಣಯವು ಅಂಗೀಕರಿಸಲ್ಪಟ್ಟಿತು

ರಾಜಕಮಲ್, ಮೈಸೂರು

—:ಶೀಘ್ರದಲ್ಲಿ ಪ್ರದರ್ಶನ:—

29-9-50ರಿಂದ 3 ದಿನ ಮಾತ್ರ

ಸಿಕಂದರ್

ಪಾತ್ರ. - ಸೊಹ್ರಾಬ್ ಮೋದಿ, ವನಮಾಲಾ, ಪೃಥ್ವಿರಾಜ

ಚಾಮುಂಡೇಶ್ವರಿ ಟಾಕೀಸ್

28-9-50ರಿಂದ ಪ್ರತಿದಿನ 3 ಆಟಗಳು

ಮೈ ಅಬಲಾ - - ನಹೀ ಹೂಂ

(ಹಿಂದಿ)

ಭೂಮಿಕೆ:- ಶಾಂತಾ ಆಪ್ಟೆ, ಮತ್ತು ರಾಜಾ ಪರಾಂಜಪ್ಯೆ.

ಒಲಂಪಿಯಾ

29-9-50ರಿಂದ ಪ್ರತಿ ದಿನ 3 ಆಟಗಳು

ಧರ್ಮೇಂದ್ರ, ಮಧುಬಾಲಾ, ಶ್ಯಾಮ ಪಾತ್ರವಹಿಸಿರುವ

* ಮೇಲಾ *

ಶೀಘ್ರದ ಪ್ರದರ್ಶನ :: 29-9-50ರಿಂದ ಸುರೇಂದ್ರ, ರೆಹಾನ, ಪಾತ್ರವಹಿಸಿರುವ

ಗರೀಬ್

ರಘುಲಾಲ್ & ಕೋ.,

ಔಷಧ ವ್ಯಾಪಾರಿಗಳು,

ಸಯ್ಯಾಜಿರಾವ್ ರಸ್ತೆ, ಮೈಸೂರು.

ರಘುಲಾಲ್ ಅಂಡ್ ಕಂಪೆನಿ

(ಬೆಂಗಳೂರು)

ಔಷಧ ವ್ಯಾಪಾರಿಗಳು,

70 ಅವೆನ್ಯೂ ಶ್ರೀನಿವಾಸಾಚಾರ್ಯರ ರಸ್ತೆ, ಬೆಂಗಳೂರು.

SRI GAYATHRI

TALKIES

From 28—9—50 for 3 days
Daily 3 Shows
Warner's
a new adventurous drama

COLORADO - - TERRITORY

With.-Joel Mc Crea, and Virginia Mayo

Coming.-
THE HEIRESS

JAMES MOTOR CYCLES

211 P and C Z 125 C E
Orders now booked.
V. S RAJAGOPALAN & Co (B) Ltd.,
66-3 New Sayyaji Rao, Rd
MYSORE (Branch)

ಪ್ರಭಾ

29-9-50ರಿಂದ ಅವೀಸ 2 ನೇವಾರ

ಪ್ರತಿ ದಿನ 3 ಆಟಗಳು

ಎ ಎಸ್ ಪಿ ರವರ ಹಿಂದಿ ಚಿತ್ರ

- ಆರ್ ಜೂ -

ಪಾತ್ರ:-ದಿಲೀಪ್ ಕುಮಾರ್, ಕಾಮಿನಿ ಕೌಶಲ್, ಗೋಪ್, ಶಶಿಕಲಾ, ಲಲಿತಾ,

ಸಂಗೀತ :- ಅನಿಲ್ ಬಿಸ್ವಾಸ್

ನಿರ್ದೇಶಕ:- ಶಹೀದ್ ಲತೀಫ್ (ಅದ್ವಿ ಪ್ರಸ್ತಾಪ)

'Edited, printed and published by A R Nagarajan,at Sadhvi Press, D Subbiah Road, Mysore.

29-9-50ರಿಂದ ಪ್ರಾರಂಭ ದಿನವಹಿ 3 ಆಟಗಳು

ರಾಜಕಮಲ್ ಮತ್ತು ಶ್ರೀ ಗಣೇಶಾ

ಚಿತ್ರ ಮಂದಿರಗಳಲ್ಲಿ

ಶ್ರೀ ಕೃಷ್ಣ ಪ್ರೊಡಕ್ಷನ್ಸಿನವರ ನೃತ್ಯ ಸಂಗೀತಗಳಿಂದ ಸೊಬಗಿಸುವ ಅಮೋಘ ಸಾಮಾಜಿಕ ಚಿತ್ರ

ಚಂದ್ರಿಕ ✻ ಚಂದ್ರಿಕ

(ತಮಿಳು)

ಭೂಮಿಕೆಯಲ್ಲಿ:- ವಿ. ಎನ್. ಜಾನಕಿ, ಮಾಲತಿ, ಲಲಿತ-ಪದ್ಮಿನಿ

ಟಿ. ಎಸ್. ಬಾಲಯ್ಯ ಮತ್ತು ಸಾರಂಗಪಾಣಿ

R. V PICTURES RELEASE

ಪುಸ್ತಕ ಸಂ 792 ॥ವಂದೇ ಮಾತರಂ॥ [illegible]

ಸಂಪುಟ ೯] ಶುಕ್ರವಾರ ೨೯-೯-೫೦ [ಸಂಚಿಕೆ ೬೦

ದಕ್ಷಿಣ ಕೊರಿಯದಿಂದ ಕೆಂಪು ಸೈನ್ಯದ ವಾಪಸು

ಶ್ರೀ ಯಾಲಕ್ಕಮ್ಮಾಚಾರ್ಯರ ನಿಧನ

ಮೈಸೂರು ೨೮

ರಾಜಧಾನಿಯ ಚಾಮುಂಡೇಶ್ವರಿ ಗಣೇಶ ಟ್ರಸ್ಟೀಗಳ ಮಾಲೀಕರು ಮತ್ತು ಪ್ರಮುಖ ಕಂಟ್ರಾಕ್ಟರೂ ಆಗಿದ್ದ ಶ್ರೀ ಯಾಲಕ್ಕಮ್ಮಾಚಾರ್ಯರು ಕೆಲವು ದಿನಗಳಿಂದಲೂ ವ್ಯಾಧಿಯಿಂದ ನರಳುತ್ತಿದ್ದು ನಿನ್ನೆ ಸಂಜೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನೂ ಮತ್ತು ಅವರ ಬಂಧು ಬಳಗದವರಿಗೆ ಈ ದುಃಖವನ್ನು ಸಹಿಸಲು ಶಕ್ತಿಯನ್ನೂ ಕೊಡಲೆಂದು ಪ್ರಾರ್ಥಿಸುತ್ತೇವೆ.

ಅಸ್ಸಾಂ ನಿಧಿಗೆ ಸಹಾಯ

ಅಸ್ಸಾಂ ಭೂಕಂಪ ಪರಿಹಾರ ನಿಧಿಗೆ [illegible] ಕಂಡ ಮಹನೀಯರು [illegible] ಸಹಾಯ ಮಾಡಿರುತ್ತಾರೆ:- ಶ್ರೀ ಆರ್. ವೆಂಕಟಪ್ಪ ೧೦೨ ರೂ, ಶ್ರೀಗಳಾದ ಟಿ. ಎನ್. ಸಿಂಗಪ್ಪ, [illegible] ಸುಬ್ಬಣ್ಣ, [illegible] ಮಲ್ಲಣ್ಣ, ಕೆ. ವೀರಭದ್ರ ಮೊದಲಿಯಾರ್, ಮುನಿಸ್ವಾಮಿ [illegible] ಸಾಹೇಬರು ತಲಾ ೧೦ ರೂ [illegible] [illegible]

ಕಂಪನಿಯವರಿಗೆ ಜುಲ್ಮಾನೆ

[illegible] ದಿನ ೬೦ ರೂ ಜುಲ್ಮಾನೆ, ತಪ್ಪಿದರೆ ಒಂದು ವಾರ ಸಾದಾ ಸಜವನ್ನು ಶಿಕ್ಷೆ ವಿಧಿಸಲ್ಪಟ್ಟಿತು.

ಬೆಳಗೊಳದ ಕಾರ್ಖಾನೆ ನೌಕರರಿಗೆ ಮತ್ತೆ ಕೆಲಸ

ಬೆಳಗೊಳದ ಮೈಸೂರು ಕೆಮಿಕಲ್ಸ್ [illegible] ಕಾರ್ಖಾನೆಯು [illegible] ಸಂಬಳ [illegible] ಕೆಲಸಕ್ಕೆ [illegible] ಅಧ್ಯಕ್ಷ ಶ್ರೀ ಎ. ಸುಬ್ರಹ್ಮಣ್ಯ ಅಯ್ಯರವರು ತಿಳಿಸಿರುತ್ತಾರೆ.

ಅಂತರ ರಾಷ್ಟ್ರೀಯ ನೇತ್ರ ವೈದ್ಯ ಪ್ರವೀಣರ ಆಗಮನ

[illegible] ಬೆಂಗಳೂರು, ಮೈಸೂರುಗಳಿಗೆ ಭೇಟಿ ಕೊಡುವರು.

ಅಖಂಡ ಹರಿಕಥಾ ಪ್ರವಚನ

ರಾಜಧಾನಿಯ ಚಾಮುಂಡಿ ಪುರದ [illegible] ಸರ್ವರಿಗೂ ಆಹ್ವಾನವುಂಟು.

ವಿಮಾನ ಕಾರ್ಖಾನೆ ಮುಷ್ಕರ ಮುಂದುವರಿಯುತ್ತಿದೆ

ಸ್ವಂ ಸು ಪ್ರೋ] ಬೆಂಗಳೂರು ೨೮

ವಿಮಾನ ಕಾರ್ಖಾನೆಯಲ್ಲಿ ಈ ದಿನದಿಂದ ಕೆಲಸವನ್ನು ಆರಂಭಿಸುವುದಾಗಿ [illegible] ಈ ದಿನ ಕಾರ್ಖಾನೆಯಲ್ಲಿ ಕೇವಲ ೨೦೦ ಜನರು ಮಾತ್ರ ಕೆಲಸಕ್ಕೆ ಬಂದಿದ್ದರು. [illegible] ಕಾರ್ಮಿಕರ ಪ್ರಚಾರವೂ ನಡೆಯುತ್ತಿದೆ.

೦ ಪ್ರಧಾನ [illegible] ಅಸ್ಸಾಂ ಪರಿಹಾರ ನಿಧಿಗೆ ಇದುವರೆಗೆ [illegible] ಸರ್ಕಾರದಿಂದ [illegible] ರೂ. [illegible] ಕೊಂಡು ಗೊತ್ತಾಗಿದೆ.

ಹೊಗೆ ತುಂಬಿದ ಕೊಠಡಿಯಲ್ಲಿ ದಂಪತಿಗಳ ಮರಣ

ಬೆಂಗಳೂರಿನ [illegible] ಒಂದು [illegible] ಮನೆಯಲ್ಲಿ ಮಲಗಿದ್ದ [illegible] ದಂಪತಿಗಳು ಹೊಗೆಯ ದೆಸೆಯಿಂದ [illegible] ಹೊಗೆಯು ತುಂಬಿ [illegible] ತಿಳಿದುಬಂದಿದೆ.

ಹೈದ್ರಾಬಾದಿನ ಮಾಜಿ ತಹಸೀಲ್ದಾರರಿಗೆ ಫಾಸಿ ಶಿಕ್ಷೆ

ಹೈದರಾಬಾದಿನ [illegible] ಮಾಜಿ ತಹಸೀಲ್ದಾರರಾದ ಮೀರ್ ಅಕ್ಬರ್ ಅಲಿ ಖಾನ್ ಎಂಬುವರು [illegible] ಫಾಸಿ ಶಿಕ್ಷೆ ವಿಧಿಸಿದರೆಂದು ವರದಿಯಾಗಿದೆ.

ಅವಿಲಾಷಿತವಾದುದರಿಂದ ಕನ್ಯೆಯು ಮತ್ತೊಬ್ಬ ವರನಿಗೆ

[illegible] ವಿವಾಹ ಮಾಡಲಾಯಿತೆಂದು ಗೊತ್ತಾಗಿದೆ.

ಬಾಡಿಗೆ ಸೈಕಲ್ ಮಾರಿದ ಅಧಿಕಾರಿಗೆ ಜುಲ್ಮಾನೆ

[illegible] ಬೈಸಿಕಲ್ಲನ್ನು ಬಾಡಿಗೆಗೆ ಪಡೆದು [illegible] ಸಾದಾ ಸಜ ವಿಧಿಸಲ್ಪಟ್ಟಿರುತ್ತಾರೆ [illegible] ನ್ಯಾಯವಾದಿಗಳು [illegible]

ಭಾರತದಲ್ಲಿ ಎರಡು ಪಕ್ಷಗಳ ಸರ್ಕಾರವಿರಬೇಕು

ಸರ್ ಎಂ. ವಿಶ್ವೇಶ್ವರಯ್ಯನವರ ಸೂಚನೆ

ಸ್ವಂ ಸು ಪ್ರೋ] ಬೆಂಗಳೂರು ೨೮

